THE WINNER'S ACADEMY GOKAK

ಬನವಾಸಿಯ ಕದಂಬರು



Above Shakuntala Honda Showroom, Pathan Building. 2nd Floor, Byalikata, Gokak – 591307
Mob - 9036109325, 7619116183

- **ಕದಂಬರ ರಾಜಧಾನಿ** :– ಬನವಾಸಿ
- **ರಾಜ್ಯ ಲಾಂಛನ** :– ಸಿಂಹ
- **ರಾಜ್ಯ ಧ್ವಜ** :– ವಾನರ ಧ್ವಜ
- **ಇವರು ಶುದ್ಧ ಬ್ರಾಹ್ಮಣರು** :– ಬನವಾಸಿಯನ್ನು ಮಹಾಭಾರತದ ಕಾಲದಲ್ಲಿ ವೈಜಯಂತಿ ಅಥವಾ ವನವಾಸಿ ಎಂದು ಕರೆಯುತ್ತಾರೆ.
- **ಸಾಮ್ರಾಜ್ಯದ ಸ್ಥಾಪಕ** :– ಮಯೂರವರ್ಮ ಪ್ರಸಿದ್ಧ ದೊರೆ ತಂದೆ– ಬಂಧಶೇನ್‌ರು.
- **ಇವರ ತಾತನ ಹೆಸರು** :– ವೀರಶಮರು
- ಕರ್ನಾಟಕದಲ್ಲಿ ಸ್ಥಾಪನೆಯಾದ ಮೊದಲ ಕನ್ನಡ ರಾಜ್ಯ ಮನೆತನ.
- ಗ್ರೀಕ್ ಚರಿತ್ರೆಕಾರ ಟಾಲೆಮಿ ತನ್ನ ಭೂಗೋಳಶಾಸ್ತ್ರ ಎಂಬ ಗ್ರಂಥದಲ್ಲಿ ಬನವಾಸಿಯ ಹೆಸರನ್ನು ಉಲ್ಲೇಖಿಸಿದ್ದಾನೆ. ಆತ ಅದನ್ನು ಬೈಜಾಂಟಿಯನ್ ಎಂದು ಕರೆದಿದ್ದಾನೆ.
- ಬನವಾಸಿ ನಾಡಿಗೆ ಪುರಾತನ ಕಾಲದಲ್ಲಿ “ಕುಂತಳ ದೇಶ” ಎಂದು ಕರೆಯಲಾಗಿದೆ.
- ಮಯೂರವರ್ಮನು ಚಿತ್ರದುರ್ಗದ ಚಂದ್ರವಳ್ಳಿಯಲ್ಲಿ ಶಾಸನವನ್ನು ಕೆತ್ತಿಸಿದನು.
- ಚಂದ್ರವಳ್ಳಿ ಶಾಸನ ಪ್ರಾಕೃತ ಭಾಷೆಯಲ್ಲಿದೆ.

• ಮಯೂರವರ್ಮ:– (ಕ್ರಿ.ಶ 345 ರಿಂದ 360)

ಮಯೂರವರ್ಮನು (ಶರ್ಮ) ಕಂದಬವಂಶದ ಸ್ಥಾಪಕ ಹಾಗೂ ಪ್ರಸಿದ್ಧ ದೊರೆ. ಬನವಾಸಿ ಅವನ ರಾಜಧಾನಿ. ಮಯೂರವರ್ಮನು ತನ್ನ ಗುರು (ತಾತ) ವೀರಶರ್ಮನೊಡನೆ ಅಂದಿನ ಪ್ರಸಿದ್ಧ ವಿದ್ಯಾಕೇಂದ್ರವಾದ ಪಲ್ಲವರ ರಾಜಧಾನಿಯಾದ ಕಂಚಿಗೆ ಉನ್ನತ ಶಿಕ್ಷಣ ಪಡೆಯಲು ನಖಿಲ ಪ್ರವಚನಕ್ಕಾಗಿ ಹೋಗಿದ್ದನು. ಆಗ ಪಲ್ಲವರ ದೊರೆ “ಶಿವಸ್ಕಂದವರ್ಮನು” ಅಶ್ವಮೇಧಯಾಗ ತಯಾರಿಯಲ್ಲಿದ್ದು ಅತ್ಯಂತ ದುರಂಹಕಾರದಿಂದ ಮೆರೆಯುತ್ತಿದ್ದನು. ಆಗ ಪಲ್ಲವರ ಅಶ್ವ ಸೇನಿಕರಾದ ಪಹರೆ ರಾಜ ಭಟ್ಟರಿಗೊ, ವೇದಾಂಗ ವಿದ್ಯಾ ವಿಶಾರನಾದ ವಿಪ್ರ ಮಯೂರವರ್ಮನಿಗೂ ಜಗಳವಾಯಿತು. ತರುಣ ಬ್ರಾಹ್ಮಣಾದ ಮಯೂರಶರ್ಮ ಕಂಚಿಯ ನದಿಯಲ್ಲಿ ಸ್ನಾನ ಮಾಡುತ್ತಿದ್ದಾಗ ಪಲ್ಲವರ ಪಹರೆಗಳು ಅವನ ಮಡಿ ಬಟ್ಟೆಗಳನ್ನು ತುಳಿದುಕೊಂಡು ಹೋದರು. ಇದ್ದರಿಂದ ಮಯೂರವರ್ಮನಿಗೆ ತುಂಬಾ ಅವಮಾನವಾಯಿತು. ಈ ಬಗ್ಗೆ ಶಿವಸ್ಕಂದವರ್ಮನಲ್ಲಿ ನ್ಯಾಯ ಬೇಡಿದ ಮಯೂರವರ್ಮನು ತಿರಸ್ಕೃತನಾದನು. ಆಗ ಕದಂಬರ ರಾಜವನ್ನು ಕಟ್ಟಿ ಬೆಳೆಸಿದನು. ಹೀಗೆ “ದರ್ಭೆಯನ್ನು ಹಿಡಿಯುವ ಕೈಯಲ್ಲಿ ಖಡ್ಗವನ್ನು

ಹಿಡಿದ ಮಯೂರಶರ್ಮನು ಬ್ರಾಹ್ಮಣ ಧರ್ಮವನ್ನು ಬಿಟ್ಟು ಕ್ಷತ್ರಿಯನಾಗಿ ಮಯೂರವರ್ಮನಾದನು”.

➢ ರಾಜ್ಯದ ವಿಸ್ತಾರ :-

ಉತ್ತರದಲ್ಲಿ (ಮಾಳ್ವ)

ಪಶ್ಚಿಮದಲ್ಲಿ (ಅರಬ್ಬಿ ಸಮುದ್ರ)

ಪೂರ್ವದಲ್ಲಿ (ಗಯಾ)

ದಕ್ಷಿಣದಲ್ಲಿ (ಕಂಚಿ)

- ಕರ್ನಾಟಕದ ಪ್ರಥಮ ಚಕ್ರವರ್ತಿಯೆಂದು ಮಯೂರವರ್ಮನನ್ನು ಕರೆಯಲಾಗುತ್ತದೆ.

➢ ಕಂಗವರ್ಮ :- (ಕ್ರಿ.ಶ 361 ರಿಂದ 370)

- ಮಯೂರವರ್ಮನ ನಂತರ ಅವನ ಮಗ ಕಂಗವರ್ಮನು ಪಟ್ಟಕ್ಕೆ ಬಂದನು. ವಾಕಾಟಕ ದೊರೆ ವಿಂಧ್ಯಸೇನನಿಂದ ಪರಾಜಿತನಾಗಿ ಕುಂತಳವನ್ನು ಕಳೆದುಕೊಂಡನು.

➢ ಭಗೀರಥವರ್ಮ:- (ಕ್ರಿ.ಶ 370 ರಿಂದ 400)

- ಕಂಗವರ್ಮನ ನಂತರ ಅವನ ಮಗ ಭಗೀರಥವರ್ಮನು ಅಧಿಕಾರಕ್ಕೆ ಬಂದು 30 ವರ್ಷಗಳ ಕಾಲ ಆಳಿದನು.
- ಗುಪ್ತರ ದೊರೆ 2ನೇ ವಿಕ್ರಮಾದಿತ್ಯನ ಸಮಕಾಲೀನವನಾಗಿದ್ದು ತನ್ನ ಆಸ್ಥಾನದ ಕವಿ ಕುಂತಳಕ್ಕೆ ಕಳುಹಿಸಿದನು. ಅನಂತರ ರಘುವರ್ಮನು 20 ವರ್ಷ ರಾಜ್ಯ ಆಳಿದನು. “ರಘುಪರಶಿವನೆಂದು” ಕರೆಸಿಕೊಂಡು ಇವನು ಶ್ರೇಷ್ಠ ಕವಿಯಾಗಿದ್ದನು.

➢ ರಘುಪತಿವರ್ಮ:– (ಕ್ರಿ.ಶ 400 ರಿಂದ 425)

- ಭಗೀರಥನ ನಂತರ ಅವನ ಹಿರಿಯ ಮಗ ರಘುಪತಿವರ್ಮನು ಅಧಿಕಾರಕ್ಕೆ ಬಂದನು. ಇನ್ನೋಬ್ಬ ಮಗನಾದ ಕಾಕುಸ್ಥವರ್ಮನು ಯುವರಾಜನಾದನು. ರಘುಪರಶಿವನೆಂದು ಕರೆಸಿಕೊಂಡ ಈತ ಸ್ವತಂತ್ರನಾಗಲು ಹವನಿಸಿದ ಸಣ್ಣಪುಟ್ಟ ರಾಜರನ್ನು ಸೋಲಿಸಿ ತನ್ನ ಅಧಿನಕ್ಕೆ ತೆಗೆದುಕೊಂಡನು.
- ಈತ ಗುಪ್ತ ದೊರೆಯ 2ನೇ ಚಂದ್ರಗುಪ್ತನ ಸಮಕಾಲೀನವನಾಗಿದ್ದನು.

➢ ಕಾಕುಸ್ಥವರ್ಮ:– (ಕ್ರಿ.ಶ 435 ರಿಂದ 450)

- ಕದಂಬರ ಅರಸರಲ್ಲಿಯೇ ಅತ್ಯಂತ ಪ್ರಸಿದ್ಧ ದೊರೆ. ಈತ ವೀರಯೋಧನಲ್ಲದೆ ದಕ್ಷ ಆಡಳಿತಗಾರನು. ಉದಾರಿಯೂ, ಕವಿಯು ಆಗಿದ್ದನು. ಇವನು ಮಯೂರವರ್ಮನಿಂದ ಪಡೆದ ಕದಂಬ ಸಾಮ್ರಾಜ್ಯವನ್ನು ಸಾಕಷ್ಟು ವಿಸ್ತರಿಸಿದನು. ಅನೇಕ ಸಣ್ಣ ಪುಟ್ಟ ರಾಜರನ್ನು ಸೋಲಿಸಿ ಪಲ್ಲವರೊಡನೆ ಕಾದಾಡಿದನು.
- ಬಿರುದುಗಳು:– ಧರ್ಮರಾಜ & ಧರ್ಮ ಮಹಾರಾಜ, "ಇವನನ್ನು ಕದಂಬ ಕುಲದ ಕುಲ ಭೂಷಣ" ಎಂದು ಕರೆಯಲಾಗುತ್ತದೆ. ಕನ್ನಡದ ಮೊದಲ ಶಾಸನ ಹಲ್ಮಿಡಿ ಶಾಸನ ಹಾಗೂ ಹಲಸಿ ಶಾಸನಗಳನ್ನು ಕೆತ್ತಿಸಿದನು. (ಕ್ರಿ.ಶ 450 ರಲ್ಲಿ)

➢ ಶಾಂತಿವರ್ಮ:– (ಕ್ರಿ.ಶ 450 ರಿಂದ 475)

- ಕಾಕುಸ್ಥವರ್ಮನ ನಂತರ ಅವನ ಮಗ ಶಾಂತಿವರ್ಮನು ಅಧಿಕಾರಕ್ಕೆ ಬಂದ.
- ಇವನೇ ತಾಳಿಗುಂದದ ಶಾಸನದ ಕರ್ತೃ ಇವನನ್ನು "ವೈಜಯಂತಿ ತಿಲಕ" ಸಮಗ್ರ ಕರ್ನಾಟಕದ ದೇಶದ ರಾಜ್ಯಪಾಲನೆಂದು ಬಣ್ಣಿಸಿದರು.

➢ ಮೃಗೇಶವರ್ಮ:– (ಕ್ರಿ.ಶ 475 ರಿಂದ 490)

- ಶಾಂತಿವರ್ಮನ ಮಗನಾದ ಮೃಗೇಶವರ್ಮನು ದಕ್ಷ ಆಡಳಿತಗಾರ. ಕಲಾ ಪೋಷಕನು ವಿದ್ವಾಂಸನು ನ್ಯಾಯನಿಷ್ಠನೂ ಆಗಿದ್ದನು. ಇವನು ಗಂಗ ಮತ್ತು ಪಲ್ಲವರ ದಾಳಿಯನ್ನು ಸಮರ್ಥವಾಗಿ ಎದುರಿಸಿದನು. ಗಂಗರಾಜ ವಿಷ್ಣುಗೋಪ, ಪಲ್ಲವರ ರಾಜ 3ನೇಯ ಸ್ಕಂದವರ್ಮನು ಇವನಿಂದ ಸೋತರು.

➢ ಮಾಂದಾತೃವರ್ಮ:– (ಕ್ರಿ.ಶ 490 ರಿಂದ 495)

- ಮೃಗೇಶವರ್ಮನ ಮರಣಕಾಲಕ್ಕೆ ಅವನ ಮಗ ರವಿವರ್ಮ ಇನ್ನೂ ಬಾಲಕನಾಗಿದ್ದರಿಂದ ಉಚ್ಚಂಗಿ ಶಾಖೆಯ ಕುಮಾರವರ್ಮನ ಮಗ ಮಾಂದಾತೃವರ್ಮ ಅಧಿಕಾರಕ್ಕೆ ಬಂದನು.

➢ ರವಿವರ್ಮ:– (ಕ್ರಿ.ಶ 495 ರಿಂದ 530)

- ವೀರಯೋಧನು ಯುದ್ಧ ಪ್ರತಾಪಿಯಾದ ರವಿವರ್ಮನು ಶ್ರೀಪರ್ವತ ಶಾಖೆಯ ಗೆದ್ದು ವಿಷ್ಣುವರ್ಮನನ್ನು ಸೋಲಿಸಿದನು. ಉಚ್ಚಂಗಿಯನ್ನು ಗೆದ್ದು ಅದನ್ನು ಬನವಾಸಿಗೆ ಸೇರಿಸಿಕೊಂಡನು. ಇವನ ಕಾಲದಲ್ಲಿ ಹಲಸಿ, ಉಚ್ಚಂಗಿ, ಕದಂಬರ ಉಪರಾಜಧಾನಿಗಳಾಗಿದ್ದವು.

➢ ಹರಿವರ್ಮ:– (ಕ್ರಿ.ಶ 530 ರಿಂದ 547)

- ರವಿವರ್ಮನ ನಂತರ ಅವನ ಮಗ ಹರಿವರ್ಮ ಅಧಿಕಾರಕ್ಕೆ ಬಂದನು.
- ಈತ ಶಾಂತಿ ಪ್ರಿಯನಾಗಿದ್ದನು.
- ಬಾದಾಮಿಯ ಚಾಲುಕ್ಯರ ದೊರೆ 1ನೇ ಪುಲಕೇಶಿ ಕದಂಬರನ್ನು ಓಡಿಸಿ ಅವರ ಪ್ರದೇಶದ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸಿದನು.

➢ 2ನೇ ಕೃಷ್ಣ:– ಈ ಮನೆತನದ ಕೊನೆಯ ದೊರೆ.

- ಒಂದನೇಯ ಪುಲಕೇಶಿ 2ನೇ ಕೃಷ್ಣಾವರ್ಮನನ್ನು ಸೋಲಿಸಿ ಚಾಲುಕ್ಯರ ಪ್ರಾಬಲ್ಯ ಮೆರೆದನು.

➢ **ಕಂದಾಯ:–** ಭೂಕಂದಾಯವು ರಾಜ್ಯದ ಮುಖ್ಯ ಆದಾಯದ ಮೂಲವಾಗಿತ್ತು. ಒಟ್ಟು ಉತ್ಪನ್ನದ 1/6 ರಷ್ಟು ಭಾಗ ರಾಜ್ಯಕ್ಕೆ ಕಂದಾಯವಾಗಿ ಸೇರುತ್ತಿತ್ತು. ರೈತರ ಮೇಲೆ ಹೆಚ್ಚಿನ ಕಂದಾಯ ಭಾರ ಇರಲಿಲ್ಲ. ಅದು "ಪೆರ್ಜುಂಕ" (ಹೊರೆಗಳ ಮೇಲಿನ ತೆರಿಗೆ) "ಬಿಲ್‌ಕೊಡೆ" ವ್ಯಾಪಾರ ತೆರಿಗೆ, "ಕಿರುಕುಳ" ಸಾಗಾಣಿಕೆ ತೆರಿಗೆ ಎಂಬ ಮೂರು ವಿಧದ ತೆರಿಗೆಗಳನ್ನು ವಿಧಿಸಲಾಗುತ್ತಿತ್ತು. ಪದ್ಮಂಟಕ ಪಣ ಮತ್ತು ಗದ್ಯಾಣ, ದ್ರುಮ್ಮ, ಸುವರ್ಣ, ಎಂಬ ನಾಣ್ಯಗಳನ್ನು ಚಲಾವಣೆಯಲ್ಲಿದ್ದವು.

➢ **ನ್ಯಾಯಾಡಳಿತ:–** ಅರಸನು ನ್ಯಾಯಾಂಗದ ಮುಖ್ಯ ಅಧಿಕಾರಿ ಅವನ ಆಸ್ಥಾನವೇ ಸರ್ವೋಚ್ಛ ನ್ಯಾಯಾಲಯವಾಗಿತ್ತು.

➢ **ಸಾಮಾಜಿಕ ಪರಿಸ್ಥಿತಿ:–** ಕದಂಬ ಸಾಮ್ರಾಜ್ಯವು ವರ್ಣಾಶ್ರಮ ಧರ್ಮದ ಆಧಾರದ ಮೇಲೆ ರೂಪಗೊಂಡಿತು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ 4 ವರ್ಣಗಳು ರೂಢಿಯಲ್ಲಿದ್ದವು.

- ಪಿತೃ ಪ್ರಧಾನವಾದ ಅವಿಭಕ್ತ ಕುಟುಂಬವು ಸಮಾಜದ ಅಡಿಪಾಯವಾಗಿತ್ತು. ತಂದೆಯೇ ಕುಟುಂಬದ ಮುಖ್ಯಸ್ಥ, ಆಸ್ತಿಯ ಹಕ್ಕು ಗಂಡು ಮಕ್ಕಳಿಗಿತ್ತು. ಸತಿ ಪದ್ಧತಿ ರೂಢಿಯಲ್ಲಿತ್ತು. ಅಂತರ ಜಾತಿ ವಿವಾಹ ರೂಢಿಯಲ್ಲಿ ಇರಲಿಲ್ಲ. ಏಕ ಪತ್ನಿತ್ವ ಪದ್ಧತಿಯು ಜನಪ್ರಿಯವಾಗಿತ್ತು. ಬಹು ಪತ್ನಿತ್ವ ಶ್ರೀಮಂತ ಹಾಗೂ ಅರಸರಲ್ಲಿ ರೂಢಿಯಲ್ಲಿತ್ತು.

➢ **ಆರ್ಥಿಕ ಪರಿಸ್ಥಿತಿ:–** ವ್ಯವಸಾಯವೇ ಕದಂಬರ ಕಾಲದ ಜನರ ಮುಖ್ಯ ವೃತ್ತಿ ಅಂದು ಸರ್ವಸಮಸ್ಯೆ, ತ್ರಿಭೋಗ, ತಾಳವೃತ್ತಿ, ಎಂಬ ಮೂರು ವಿಧವಾದ ಭೂಕಂದಾಯ ಪದ್ಧತಿಗಳಿದ್ದವು. ಕೃಷಿಕರು ತಮ್ಮದೇ ಶ್ರೇಣಿಗಳನ್ನು ಹೊಂದಿದ್ದು ಅದನ್ನು "ಪೇಂಟೆ" ಶ್ರೇಣಿಗಳೆಂದು ಕರೆಯುತ್ತಿದ್ದರು.

➢ ಕದಂಬರ ಸಾಂಸ್ಕೃತಿಕ ಕೊಡುಗೆಗಳು :–

- ಧರ್ಮ:– ಕದಂಬರು ವೈದಿಕ ಧರ್ಮದ ಅವಲಂಬಿತರಾಗಿದ್ದರು. ಪರಮತ ಸಹಿಷ್ಣುಗಳಾಗಿದ್ದರು. ಶೈವ, ವೈಷ್ಣವ, ಜೈನ, & ಬೌದ್ಧ ಮತಗಳನ್ನು ಸಮನಾಗಿ ಪ್ರೋತ್ಸಾಹಿಸಿದರು.
- ಆರಂಭ ಕದಂಬ ರಾಜರಿಗೆ "ತಾಳಗುಂದದ ಪ್ರಣೇಶ್ವರ" ಆರಾಧ್ಯದೈವರಾಗಿದ್ದರು.
- ಕಾಕುಸ್ಥವರ್ಮನು ಬ್ರಾಹ್ಮಣ ಧರ್ಮದ ಆರಾಧಕನಾಗಿ ತಾಳಗುಂದ ಸುತ್ತ 144 ಗ್ರಾಮಗಳನ್ನು ಬ್ರಾಹ್ಮಣರಿಗೆ ದಾನ ಮಾಡಿದ ಸಂಗತಿ ತಾಳಗುಂದದ ಶಾಸನದಲ್ಲಿ ಕಂಡು ಬರುತ್ತದೆ.
- ಕ್ರಿ.ಶ 7ನೇ ಶತಮಾನದಲ್ಲಿ ಬನವಾಸಿಗೆ ಭೇಟಿ ಮಾಡಿದ ಬೌದ್ಧಯಾಂತ್ರಿಕ ಹೂಯೆನ್‌ತ್ಸಾಂಗ್ ಅಲ್ಲಿ 100 ಬೌದ್ಧ ಸಂಘರಾಮಗಳು, 3 ಸ್ತೂಪಗಳು & 10000 ಭಿಕ್ಷುಗಳು ಇದ್ದರೆಂದು ತಿಳಿಸಿದ್ದಾನೆ.

➤ **ಶಿಕ್ಷಣ:–** ಕದಂಬರ ಕಾಲದಲ್ಲಿ ಗುರುಕುಲ ಶಿಕ್ಷಣ ಪದ್ಧತಿ ರೂಢಿಯಲ್ಲಿತ್ತು. ಕದಂಬರ ರಾಜರು ವೈದಿಕ ಶಿಕ್ಷಣಕ್ಕೆ ಪ್ರೋತ್ಸಾಹಿಸಿದರು. ಬಳ್ಳಿಗಾವೆ, ತಾಳಗುಂದ, ಬನವಾಸಿ ಅಗ್ರಹಾರಗಳಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಊಟೋಪಚಾರವಿತ್ತು. ಘಟಿಕ ಸ್ಥಾನಗಳು ಉನ್ನತ ಚರ್ಚೆಯ ಹಾಗೂ ಜ್ಞಾನ ಸಿದ್ಧಿಯ ಕೇಂದ್ರಗಳಾಗಿದ್ದವು.

➤ ಕದಂಬರ ಆಡಳಿತ:–

- ಕೇಂದ್ರಾಡಳಿತ:– ಕದಂಬ ರಾಜರು ಆಡಳಿತ ನಡೆಸಲು ಮಂತ್ರಿಗಳನ್ನು ಸೇನಾಧಿಪತಿಗಳನ್ನು ನೇಮಿಸಿಕೊಂಡಿದ್ದರು. ರಾಜಧಾನಿಗೆ ದೈನಂದಿನ ಆಡಳಿತದಲ್ಲಿ ಸಹಕಾರ ನೀಡಲು ಪಂಚಪ್ರಧಾನರೆಂಬ ಮಂತ್ರಿ ಮಂಡಲವಿತ್ತು.

- **ಪಂಚ ಪ್ರಧಾನರು :–**

1. ಪ್ರಧಾನ – ಪ್ರಧಾನಮಂತ್ರಿ, ಕೋಶಾಧಿಕಾರಿ
2. ಮನೆವೆರ್ಗಡೆ – ಅರಮನೆಯ ಪಾರುಪತ್ಯಗಾರ
3. ತಂತ್ರಪಾಲ – ವಿದೇಶಾಂಗ ವ್ಯವಹಾರ ಮಂತ್ರಿ
4. ಕ್ರಮುಖ ಪಾಲ – ತಾಂಬೂಲ ಪಾರುಪತ್ಯಗಾರ ಅಥವಾ ನಿರ್ವಾಹಕ
5. ಸಭಾಕಾರ್ಯ ಸಚಿವ – ಮಂತ್ರಿಮಂಡಲದ ಪ್ರಧಾನ ಕಾರ್ಯದರ್ಶಿ

- **ಪ್ರಾಂತ್ಯಾಡಳಿತ:–** ರಾಜ್ಯವನ್ನು ಆಡಳಿತದ ಅನುಕೂಲಕ್ಕಾಗಿ 4 ಮಂಡಲ ಅಥವಾ ಪ್ರಾಂತ್ಯಗಳಾಗಿ ವಿಂಗಡಿಸಲಾಗಿತ್ತು. ಅವುಗಳ ರಾಜಧಾನಿಗಳೆಂದರೆ

1. ಶ್ರೀಪರ್ವತ
2. ಹಲಸಿ
3. ಉಚ್ಚಂಗಿ
4. ಬನವಾಸಿ

ಪ್ರಾಂತ್ಯಗಳ ಆಡಳಿತ ನೋಡಿಕೊಳ್ಳಲು ರಾಜ ಕುಟುಂಬದವರನ್ನೇ ರಾಜಪ್ರತಿನಿಧಿಗಳಾಗಿ ನೇಮಿಸಲಾಗುತ್ತಿತ್ತು. ಪ್ರತಿ ಪ್ರಾಂತ್ಯವನ್ನು ನಾಡುಗಳಾಗಿ ನಾಡುಗಳನ್ನು ಹಲವು ಕಂಪನಗಳಾಗಿ ವಿಂಗಡಿಸಲಾಗುತ್ತಿತ್ತು. ಕಂಪನಗಳನ್ನು ಗ್ರಾಮಗಳಾಗಿ ವಿಂಗಡಿಸುತ್ತಿದ್ದರು. ಗ್ರಾಮದ ಮುಖ್ಯಸ್ಥನನ್ನು ಗ್ರಾಮಿಣಿ ಎಂದು ಕರೆಯುತ್ತಿದ್ದರು.

* **ಸಾಹಿತ್ಯ:–** ಕದಂಬರ ಕಾಲದಲ್ಲಿ ಪ್ರಾಕೃತ, ಸಂಸ್ಕೃತ & ಕನ್ನಡ ಭಾಷೆಗಳು ಸಮೃದ್ಧವಾಗಿ ಬೆಳೆದವು. ಮಯೂರವರ್ಮನ "ಚಂದ್ರವಳ್ಳಿ" ಶಾಸನ ಪ್ರಾಕೃತ ಭಾಷೆಯಲ್ಲಿದೆ.
* ಶಾಂತಿವರ್ಮನ ಕವಿಕುಬ್ಜನಿಂದ ಕೆತ್ತಿಸಿದ "ತಾಳಗುಂದ" ಶಾಸನ ಸಂಸ್ಕೃತ ಭಾಷೆಯಲ್ಲಿದೆ. (ಕರ್ನಾಟಕದಲ್ಲಿ ದೊರೆತ ಅತ್ಯಂತ ಪ್ರಾಚೀನ ಸಂಸ್ಕೃತ ಶಾಸನವಾಗಿದೆ.)
* ಹಲ್ಮಿಡಿ ಶಾಸನ ಕನ್ನಡದ ಮೊಟ್ಟ ಮೊದಲ ಶಾಸನ.

* **ಕಲೆ & ವಾಸ್ತು ಶಿಲ್ಪ :–**

ಚಾಲುಕ್ಯರ ಮುನ್ನ ನಿರ್ಮಾಣವಾದ ಕದಂಬರ ದೇವಾಲಯಗಳನ್ನು ಕದಂಬ ಶೈಲಿ ಎಂದು ಮೊರ್ಯಾಸರವರು ಕರೆದಿದ್ದಾರೆ. ದಕ್ಷಿಣ ಭಾರತದಲ್ಲಿ ಮೊಟ್ಟ ಮೊದಲ ಪ್ರಾಚೀನ ದೇವಾಲಯಗಳ ಕಲಾಕೃತಿಯಲ್ಲಿ ತಾಳಗುಂದ ಪ್ರಣವೇಶ್ವರ ದೇವಾಲಯ ಒಂದು.

ಹಲಸಿ:– ಕಲ್ಲೇಶ್ವರ (ತ್ರಿಕೂಟ) ಹಟ್ಟಿಕೇಶ್ವರ, ಸುವರ್ಣೇಶ್ವರ, ರಾಮೇಶ್ವರ, ವರಾಹ, ನರಸಿಂಹ ದೇವಾಲಯಗಳು & ಜೈನ ಬಸದಿ.


ತಾಳಗುಂದ	:–	ಪ್ರಣವೇಶ್ವರ (ದ್ವಿಕೂಟ) ದೇವಾಲಯ (ಶಿವಮೊಗ್ಗ)
ಹಳೆಬನವಾಸಿ	:–	ಆದಿ ಮಧುಕೇಶ್ವರ ದೇವಾಲಯ (ಉತ್ತರ ಕನ್ನಡ)
ದೊಡ್ಡ ಗದ್ದವಳ್ಳಿ	:–	ಲಕ್ಷ್ಮೀ ನಾರಾಯಣ ದೇವಾಲಯ (ಮಂಡ್ಯ)
ಗುಡ್ನಾಪುರ	:–	ಜೈನ ಬಸದಿ (ಬನವಾಸಿ)
ದೇವಗಾಂವೆ	:–	ಕಮಲ ನಾರಾಯಣ ದೇವಾಲಯ (ಧಾರವಾಡ ಹತ್ತಿರ)
ಅರವಲೆಮ್	:–	ಮೂರು ಹಿಂದೂ ಗುಹಾಂತರ ದೇವಾಲಯ (ಗೋವಾ)

* **ಶಿಲ್ಪಕಲೆ:–** ಕದಂಬರು ಶಿಲ್ಪ ಕಲೆಗೆ ಹೆಸರಾಗಿದ್ದು ಅದಕ್ಕೆ ಉದಾಹರಣೆಗಳೆಂದರೆ ಗೋವಾದ ಬೃಹತ್ ಭೈರವನ ವಿಗ್ರಹ, ಸೊರಬ ತಾಲ್ಲೂಕಿನ ಜಾಂಬೆಹಳ್ಳಿಯ ಮಹಿಷ ಮರ್ದಿನಿ ದುರ್ಗಾ ವಿಗ್ರಹಗಳು ಹಲಸಿಯ ಲಕ್ಷ್ಮೀ ನಾರಾಯಣ ವಿಗ್ರಹಗಳು ಮುಖ್ಯವಾದವುಗಳಾಗಿವೆ.

THE WINNER'S ACADEMY GOKAK

ಶಾತವಾಹನರು

- ಕ್ರಿಪೂ 235 ರಿಂದ ಕ್ರಿಶ 225 ರವರೆಗೆ ಆಡಳಿತವನನು ನಡೆಸಿದರು.
- ಮೌರ್ಯರ ಪತನದ ನಂತರ ಶಾತವಾಹನರ ವಂಶ ಸ್ಥಾಪನೆಗೊಂಡಿತು.
- ಸ್ಥಾಪಕ – ಸಿಮುಖ
- ರಾಜಧಾನಿಗಳು – ಪೈಠಾನ, ಅಮರಾವತಿ,



ಸಾಮ್ರಾಜ್ಯ ವಿಸ್ತರಣೆ

ಉತ್ತರ (ಸೌರಾಷ್ಟ್ರ & ಮಾಳ್ವ)

(ಕೊಂಕಣ) ಪಶ್ಚಿಮ —— ಪೂರ್ವ (ಬಿಕಾರ)

ದಕ್ಷಿಣ (ಕೃಷ್ಣಾನದಿ ಅಥವಾ ಬನವಾಸಿ)

ಹೀಗಾಗಿ ಅವನಿಗೆ "ತ್ರೈಸಮುದ್ರಪಿತವಾಹನ"। ಎಂಬ ಬಿರುದು ಬಂದಿತು. ಪಶ್ಚಿಮ ಪ್ರಭು, ವಿಂಧ್ಯವರೆಯ ಪ್ರತಿಷ್ಠಾಣ ಪ್ರಭು, ರಾಜ ರಾಜ, ಮಹಾರಾಜ, ಶಾತವಾಹನ ಕುಲ ಪ್ರತಿಷ್ಠಾಪಕ ಎಂಬ ಬಿರುದನ್ನು ಹೊಂದಿದ್ದನು.

ಗೌತಮಿ ಪುತ್ರ ತನ್ನನ್ನೆ ಬ್ರಾಹ್ಮಣರ ಏಕಮೇವ ರಕ್ಷಕ ಎಂದು ಕರೆದುಕೊಂಡಿದ್ದ.

- **ವಸಿಷ್ಠ ಪುತ್ರ ಪುಲಮಾವಿ (ಕ್ರಿ.ಶ 130 ರಿಂದ 159)**

ಇವನು ಆಂಧ್ರ ದೇಶವನ್ನು ಗೆದ್ದು "ಆಂಧ್ರ ರಾಜ" ಎಂದು ಕರೆಸಿಕೊಂಡನು. "ದಕ್ಷಿಣ ಪಥೇಶ್ವರ" ಎಂಬ ಬಿರುದು ಬಂದಿತ್ತು. ಅಮರಾವತಿ ಬೌದ್ಧ ಸ್ತೂಪ, ನಿರ್ಮಿಸಿದನಲ್ಲದೆ ನವನಗರ ನಿರ್ಮಿಸಿ "ನವನಗರ ಸ್ವಾಮಿ" ಎಂದು ಬಿರುದು ಧರಿಸಿದನು.

ಯಜ್ಞಶ್ರೀ ಶಾತಕರ್ಣಿ :– ಶಾತವಾಹನರ ಕಡೆಯ ಪ್ರಬಲ ದೊರೆ

- **1ನೇ ಶಾತಕರ್ಣಿ (ಕ್ರಿ.ಪೂ 194 ರಿಂದ 128 ರವರೆಗೆ)**

– ಆರಂಭದ ಶಾತವಾಹನರಲ್ಲಿ ಅತೀ ಪ್ರಬಲ ದೊರೆ

– ಈತ ಮಹಾರಾಷ್ಟ್ರದ ಮಹಾರಥಿಯ ಮಗಳಾದ ನಾಗನಿಕಳನ್ನು ವಿವಾಹವಾದನು. ನಾಗನಿಕಳು ಹೊರಡಿಸಿದ ನಾನಘಾಟ ಗುಹಾಶಾಸನ ಇವನ ಸಾಧನೆಯನ್ನು ಹೇಳುತ್ತದೆ.

- **ಇವನ ಸಾಧನೆಗಳು :–**

ಅನೂಪ, ನಾಸಿಕ, ಪೂರ್ವ ಮಾಳ್ವ, ಬಿರಾರ್, ವಿದರ್ಭ, ಹೈದ್ರಾಬಾದ ಹಾಗೂ ಮಧ್ಯ ಭಾರತಗಳನ್ನು ಗೆದ್ದು ಸಾಮ್ರಾಜ್ಯವನ್ನು ವಿಂಧ್ಯ ಪರ್ವತದಿಂದ ಕೊಂಕಣದವರೆಗೆ ವಿಸ್ತರಿಸಿದನು. ಈ ಜ್ಞಾಪಕಾರ್ಥವಾಗಿ ಎರಡು ಅಶ್ವಮೇಧ ಹಾಗೂ ಒಂದು ರಾಜಸೂಯಯಾಗಗಳನ್ನು ಆಚರಿಸಿದನು.

ಇವನು ಪ್ರತಿಷ್ಠಾನ ರಾಜಧಾನಿ ನಿರ್ಮಿಸಿದನು.

ಬಿರುದುಗಳು :–

– ದಕ್ಷಿಣ ಪಥಪತಿ

– ದಕ್ಷಿಣದ ಪಥ ಸಾರ್ವಭೌಮ

– ಅಪ್ರತಿಹತ್ ಎಂಬ ಬಿರುದುಗಳು ಇದ್ದವು.

- **2ನೇ ಶಾತಕರ್ಣಿ (ಕ್ರಿ.ಪೂ 166 ರಿಂದ 111)**

– ಇವನು ಮಾಳ್ವವನ್ನು ಶುಂಗರಿಂದ ಕಿತ್ತುಕೊಂಡನು.

– ಪೂರ್ವದ ತೆಲಂಗಾಣದ ಮೇಲೆ ಆಕ್ರಮಣ

– ಪಶ್ಚಿಮದ ಮಹಾರಾಷ್ಟ್ರ ಹಾಗೂ ಮಧ್ಯ ಭಾರತದವರೆಗೆ ಸಾಮ್ರಾಜ್ಯವನ್ನು ವಿಸ್ತರಿಸಿದನು. ಅಲ್ಲದೆ ವಿಂಧ್ಯ ಪರ್ವತದಲ್ಲಿ ಇದ್ದ ಅನೂಪ, ಆಸ್ಮಾಕ. ಅಸಿಕ, ಮುಲಕ ,ಕುಕೂರು, ಅವಂತಿ, ಕಣ್ಣಾಗಿರಿ, ಮಹೀಂದ್ರ ಮತ್ತು ವಿದರ್ಭಗಳನ್ನು ಗೆದ್ದನು.

- **ನಾಸಿಕ ಶಾಸನ :–**

ಗೌತಮಿ ಪುತ್ರ ಶಾತಕರ್ಣಿಯ ತಾಯಿ ಗೌತಮಿ ಬಾಳಶ್ರೀ ಕೆತ್ತಿಸಿದ ನಾಸಿಕ ಶಾಸನ ಇವನ ಸಾಧನೆಯನ್ನು ವಿವಸುತ್ತದೆ.

- **ನಾನ್‌ಘಾಟ ಶಾಸನ :-**

- ಇವನನ್ನು ರಾಯ ಸಿಮುಖ ಎಂದು ವರ್ಣಿಸಿದೆ.
- ಜೈನ ಗ್ರಂಥ ಒಂದು ಶಾತವಾಹನ ಎಂದು ಹೆಸರು ಕೊಟ್ಟಿದೆ.

- **ಕೃಷ್ಣ :- (ಕ್ರಿ.ಪೂ 212 ರಿಂದ 195 ರವರೆಗೆ)**

- ಕೃಷ್ಣನು ಸಾಮ್ರಾಜ್ಯವನ್ನು ನಾಸಿಕ್‌ದವರೆಗೆ ವಿಸ್ತರಿಸಿದನು.
- ಬೌದ್ಧ ಧರ್ಮದಲ್ಲಿ ಆಸಕ್ತಿಯನ್ನು ಹೊಂದಿದ್ದು ನಾಸಿಕನಲ್ಲಿ ಬೌದ್ಧ ಗುಹಾಲಯವನ್ನು ಸ್ಥಾಪಿಸಿದನು.

- **ಹಾಲ (ಕ್ರಿ.ಶ 20 ರಿಂದ 78)**

- ಹಾಲನು ಶಾತವಾಹನರ 17ನೇ ದೊರೆ ಈತ ಶಾಂತಿ ಪ್ರಿಯ ಅರಸ.
- ಇತನು ಸಾಹಿತಿ ಮತ್ತು ಗಣ್ಯ ವಿದ್ವಾಂಸನಾಗಿದ್ದನು.
- ಈತನ "ಗಾಥಾಸಪ್ತಸತಿ" ಎಂಬ ಶೃಂಗಾರ ಕಾವ್ಯವನ್ನು ರಚಿಸಿದನು. ಇದು ಪ್ರಾಕೃತ ಭಾಷೆಯಲ್ಲಿದೆ 700 ಶ್ಲೋಕಗಳಿಂದಬ ಕೂಡಿದೆ. ಕ್ರಿ.ಶ 78 ರಲ್ಲಿ ಪ್ರಾರಂಭವಾದ ಶಾಲಿವಾಹನ ಅಥವಾ ಶಕ ವರ್ಷದ ಸ್ಥಾಪಕ ಹಾಲನೆಂದು ಹಲವು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಇತನ ಸಾಮ್ರಾಜ್ಯ ದಕ್ಷಿಣಕನ್ನಡ ಬಳ್ಳಾರಿ ಧಾರವಾಡ ಜಿಲ್ಲೆಯವರಿಗೆ ವಿಸ್ತರಿಸಿತ್ತು.

- **ಗೌತಮಿ ಪುತ್ರ ಶಾತಕರ್ಣಿ :- (ಕ್ರಿ.ಶ 106 ರಿಂದ 130)**

ಗೌತಮಿ ಪುತ್ರ ಶಾತಕರ್ಣಿ ಶಾತವಾಹನರ ವಂಶದಲ್ಲಿ ಅತ್ಯಂತ ಪ್ರಸಿದ್ಧ ದೊರೆಯಾಗಿದ್ದಾನೆ. ಇವನು ಶಾತವಾಹನರ 23ನೇ ದೊರೆಯಾಗಿ ಆಡಳಿತ ಮಾಡಿದನು.

- **ದಿಗ್ವಿಜಯಗಳು :-**

1. ಶಕರ ಮೇಲೆ ದಂಡಯಾತ್ರೆ :-

ಶಕರ ರಾಜ ನಹಪಾನ & ಅವನ ಅಳಿಯ ಉಸವದತ್ತರನ್ನು ಕೊಂದು ಶಕ್ಷತ್ರಪರನ್ನು ನಿರ್ಮೂಲನೆ ಮಾಡಿದ. ಶಕರರಿಂದ ಸೌರಾಷ್ಟ್ರ ಕೊಂಕಣ ಮಹಾರಾಷ್ಟ್ರದ ಮಾಳ್ವಗಳನ್ನು ಕಿತ್ತಕೊಂಡನು.

• ಮೂಲಾಧಾರಗಳು:–

1. ನಾಸಿಕ್ ಶಾಸನ
2. ಅನಾಮಿಕ ಬರರೆದಿರುವ "ದಿ. ಪೆರಿಪ್ಲಸ್ ಆಫ್ ಎರಿತ್ರಿಯನ್ ಸಿ"
3. ಹಾಲನ "ಗಥಾಸಪ್ತಪತಿ"
4. ಗುಣಾಢ್ಯನ "ಬೃಹತ ಕಥಾ"

• ಇವರ ಮೂಲ :–

1. ತೆಲಗು ಮೂಲ:–

ಕೃಷ್ಣಾ & ಗೋದಾವರಿ ನದಿ ಕಣವೆಗಳ ನಡುವಿನ ಶ್ರೀಕಾಕುಲಂ, ಗುಂಟೂರು, ದಾನಕಟಕ, ಪೈಠಾನ್, ಅವರ ನಲೆಗಳಾಗಿದ್ದವು. ಅದಕ್ಕಾಗಿ ಇವರನ್ನು ಆಂಧ್ರರೆಂದು ಗ್ರೀಕ್ ಬರಹಗಾರ ಪ್ಲಿನಿ ತೆಲಗು ಮೂಲದವರೆಂದು ಹೇಳಿದ್ದಾನೆ. ಶಾತ ಎಂದರೆ ತೆಲಗುವಿನಲ್ಲಿ "ಕುದುರೆ" ಎಂದರ್ಥ ಶಾತವಾಹನರು ಕುದುರೆಗಳನ್ನು ವಾಹನವಾಗಿ ಬಳುಸುತ್ತಿದ್ದರು, ಎಂದು ಇತಿಹಾಸಕಾರ ಹೇಳಿದ್ದಾರೆ.

2. ಕನ್ನಡ ಮೂಲ :–

ಅವರ ಶಾಸನಗಳು ನಾಣ್ಯಗಳು ಹೆಚ್ಚಾಗಿ ಕರ್ನಾಟಕದ ಭಾಗದಲ್ಲಿ ದೊರೆತಿವೆ. ತಾಳಗುಂದ, ಹಾಂಥಿಗುಪಾ & ಗಿರನಾರ್ ಶಾಸನಗಳು ಅವರನ್ನು ಶಾತವಾಹನರೆಂದು ಅವರು ಕನ್ನಡಿಗರೆಂದು ತಾಳಗುಂದದ ಪ್ರಣವೇಶ್ವರ ದೇವರ ಆರಾಧಕರೆಂದು ಹೇಳಿವೆ. ಶಾತವಾಹನ ಎಂದರೆ ವೇಗವಾಗಿ ಚುರುಕಾಗಿ ಚಲಿಸುವ ಕುದುರೆ ಎಂದರ್ಥ ಶಾತಕರ್ಣಿ ಎಂದರೆ ಹರಿತವಾದ ಕಿವಿವುಳ್ಳವ ಎಂದರ್ಥ

• ರಾಜಕೀಯ ಇತಿಹಾಸ

- ಸಿಮುಖ (ಕ್ರಿ.ಶ 235 ರಿಂದ 212 ರವರೆಗೆ)
- ಸಿಮುಖನು ಶಾತವಾಹನರ ಸ್ಥಾಪಕ
- ಹಳೆಯ ಹೈದ್ರಾಬಾದನ ಔರಂಗಾಬಾದ್ ಜಿಲ್ಲೆಯ ಪೈಠಾನ್ ಇವನ ರಾಜಧಾನಿ
- ಇತನು ಕಣ್ವ ಸಂತತಿಯ ಕೊನೆಯ ದೊರೆ ಶೂವರ್ಮನನ್ನು ಕೊಂದು ಸ್ವಾತಂತ್ರ್ಯ ಘೋಷಿಸಿಕೊಂಡನು.
- ಇವನು ದಖ್ಖನಿನಲ್ಲಿ ಮೌರ್ಯರ ಅಧಿಪತ್ಯವನ್ನು ಕೊನೆಗಾಣಿಸಿದನ್ನಲ್ಲದೆ ಶುಂಗರನ್ನು ಕಣ್ವರನ್ನು ಸೋಲಿಸಿದನು.

4. <u>ವಿಹಾರಗಳು</u> :– ಬೌದ್ಧ ಬಿಕ್ಷುಗಳ ವಾಸಸ್ಥಳಗಳೇ ವಿಹಾರಗಳು ಶಾತವಾಹನರ ಕಾಲದ ವಿಹಾರಗಳು, ನಾಸಿಕ, ಕಾರ್ಲೆ, ಕೊಂಡಾನ, ಬಾಜ, ಬೇಡ್ಸಾ & ಅಜಂತಗಳಿವೆ.

– ಅಜಂತದ 12ನೇ ಗುಹೆ ಏಕ ಅಂತಸ್ತಿನ ಅತ್ಯಂತ ಪ್ರಾಚೀನ ವಿಹಾರವಾಗಿದೆ.

– ಅಜಂತ ಗುಹೆಗಳ & ಗೋಡೆಗಳ ಮೇಲೆ ಜಾತಕ ಕಥೆಗಳ ಶಿಲ್ಪ ಕೃತಿಗಳಿವೆ.

– ವಿಹಾರಗಳನ್ನು ಪ್ರಾರ್ಥನೆ & ಧ್ಯಾನಕ್ಕಾಗಿ ಬಳಸುತ್ತಿದ್ದರು.

5. <u>ಸ್ತೂಪಗಳು</u>:– ಬುದ್ದನ ಅವಶೇಷಗಳ ಮೇಲೆ ಗುಮ್ಮಟಾಕೃತಿಯಲ್ಲಿ ನಿರ್ಮಿಸಿದ ಕಲಾಕೃತಿಗಳೇ ಸ್ತೂಪಗಳು.

– ಶಾತವಾಹನರು ನಿರ್ಮಿಸಿದ ಸ್ತೂಪಗಳು ಹೆಚ್ಚಾಗಿ ಆಂಧ್ರದಲ್ಲಿವೆ.

– ಅಮರಾವತಿ ನಾಗಾರ್ಜುನಕೊಂಡ, ಗೋಲಿ, ಜಗಯ್ಯ ಪೇಟಭಟ್ಟಿ ಪ್ರೋಲು ಘಂಟಸಾಲಗಳಲ್ಲಿ ಸ್ತೂಪಗಳಿವೆ.

– ಕಲಬುರಗಿ ಜಿಲ್ಲೆಯ ಸನ್ನತಿಯಲ್ಲಿ ಒಂದು ಸ್ತೂಪವಿದೆ.

• ಅಮರಾವತಿ ಸ್ತೂಪ

ಆಂಧ್ರದ ಅಮರಾವತಿ ಸ್ತೂಪ ದಕ್ಷಿಣ ಭಾರತದಲ್ಲೇ ಅತ್ಯಂತ ದೊಡ್ಡ ಸ್ತೂಪವಾಗಿದೆ. 600 ಅಡಿ ಸುತ್ತಳತೆ, 192 ಅಡಿ ವ್ಯಾಸದ ಗುಮ್ಮಟ 20 ಅಡಿ ಎತ್ತರವಿದೆ. ನೆಲಮಟ್ಟದ ವ್ಯಾಸ. 53 ಮೀ ಇದರ ಸುತ್ತ 15 ಅಡಿ ಎತ್ತರ ಹಾಗೂ ಅಗಲವಾದ ಪ್ರದಕ್ಷಿಣಾ ಪಥವಿದೆ.

• ಚಿತ್ರಕಲೆ:– ಜಗತ್ಪ್ರಸಿದ್ಧ ಅಜಂತಾ ಗುಹಾಂತರ ದೇವಾಲಯಗಳು ಶಾತವಾಹನರ ಕಾಲದಿಂದ ಆರಂಭಗೊಂಡವು. 9 & 10 ನೇ ಗುಹೆಗಳಲ್ಲಿ ವರ್ಣಚಿತ್ರಗಳನ್ನು ಬಿಡಿಸಲಾಗಿದೆ. ಹಾಗೂ 9ನೇ ಗುಹೆಯಲ್ಲಿ ಬುದ್ಧನು ಕುಳಿತಿರುವ ಚಿತ್ರವಿದೆ. ಚಿತ್ರಕಲೆಯಲ್ಲಿ ಬೋಧಿಸತ್ವ ಅವಲೋಕಿತೇಶ್ವರ ಹಾಗೂ ಬುದ್ಧನಿಗೆ ರಾಹುಲನನ್ನು ಅರ್ಪಿಸುತ್ತಿರುವ ಚಿತ್ರಗಳನ್ನು ಬಿಡಿಸಿದ್ದಾರೆ.

• ಶಾತವಾಹನರ ಸಾಂಸ್ಕೃತಿಕ ಕೊಡುಗೆಗಳು

ಕಲೆ ಮತ್ತು ವಾಸ್ತು ಶಿಲ್ಪ :-

ದಕ್ಷಿಣ ಭಾರತದಲ್ಲಿ ಮೊಟ್ಟಮೊದಲಿಗೆ ಬೌದ್ಧ ವಾಸ್ತು, ಶಿಲ್ಪವನ್ನು ಘೋಷಿಸಿದವರು ಶಾತವಾನರು. ಶಾತವಾಹನರು ಪ್ರಮುಖ ಕಲಾಕೇಂದ್ರಗಳು– ಅಜಂತಾ, ನಾಸಿಕ, ಪೈತಾನ್, ಕನ್ಹೇರಿ ಬೇಡ್ಸಾ, ಗೋಳಿ.

1. ಚೈತ್ಯಗಳು :-

– ಬುದ್ಧನನ್ನು ಪೂಜಿಸುವ ಪ್ರಾರ್ಥನಾ ಸಭಾಂಗಣಗಳೇ ಚೈತ್ಯಗಳು. ಕಾರ್ಲೆ ಚೈತ್ಯಾಲಯ(ಆಂಧ್ರಪ್ರದೇಶ) ವು ಭಾರತದಲ್ಲಿ ಅತ್ಯಂತ ಸುಂದರವಾದ ಶಿಲಾಕೃತಿ ಹಾಗೂ ಪ್ರಸಿದ್ಧ ಚೈತ್ಯಾಲಯವಾಗಿದೆ. ಇದು 40 ಮೀ ಉದ್ದ 46 ಅಡಿ ಅಗಲ ಹಾಗೂ 46 ಅಡಿ ಎತ್ತರವಾಗಿದೆ.

– ಕ್ರಿ.ಶ 125 ರಲ್ಲಿ ವೈಜಯಂತಿ ಎಂಬ ಶಿಲ್ಪಿ ಇದನ್ನು ನಿರ್ಮಿಸಿದನು.

2. ಸ್ತ್ರೀಯರ ಸ್ಥಾನಮಾನ :-

ಶಾತವಾಹನರ ಸಾಮ್ರಾಜ್ಯದಲ್ಲಿ ಮಹಿಳೆಯರಿಗೆ ಗೌರವಾನ್ವಿತ ಸ್ಥಾನಮಾನ ಪ್ರಾಪ್ತವಾಗಿತ್ತು. ಸಾಮಾಜಿಕ ಧಾರ್ಮಿಕ, ಕಾರ್ಯಗಳಲ್ಲಿ ತೊಡಗುತ್ತಿದ್ದರು. ಉನ್ನತ ಶಿಕ್ಷಣ ಪಡೆಯುವ ಅವಕಾಶವಿತ್ತು.

3. ಆರ್ಥಿಕ ಜೀವನ :-

1. ಕೃಷಿ :- ಕೃಷಿ ಬಹುಜನರ ವೃತ್ತಿಯಾಗಿತ್ತು. ಭೂಕಂದಾಯವು ರಾಜ್ಯದ ಪ್ರಮುಖ ಆದಾಯವಾಗಿತ್ತು. ಒಟ್ಟು ಉತ್ಪನ್ನದ 1/6 ಭಾಗ ಸರ್ಕಾರಕ್ಕೆ ಕಂದಾಯವಾಗಿ ಸರ್ಕಾರಕ್ಕೆ ಕೊಡುತ್ತಿದ್ದರು. ಭತ್ತ ಹಾಗೂ ಗೋಧಿ ಆಗಿನ ಮುಖ್ಯ ಬೆಳೆಗಳಾಗಿದ್ದವು. ಕೃಷ್ಣಾ & ಗೋದಾವರಿ ನದಿಗಳು ಕೃಷಿಗೆ ನೀರಾವರಿಯನ್ನು ಒದಗಿಸುತ್ತಿದ್ದವು.

2. ವಾಣಿಜ್ಯ ವ್ಯಾಪಾರ :- ಆಂತರಿಕ ಹಾಗೂ ವಿದೇಶಿ ವ್ಯಾಪಾರಗಳು ಎರಡು ಪ್ರಗತಿಯಲ್ಲಿದ್ದವು ಅನಾಮಿಕ ಬರೆದ "ದಿ ಪೆರಿಪ್ಲಸ್ ಆಫ್ ಎರಿತ್ರಿಯನ್ ಸೀ" ಎಂಬ ಕೃತಿ ಶಾತವಾಹನರ ವಿದೇಶಿ ವ್ಯಾಪಾರವನ್ನು ಹೇಳುತ್ತದೆ.

3. ರೇವು ಪಟ್ಟಣಗಳು :- ಬ್ರೋಚ್, ಜುನ್ನಾರ್, ಕಲ್ಯಾಣ, ಸೋಪಾರ್, ನಾಸಿಕ, ಮಂಗಳೂರ, ಕಾರ್ಲೆ, ಪೈಠಾಣ, ಬನವಾಸಿ.

ಆಡಳಿತ ಅನುಕೂಲಕ್ಕಾಗಿ ಸಾಮ್ರಾಜ್ಯವನ್ನು

ಜನಪದಗಳಾಗಿ,

↓

ಅಹರ

↓

ವಿಷಯ

↓

ನಿಗಮ

↓

ಗ್ರಾಮಗಳಾಗಿ, ವಿಂಗಡಿಸಲಾಯಿತು.


2. ನಾಣ್ಯಗಳು :–

ದಿನಾರ್, ಸುವರ್ಣ ಎಂಬ ಚಿನ್ನದ ನಾಣ್ಯಗಳು ಕುಷಣ & ಕರ್ಷಪಣ ಬೆಳ್ಳಿನಾಣ್ಯಗಳು ಹಾಗೂ ದ್ರಮ್ಮ, ಪಗಣ್ಯ, ಗದ್ಯಾಣ ಎಂಬ ತಾಮ್ರದ ನಾಣ್ಯಗಳು & ಸೀಸದ ನಾಣ್ಯಗಳನ್ನು ಚಲಾವಣೆಗೆ ತಂದರು.

ಶ್ರೇಣಿಗಳು:–

- ಶಾತವಾಹನರ ಕಾಲದ ಆರ್ಥಿಕ ಜೀವನದ ಗಮನಾರ್ಹ ಬೆಳವಣಿಗೆಯೆಂದರೆ ಶ್ರೇಣಿ ಅಥವಾ ಸಂಘಗಳ ರಚನೆ.
- ಶ್ರೇಣಿಯ ಮುಖ್ಯಸ್ಥನನ್ನು ಶೆಟ್ಟಿ ಎಂದು ಕರೆಯುತ್ತಿದ್ದರು.
- ಅದು ನಿಗಮ ಸಭೆ ಎಂದು ಅಥವಾ ಪುನರ್ ಭವನ ಹೊಂದಿತ್ತು.
- ಕಂಬಾರರು ಅಕ್ಕಸಾಲಿಗರು ಬಡಿಗರು ಕಮ್ಮಾರರು ನೇಕಾರರು.

ಶಾತವಾಹನರ ಸಾಮ್ರಾಜ್ಯದ ವಿಸ್ತಾರಣೆ



• ಶಾತವಾಹನರ ಕೊಡುಗೆಗಳು

1. ಆಡಳಿತ :–

ರಾಜನು ಸಾಮ್ರಾಜ್ಯದ ಸರ್ವೋಚ್ಚ ಅಧಿಕಾರಿ ಅವನಲ್ಲಿ ಶಾಸನೀಯ ನ್ಯಾಯಿಕ ಹಾಗೂ ಸೈನಿಕ ಅಧಿಕಾರಿಗಳು ಕೇಂದ್ರಿಕೃತವಾಗಿದ್ದವು. ರಾಜನಿಗೆ ಆಡಳಿತದಲ್ಲಿ ನೆರವು ನೀಡಲು **ಮಂತ್ರಿ ಪರಿಷತ್ತು** ಇತ್ತು.

ಮುಖ್ಯ ಅಧಿಕಾರಿಗಳು

1. ಅಮಾತ್ಯ – ಪ್ರಾಂತ್ಯಗಳ ರಾಜ್ಯಪಾಲ
2. ರಾಜಾಮಾತ್ರ – ರಾಜನ ಸಹಾಯಕ
3. ಮಹಾಮಾತ್ರ – ಭಿಕ್ಷುಗಳ ಆಹಾರ ವಸತಿ ವ್ಯವಸ್ಥಾಪಕ
4. ಭಂಡಗಾರಿಕ – ಮೇಲ್ವಿಚಾರಕ
5. ಹಿರಣ್ಯಕ – ಕೋಶಾಧ್ಯಕ್ಷ
6. ಮಹಾಸೇನಾಪತಿ – ಸೇನೆಯ ದಂಡನಾಯಕ
7. ಮಹಾ ಸಂಧಿ ವಿಗ್ರಹಿಕ – ವಿದೇಶಾಂಗ ವ್ಯವಹಾರ
8. ಲೇಖಕ – ದಾಖಲೆಗಳ ತಯಾರಕ
9. ನಿಬಂಧಕಾರ – ಕಛೇರಿ ಮೇಲ್ವಿಚಾರಕ
10. ರಜುಕ – ನ್ಯಾಯವಾದಿ

ತಲಕಾಡಿನ ಗಂಗರು

- **ಸ್ಥಾಪಕ** :– ದಡಿಗ ಅಥವಾ ಕೊಂಗಣಿವರ್ಮ
- **ರಾಜಧಾನಿಗಳು** :– ಕೋಲಾರ, ತಲಕಾಡು, ಮಾಕುಂದ, ಮಾನ್ಯಪುರ ಬನವಾಸಿಯಲ್ಲಿ ಕದಂಬರು ರಾಜ್ಯ ಸ್ಥಾಪಿಸುವ ಕಾಲಕ್ಕೆ ಕೋಲಾರದಲ್ಲಿ ಗಂಗರು ರಾಜ್ಯ ಸ್ಥಾಪಿಸಿದರು.
- **ರಾಜ್ಯಲಾಂಛನ** :– ಮದಗಜ
- **ಧ್ವಜ** :– ಪಿಂಛಾ
- ಕುವಲಾಲ (ಕೋಲಾರ) ಗಂಗರ ಆರಂಭದ ರಾಜಧಾನಿ ಮೈಸೂರು ಜಿಲ್ಲೆಯ ಕಾವೇರಿ ನದಿಯ ದಂಡೆಯ ತಲಕಾಡು (ತಲವನಪುರ) ಅವರ ಎರಡನೇಯ ರಾಜಧಾನಿ.
- ಚನ್ನಪಟ್ಟಣದ ಬಳಿ ಮಾಕುಂದ ಇವರ ಮೂರನೇಯ ರಾಜಧಾನಿ
- ಬೆಂಗಳೂರು ಜಿಲ್ಲೆಯ ನೆಲಮಂಗಲದ ಬಳಿ ಮಾನ್ಯಪುರ (ಮಣ್ಣೆ) ಹಾಗೂ ನಂದಿಗಳು ಇವರ ಇತರ ರಾಜಧಾನಿಗಳಾಗಿವೆ.
- ತಲಕಾಡು ಇವರ ದೀರ್ಘ ರಾಜಧಾನಿಯಾಗಿ ಕಾರ್ಯನಿರ್ವಹಿಸಿತು.

ಗಂಗರ ಮೂಲ:–

ಇಕ್ಷ್ವಾಕು ಮೂಲ:– ಗಂಗ ವಂಶದ ಸ್ಥಾಪಕರು ಉತ್ತರ ಭಾರತದ ಇಕ್ಷ್ವಾಕು ವಂಶದವರು ಎಂದು ಕ್ರಿ.ಶ 1122ರ ಕಲ್ಲೂರು ಗುಡ್ಡ ಶಾಸನ ಹೇಳುತ್ತದೆ. ಗಂಗರ ಮೂಲ ಪುರುಷ ಧನಂಜಯ ಇಕ್ಷ್ವಾಕು ವಂಶದವನಾಗಿದ್ದನು. ಅವನಿಗೆ ಹರಿಶ್ಚಂದ್ರ ಎಂಬ ಮಗನಿದ್ದನು. ಅವನ ಮಕ್ಕಳಾದ ದಡಿಗ ಮತ್ತು ಮಾಧವರು ಕನ್ನಡ ನಾಡಿಗೆ ಬಂದು ಗಂಗ ವಂಶವನ್ನು ಸ್ಥಾಪಿಸಿದರು.

* **ಕಳಿಂಗ ಮೂಲ:–** ಗಂಗರು ಕಳಿಂಗವನ್ನು ಆಳಿದ ಪೂರ್ವ ಗಂಗರ ಸಂಬಂಧಿಗಳೆಂದು ಹೇಳಲಾಗಿದೆ.

* **ತಮಿಳು ಮೂಲ:–** ಗಂಗರ ಮೂಲ ನೆಲೆ ಕೊಯಮತ್ತೂರು ಬಳಿ ಪೆರೂರು ಆಗಿದ್ದು, ಅವರು ತಮಿಳು ಮೂಲದಿಂದ ಬಂದ೦ದು ಡಾ. ಆರೋಗ್ಯಸ್ವಾಮಿ ತಮ್ಮ ಕೃತಿ ಕೊಂಗು ದೇಶ ರಾಜಕ್ಕ ಚರಿತದಲ್ಲಿ ಹೇಳಿದ್ದಾರೆ.

* **ಕನ್ನಡ ಮೂಲ:–** ಗಂಗರು ಶುದ್ಧ ಕನ್ನಡಿಗರು ಕರ್ನಾಟಕದ ನಿವಾಸಿಗಳು. ಅವರು ಇಂದಿನಂತೆ ಕೃಷಿ ಮಾಡುತ್ತಿದ್ದ ಒಕ್ಕಲಿಗರು ಗಂಗಟಿಕಾರರು ಮತ್ತು ಈ ಮಣ್ಣಿನ ಮಕ್ಕಳು ಬಿ.ಎಲ್. ರೈಸ್ ರವರ ಪ್ರಕಾರ "ಗಂಗರು ಕರ್ನಾಟಕದವರೇ ಹೊರತು ಬೇರೆಯವರು ಅಲ್ಲ" ಎಂದು ಖಚಿತ ಪಡಿಸಿದ್ದಾರೆ. ಪ್ರಸ್ತುತ ಎಲ್ಲರೂ ಇದೇ ಮೂಲವನ್ನು ನಂಬಿದ್ದಾರೆ.

ರಾಜಕೀಯ ಇತಿಹಾಸ:–

* **ದಡಿಗ (ಕ್ರಿ.ಶ 350 ರಿಂದ 400 ರವರೆಗೆ)**

– ಈ ವಂಶದ ಸ್ಥಾಪಕವರ

– ಇವನ ರಾಜಧಾನಿ ಕುವಲಾಲ ಅಥವಾ ಕೋಲಾರ

– ಮೈಸೂರಿನ ಪೂರ್ವ ಭಾಗವನ್ನು ಆಳುತ್ತಿದ್ದ ಬಾಣ (ಮಹಾಬಲಿ ರಾಜರನ್ನು) ಸೋಲಿಸಿದನು. ಹಾಗೂ ಬಾಣವಂಶವನ "ದಾವಾನು" ಎಂಬ ಬಿರುದು ಗಳಿಸಿದನು.

– ಕೊಂಕಣ ಕರಾಮನೆಗೆ ನುಗ್ಗಿ ಶಿವಮೊಗ್ಗ ಪ್ರದೇಶವನ್ನು ವಶಪಡಿಸಿಕೊಂಡನು.

– ಕೋಲಾರದಿಂದ ಚೋಳರನ್ನು ಓಡಿಸಿದನು.

– ದಡಿಗನು ಶಿವಮೊಗ್ಗದ ಬಳಿ ಮಂಡಲಿಯಲ್ಲಿ ತನ್ನ "ಗುರು ಶಿವನಂದಿಯ ಆಸೆಯಂತೆ ಚೈತಾಲಯ್ಯವನ್ನು" ನಿರ್ಮಿಸಿದನು.

* **1ನೇ ಮಾಧವ (ಕ್ರಿ.ಶ 400– 435 ರವರೆಗೆ)**

– ದಡಿಗನ ನಂತರ ಅವನ ಹಿರಿಯ ಮಗ 1ನೇ ಮಾಧವನು ಪಟ್ಟಕ್ಕೆ ಬಂದನು.

– ಪ್ರಜಾಪಾಲಕನು ವಿದ್ಯಾಪಕ್ಷಿಪಾತಿಯೂ ವಿದ್ವಾಂಸನು ಆದ ಮಾಧವನು ಪ್ರಜಾ ಇಚ್ಛೆಯಂತೆ ರಾಜ್ಯಭಾರ ಮಾಡಿದನು.

– ಇತನ ಗ್ರಂಥ ದತ್ತಕಸೂತ್ರ ವೃತ್ತಿ.

- **2ನೇ ರಾಚಮಲ್ಲ : (ಕ್ರಿ.ಶ 870–907)**

✓ ಸತ್ಯವಾಕ್ಯನೆಂದೇ ಹೆಸರಾದ ಈತ ಬಾಣ, ವೈಡುಂಬರು, ಚೋಳ ಮತ್ತು ನೊಳಂಬರೊಡನೆ ಯುದ್ಧ ಮಾಡಬೇಕಾಯಿತು.

✓ ಕ್ರಿ.ಶ 892 ರಲ್ಲಿ ಸೊರೆಮಡಿ ಎಂಬಲ್ಲಿ ನಡೆದ ಕದನದಲ್ಲಿ ನೊಳಂಬರು ಬಾಣರನ್ನು ಸೋಲಿಸಿದರು.

✓ ಕ್ರಿ.ಶ 895 ರಲ್ಲಿ ನೊಳಂಬರನ್ನು ಸೋಲಿಸಿ "ಮಹೇಂದ್ರಾಂತಕ" ಎಂಬ ಬಿರುದು ಗಳಿಸಿದನು.

✓ ಕೊಡಗು ಬಳಿ ಸತ್ಯವಾಕ್ಯ ಎಂಬ ಬಸದಿ ಕಟ್ಟಿಸಿದನು.

- **ಎರೆಯಪ್ಪ:–** (ಕ್ರಿ.ಶ 907–921):– ನೊಳಂಬ ರಾಜ ಅಯ್ಯಪ್ಪನು ಎರೆಯಪ್ಪನ ಸಹಾಯ ಪಡೆದು ಚಾಳುಕ್ಯ ಸೈನ್ಯವನ್ನು ಹಿಮ್ಮೆಟ್ಟಿಸಿದನು.

- **3ನೇ ರಾಚಮಲ್ಲ: (ಕ್ರಿ.ಶ 933–935)**

✓ ಕೊಟ್ಟ ಮಂಗಲದ ಬಳಿ ನಡೆದ ಕದನದಲ್ಲಿ ಅಣ್ಣಿಯನ್ನು 3ನೇ ರಾಚಮಲ್ಲನಿಂದ ಸೋತು ಪ್ರಾಣಭಿಕ್ಷೆ ಬೇಡಿದನು.

- **ಇಮ್ಮಡಿ ಬೂತುಂಗ (ಕ್ರಿ.ಶ 935–961)**

✓ ಚೋಳ ರಾಜ 1ನೇ ಪರಾಂತಕನನ್ನು ಕ್ರಿ.ಶ 948 ರಲ್ಲಿ ನಡೆದ "ತಕ್ಕೋಲಂ" ಕದನದಲ್ಲಿ ಸೋಲಿಸಿದನು. ಬೂತುಗ ಪರಾಂತಕನ ಮಗ, ವಿಜಯಾದಿತ್ಯನನ್ನು ಕೊಂದು ಹಾಕಿದನು.

✓ ಕೃಷ್ಣನು ಬೂತುಗನಿಗೆ ಬನವಾಸಿ "12000" ಪ್ರಾಂತ್ಯಗಳನ್ನು ನೀಡಿದನು.

✓ ರಾಷ್ಟ್ರಕೂಟ ಸಿಂಹಾಸನವನ್ನು ಆಪತ್ತಿನಿಂದ ಪಾರುಮಾಡಿ ಚೋಳರ ಆಕ್ರಮಣದಿಂದ ಕನ್ನಡ ನಾಡನ್ನು ರಕ್ಷಿಸಿದ ಕೀರ್ತಿಶಾಲಿ ಬೂತುಗ.

ಬಿರುದುಗಳು:

ಮಹಾರಾಜಾಧಿರಾಜ "ಗಂಗನಾರಾಯಣ ನನ್ನೀಯಗಂಗ ಗಂಗ ಗಾಂಗೇಯ" ಎಂಬ ಬಿರುದುಗಳಿದ್ದವು.

ಬಿರುದುಗಳು:

ರಾಜಾಧಿರಾಜ, ಪರಮೇಶ್ವರ, ಶ್ರೀಪುರುಷ, ಬಿರುದುಗಳಿದ್ದವು. ರಾಜಕೇಸರಿ, ಭೀಮಕೋಟೆ, ಪೆರ್ಮಾಡಿ, ಶ್ರೀವಲ್ಲಭ, ರಣಭಾಜನ.

ಸಾಹಿತ್ಯ ಸಾಧನೆ:

ಶ್ರೀ ಪುರುಷನು ಗಜಶಾಸ್ತ್ರ ಎಂಬ ಗ್ರಂಥವನ್ನು ರಚಿಸಿದನು.

- **2ನೇ ಶಿವಮಾರ: (ಕ್ರಿ.ಶ 788 ರಿಂದ 812)**

ಶಿವಕುಮಾರನಲ್ಲಿ ಆಡಳಿತ ಪ್ರತಿಭೆಗಳಿಲ್ಲದಿದ್ದರೂ ಲಲಿತ ಕಲೆಗಳಲ್ಲಿ ಆಸಕ್ತನಾದ್ದನು. ಅವನು ಉದ್ದಾಮ ಪಂಡಿತನಾಗಿದ್ದು, ತರ್ಕ, ವೇದಾಂತ, ವ್ಯಾಕರಣ, ನಾಟ್ಯಶಾಸ್ತ್ರ, ಗಜವಿದ್ಯೆ ಅಲಂಕಾರ ಶಾಸ್ತ್ರ, ಅಶ್ವ ವಿದ್ಯೆ, ಧರ್ನುವಿದ್ಯೆಗಳಲ್ಲಿ ಪಾರಂಗತನಾಗಿದ್ದನು. ಸ್ವತಃ "ಗಜಾಷ್ಟಕ, ಸೇತುಬಂಧ, ಶಿವಮಾರತರ್ಕ" ಎಂಬ ಕೃತಿಗಳನ್ನು ಬರೆದನು.

✓ ಕಲಾ ಪೋಷಕರನೂ ಆಗಿದ್ದ ಅವನು ಕುಮ್ಮಡ ಮತ್ತು ಶ್ರವಣಬೆಳಗೊಳದಲ್ಲಿ ಬಸದಿಗಳನ್ನು ನಿರ್ಮಿಸಿದನು.

- **1ನೇ ರಾಚಮಲ್ಲ: (ಕ್ರಿ.ಶ 816–843)**

✓ ರಾಷ್ಟ್ರಕೂಟ ದೊರೆ ಅಮೋಘವರ್ಷನು ಗಂಗವಾಡಿಯ ಮೇಲೆ ಕಣ್ಣಿಟ್ಟಿದ್ದನು. ರಾಚಮಲ್ಲ ತನ್ನ ರಾಜ್ಯ ರಕ್ಷಿಸಿಕೊಳ್ಳಲು ನೊಳಂಬರೊಂದಿಗೆ ವೈವಾಹಿಕ ಸಂಬಂಧ ಬೆಳೆಸಿದನು.

✓ ಬಂಕೇಶನು ರಾಚಮಲ್ಲನನ್ನು ಸೋಲಿಸಿ ತುಮಕೂರು ಬಳಿಯ ಕೈದಾಳ ದುರ್ಗವನ್ನು ವಶಪಡಿಸಿಕೊಂಡನು. ರಾಚಮಲ್ಲ ರಾಷ್ಟ್ರಕೂಟರ ವಶವಾಗಿದ್ದ ಪ್ರದೇಶಗಳನ್ನು ಪುನಃ ಜಯಸಿದನು.

- **ನೀತಿಮಾರ್ಗ ಎರೆಗಂಗ : (ಕ್ರಿ.ಶ 843–870)**

✓ ರಾಚಮಲ್ಲನ ಮಗನಾದ ಎರೆಗಂಗನಿಗೆ ನೀತಿಮಾರ್ಗ ಮತ್ತು ರಣವಿಕ್ರಮ ಎಂಬ ಬಿರುದುಗಳಿದ್ದವು.

✓ ಕ್ರಿ.ಶ 868 ರಲ್ಲಿ "ರಾಜರಾಮುಡು" ಎಂಬಲ್ಲಿ ನಡೆದ ಭೀಕರ ಕದನದಲ್ಲಿ ಎರೆಗಂಗನ್ನು ರಾಷ್ಟ್ರಕೂಟರನ್ನು ಸೋಲಿಸಿದನು.

✓ ನೀತಿಮಾರ್ಗ ಜೈನ ಮತಾವಲಂಬಿಯಾಗಿದ್ದನು.

- **ಭೂ ವಿಕ್ರಮ (ಕ್ರಿ.ಶ 669–679 ರವರೆಗೆ)**

✓ ಪಲ್ಲವರ ದೊರೆ 1ನೇಯ ನರಸಿಂಹನ ಮೇಲೆ ಹಲವು ಬಾರಿ ದಂಡೆಯಾತ್ರೆಗಳನ್ನು ಕೈಗೊಂಡನು.

✓ ಬಾನರಸ ಶೆಚ್ಚಿಂದ್ರನ, ಭೂವಿಕ್ರಮನ ಸಾಮಂತಸಾಗಿದ್ದನು.

- **1ನೇ ಶಿವಮಾರ (ಕ್ರಿ.ಶ 679 ರಿಂದ 725)**

✓ ಪಲ್ಲವರ ಆಕ್ರಮಣಗಳನ್ನು ತಡೆಗಟ್ಟಿದನು.

✓ ಬಾದಾಮಿಯ ಚಾಲುಕ್ಯರ ದೊರೆ ವಿನಯಾದಿತ್ಯನು ಗಂಗರನ್ನು ಸೋಲಿಸಿ ಅವರನ್ನು ಸಾಮಂತರಾಗಿ ಮಾಡಿಕೊಂಡನು.

ಬಿರುದುಗಳು:– ಶಿಷ್ಯಪ್ರಭು, ಅವನೀಮಹೀಂದ್ರ, ಸ್ಥಿರವಿನೀತ ಎಂಬ ಬಿರುದುಗಳು ಇದ್ದವು.

ಶ್ರೀ ಪುರುಷ (ಕ್ರಿ.ಶ 725–788)

- **ಪಲ್ಲವರೊಡನೆ ಯುದ್ಧ:–**

ಪಲ್ಲವ ದೊರೆ ನಂದಿವರ್ಮರನು ಗಂಗರ ರಾಜಧಾನಿ ಕೋಲಾರವನ್ನು ವಶಪಡಿಸಿಕೊಂಡು ಗಂಗರಿಗೆ ಪಿತ್ರಾರ್ಜಿತವಾಗಿ ಬಂದ ಉಗ್ರೋದಯ ಎಂಬ ಕಂಠಾಭರಣವನ್ನು ಸೆಳೆದುಕೊಂಡನು.

ಬಿರುದುಗಳು:–

ರಣಭಾಜನ, ಭೀಮಕೋಪ ಎಂಬ ಬಿರುದಗಳನ್ನು ಧರಿಸಿದ್ದನು. ಚಾಲುಕ್ಯ ಅರಸ ಎರಡನೇಯ ವಿಕ್ರಮಾಧಿತ್ಯನು ಪಲ್ಲವರ ಮೇಲೆ ದಾಳಿ ಮಾಡಿದ ಯುದ್ಧಗಳಲ್ಲಿ ಶ್ರೀ ಪುರುಷನು ಚಾಲುಕ್ಯರಿಗೆ ನೆರವಾದನು. ಅವರಿಬ್ಬರು ಸೇರಿ ಪಲ್ಲವರನ್ನು ತುಂಡಕ ಎಂಬ ಕದನದಲ್ಲಿ ಸೋಲಿಸಿದನು.

- **ರಾಷ್ಟ್ರಕೂಟರೊಡನೆ ಯುದ್ಧ:–**

ಚಾಲುಕ್ಯರನ್ನು ಪತನಗೊಳಿಸಿದ ರಾಷ್ಟ್ರಕೂಟರ ದೊರೆ ದಂತಿದುರ್ಗನು ರಾಷ್ಟ್ರಕೂಟ ಸಂತತಿಯನ್ನು ಸ್ಥಾಪಿಸಿದನು.

ಶ್ರೀಪುರುಷನು ಬಾಗೆಯೂರು ಮತ್ತು ಪಿಂಚನೂರುಗಳಲ್ಲಿ ನಡೆದ ಭೀಕರ ಕದನಗಳಲ್ಲಿ ವೀರಾವೇಶದಿಂದ ಕಾದಾಡಿ 1ನೇ ಕೃಷ್ಣನ ಸೈನ್ಯವನ್ನು ಕಪಿಲೆಯವರೆಗೆ ಹಿಮ್ಮೆಟ್ಟಿಸಿದನು.

✓ ಶ್ರೀ ಪುರುಷನು ತನ್ನ ರಾಜಧಾನಿಯನ್ನು ಮಾಕುಂದದಿಂದ ಮಣ್ಣಿಗೆ ವರ್ಗಾಯಿಸಿದನ್ನು ಅದನ್ನು ರಕ್ಷಿಸಿಕೊಂಡನು.

✓ ಕೊನೆಗೂ ಶ್ರೀಪುರುಷನು ರಾಷ್ಟ್ರಕೂಟರಿಗೆ ತಲೆಬಾಗಲಿಲ್ಲ.

- **ಹರಿವರ್ಮ (435 ರಿಂದ 460)**

– ಇವನು ರಾಜಧಾನಿಯನ್ನು ಕೋಲಾರದಿಂದ ತಲಕಾಡಿಗೆ ವರ್ಗಾಯಿಸಿದನು.

– ಇವನ ಆಸ್ಥಾನದಲ್ಲಿ ಮಾಧವಭಟ್ಟನೆಂಬ ಬ್ರಾಹ್ಮಣ ಪಂಡಿತ ವಾದಿಗಜೇಂದ್ರ ಎಂಬ ಬೌದ್ಧ ವಿದ್ವಾಂಸನನ್ನು ವಾದದಲ್ಲಿ ಸೋಲಿಸಿ 'ವಾದಭಿಸಿಂಹ' ಎಂಬ ಬಿರುದುಗಳಿಸಿದನು.

- ವಿಷ್ಣುಗೋಪ:– (ಕ್ರಿ.ಶ 460 ರಿಂದ 461)
- ತಡಂಗಾಲ ಮಾಧವ (ಕ್ರಿ.ಶ 460 ರಿಂದ 500)

ಅವಿನೀತ:– (ಕ್ರಿ.ಶ 500 ರಿಂದ 540)

✓ ಗಂಗ ವಂಶದಲ್ಲಿ ಒಬ್ಬ ಪ್ರಸಿದ್ಧ ನಾಯಕ

✓ ಈತ ಶಿವನ ಆರಾಧಕನಾಗಿದ್ದನು.

✓ ವಿಜಯ ಕೀರ್ತಿ ಎಂಬ ಜೈನಮುನಿ ಇವನ ರಾಜಗುರುವಾಗಿದ್ದನು.

✓ ಅವಿನೀತನ ಪೊನ್ನಾಟದ ಶಿವಸ್ಕಂದ ವರ್ಮನ ಮಗಳಾದ ಜೇಷ್ಠ ದೇವಿಯನ್ನು ವಿವಾಹವಾದನು. ಗಂಗವಾಡಿಗೆ ದಕ್ಷಿಣದಲ್ಲಿದ್ದ ಪೊನ್ನಾಟಕ್ಕೆ ಕಿತ್ತೂರ ರಾಜಧಾನಿಯಾಯಿತು.

ದುರ್ವಿನೀತ:– (ಕ್ರಿ.ಶ 540 ರಿಂದ 600)

– ಗಂಗರ ಅರಸರಲ್ಲಿಯೇ ಅತ್ಯಂತ ಪ್ರಸಿದ್ಧ ಅರಸ

– ಪಲ್ಲವ ದೊರೆ ತ್ರಿಲೋಚನವನ್ನು ಶೋಧಿಸಿ ಕೊಯಮತ್ತೂರ, ಸೇಲಂ, ಚಂಗಲ್‌ಪೇಟೆ, ಜಿಲ್ಲೆಯಲ್ಲಿನ ಆಂಧೇರಿ ಆಲತ್ತೂರು ಪೊರುಲಾರಿ ಪೆರ್ನಾಗರ್ ದುರ್ಗಗಳನ್ನು ವಶಪಡಿಸಿಕೊಂಡನು.

– ಧರ್ಮ ಸಾಹಿತ್ಯಗಳ ಪೋಷಣೆ

– ವೈಷ್ಣವ ಮತದವನಾಗಿದ್ದರು ಕೂಡ ಅನ್ನ ಧರ್ಮಿಯರನ್ನು ಉದಾರವಾದಿಯಾಗಿ ಕಂಡನು.

– ದುರ್ವಿನೀತನು ಭಾರವಿಯ ಕಿರಾತಾರ್ಜುನೀಯ 15ನೇ ಸ್ವರ್ಗಕ್ಕೆ ಭಾಷೆಯನ್ನು ಬರೆದನು.

– ಗುಣಾಢ್ಯನ ಬೃಹತ್ ಕಥಾವನ್ನು ಪೈಶಾಚಿಕ ಭಾಷೆಯಿಂದ ಸಂಸ್ಕೃತಕ್ಕೆ ಅನುವಾದಿಸಿದನು.

– ದುರ್ವಿನೀತನು ಗುರು ಪೂಜ್ಯಪಾದರೂ ಶಬ್ದಾವತಾರ ಎಂಬ ವ್ಯಾಕರಣ ಗ್ರಂಥ ಬರೆದನು.

- **ಮುಷ್ಕರ (ಕ್ರಿ.ಶ 600 ರಿಂದ 620 ರವರೆಗೆ)**

✓ ಈತ ದುರ್ವಿನೀತನ ಮಗ ಇವನು ಸಿಂಧೂರಾಜನ ಮಗಳನ್ನು ವಿವಾಹವಾದನು. ಈತ ಬಳ್ಳಾರಿಯ ಬಳಿ ಮಾಕ್ಕೆರ ಬಸದಿಯನ್ನು ನಿರ್ಮಿಸಿದನು.

ಗಂಗರ ಸಾಂಸ್ಕ್ರತಿಕ ಕೊಡುಗೆಗಳು:–

1.ಧರ್ಮ:– ಗಂಗ ರಾಜರು ಪರಧರ್ಮ ಸಹಿಷ್ಣುತೆ ಮತಸಹಿಷ್ಣುರಾದ ಅವರು ವೈಷ್ಣವ ಶೈವ ಜೈನ & ಬೌದ್ಧ ಮತಗಳಿಗೂ ಉದಾರ ಪೋಷಣೆ ನೀಡಿದರು.

2.ಶಿಕ್ಷಣ:–ವಿದ್ಯಾಭಿಮಾನಿಗಳಾದ ಗಂಗರು ಶಿಕ್ಷಣಕ್ಕೆ ವಿಶೇಷ ಪ್ರೋತ್ಸಾಹ ನೀಡಿದರು. ದೇವಾಲಯಗಳು ಮತಗಳು ಅಗ್ರಹಾರಗಳು ಬ್ರಹ್ಮಪುರಗಳು & ಘಟಕಗಳು ಶಿಕ್ಷಣ ಕೇಂದ್ರಗಳಾಗಿದ್ದವು. ಪಟ್ಟಣ ನಗರಗಳಲ್ಲಿ ಪ್ರತ್ಯೇಕವಾಗಿ ನೆಲೆಸಿದ ಬ್ರಾಹ್ಮಣರುವಾಸಿಸಿದ್ದು ಬೀದಿಗಳನ್ನು ಬ್ರಹ್ಮಪುರಗಳೆಂದು ಕರೆಯುತ್ತಿದ್ದರು.

ಸಾಹಿತ್ಯ :–

- ದುರ್ವಿನೀತ – ಗುಣಾಢ್ಯನ ಬೃಹತ್‌ಕಥಾವನ್ನು ಪ್ರಾಕೃತದಿಂದ ಸಂಸ್ಕೃತಕ್ಕೆ ಅನುವಾದಿಸಿದನು.
- 1ನೇ ನಾಗವರ್ಮ – ಛಂದೋಬುದಿ.
- ವೀರನಂದಿ – ಚಂದ್ರಪ್ರಭಾ ಪುರಾಣ.
- ಹೇಮಸೇನ – ರಾಘವ ಪಾಂಡುವೀಯ.
- ನೇಮಿಚಂದ್ರ – ತ್ರಿಲೋಕಸಾರ ದಿವ್ಯಾಸಾರ ಸಂಗ್ರಹ.
- ಆಸಗ – ವರ್ಧಮಾನ ಪುರಾಣ.

ಕಲೆ ಮತ್ತು ವಾಸ್ತು ಶಿಲ್ಪ :–

- ಗಂಗರು ಕಲಾಭಿಮಾನಿಗಳು ಅವರು ಅನೇಕ ದೇವಾಲಯಗಳನ್ನು ಬಸದಿಗಳನ್ನು ಮೂರ್ತಿಶಿಲ್ಪಗಳನ್ನು ನಿರ್ಮಿಸಿ ಗಂಗವಾಡಿಯನ್ನು ಕಲಾ ಸಂಗ್ರಹಾಲಯವಾಗಿ ಮಾಡಿದ್ದರು.
- ಗಂಗರ ಸ್ಮಾರಕಗಳನ್ನು ದೇವಾಲಯಗಳು ಬಸದಿಗಳು ಸ್ತಂಭಗಳು ಹಾಗೂ ಶಿಲ್ಪಕಲೆ ಎಂದು 4 ಭಾಗಗಳಾಗಿ ವಿಂಗಡಿಸಿದ್ದರು. ಮೊದಲೆರಡು ವಾಸ್ತುಶಿಲ್ಪಕ್ಕೂ ಕಡೆಯ ಎರಡು ಶಿಲ್ಪಕಲೆಗೂ ಮೀಸಲಿಟ್ಟಿದ್ದರು.

ಸೇನಾಡಳಿತ:– ದಂಡನಾಯಕ, ಮಹಾಪ್ರಚಂಡ, ದಣ್ಣಾಯಕ, ಮಹಾ ಸಾಮಾಂತಾಧಿಪತಿಗಳು ಸೈನ್ಯದ ಉಚ್ಚ ಅಧಿಕಾರಿಗಳಾಗಿದ್ದರು.

- ಅಶ್ವಪಡೆಯ ಸೈನ್ಯಾಧಿಕಾರಿಗಳನ್ನು ಪಳ್ಳಿಗಾರ ಅಶ್ವಾಧ್ಯಕ್ಷ ತುರುಗ ಸಹಣಿ ಎಂದು ಕರೆಯುತ್ತಿದ್ದರು.
- ಗಜಪಡೆಯ ಮುಖ್ಯಸ್ಥನನ್ನು "ಗಜಸಹನಿ" ಎಂದು ಕರೆಯುತ್ತಿದ್ದರು.

ವರಮಾನ:–

- ಭೂಕಂದಾಯವು ರಾಜ್ಯದ ಪ್ರಮುಖ ವರಮಾನದ ಮೂಲವಾಗಿತ್ತು.
- ಒಟ್ಟು ಉತ್ಪನ್ನದ 1/6 ಭಾಗವನ್ನು ರಾಜ್ಯದ ಬೊಕ್ಕಸಕ್ಕೆ ಭೂಕಂದಾಯವಾಗಿ ಕೊಡಬೇಕಿತ್ತು.

ನಾಣ್ಯಗಳು:– ಗಂಗರಾಜರು ಪೊನ್, ಸುವರ್ಣ, ಗದ್ಯಾಣ, ನಿಷ್ಕ, ಎಂಬ ಚಿನ್ನದ ನಾಣ್ಯಗಳನ್ನು ಹಾಗೂ ಪಣ, ಹಗ, ಕಾಸು, ದ್ರಮ್ಮ ಎಂಬ ಬೆಳ್ಳಿಯ ನಾಣ್ಯಗಳನ್ನು ಚಲಾವಣೆಗೆ ತಂದರು. ಅವರ ನಾಣ್ಯವು ಗಜ ಮತ್ತು ಹೂಬಳ್ಳಿ ಚಿತ್ರ ಹೊಂದಿತ್ತು.

ಆರ್ಥಿಕ ಪರಿಸ್ಥಿತಿ:–

ಕೃಷಿ ಬಹುಜನರ ಬೇಸಾಯವಾಗಿತ್ತು. ಪಶುಪಾಲನೆ & ಕಸಬು ಜನರು ಗ್ರಾಮೀಣ ವಾಸಿಗಳಾಗಿದ್ದರು. ಗಂಗರು ಕೃಷಿಗಾಗಿ ಅನೇಕ ಕೆರೆಕಟ್ಟೆ ಕಾಲುವೆ & ಬಾವಿಗಳನ್ನು ನಿರ್ಮಿಸಿ ಕೃಷಿಗೆ ನೀರು ಒದಗಿಸಿದರು.

ಸಾಮಾಜಿಕ ಪರಿಸ್ಥಿತಿ:–

ಸಮಾಜದಲ್ಲಿ ವರ್ಣ ವ್ಯವಸ್ಥೆ ರೂಢಿಯಲ್ಲಿತ್ತು. ಅವಿಭಕ್ತ ಕುಟುಂಬಗಳು ಹೇರಳವಾಗಿದ್ದವು. ಅನೇಕ ಉಪಜಾತಿಗಳಿದ್ದವು ಏಕಪತ್ನಿತ್ವ ಜನಪ್ರಿಯವಾಗಿತ್ತು. ಬಹುಪತ್ನಿತ್ವ ಅರಸರಲ್ಲಿ ಮಾತ್ರ ರೂಢಿಯಲ್ಲಿತ್ತು.

- ಅಂತರ್ ಜಾತಿ ವಿವಾಹಗಳು ಹೇರಳವಾಗಿದ್ದವು.
- ಸತಿಸಹಗಮನ ಪದ್ಧತಿ ಆಚರಣೆಯಲ್ಲಿತ್ತು.
- ಜೈನರಲ್ಲಿ ಸಲ್ಲೇಖನ ವೃತ ಆಚರಿಸಿ ಮರಣವನ್ನು ಒಪ್ಪುವ ಪದ್ಧತಿ ಇತ್ತು.
- ಸ್ತ್ರೀ ಪುರುಷರು ಇಬ್ಬರು ಸೌಂದರ್ಯವರ್ಧಕ ಸಾಧನಗಳನ್ನು ಬಳಸುತ್ತಿದ್ದರು.

ಅಧಿಕಾರ ವರ್ಗ: ಶ್ರೀ ಕರಣಿಕ (ಲೆಕ್ಕಪತ್ರ ವಿಭಾಗ)
ಅಂತಃ ಪುರಾಧ್ಯಕ್ಷ ನಿಧಿಕಾರ (ಕೋಶಾಧ್ಯಕ್ಷ) ರಾಜಪಾಲಿಕ ಮಹಾಪಡಿಯರ (ಅರಮನೆ ಕಾವಲುಗಾರ) ಸಜ್ಜೆವಳ್ಳಿ (ದರ್ಬಾರುಭಕ್ಷಿ) ಶಾಸನಾಧಿಕಾರಿ, ಮಹಾಪಸಾಯಿತ್ (ವಸ್ತ್ರಮಂತ್ರಿ) ರಾಜುಕ ಇತ್ಯಾದಿಗಳು.

ಪ್ರಾಂತ್ಯಾಡಳಿತ :– ಆಡಳಿತದ ಅನುಕೂಲಕ್ಕಾಗಿ

ಸಾಮ್ರಾಜ್ಯವನ್ನು
↓
ಪ್ರಾಂತ್ಯ
↓
ವಿಷಯ (ಜಿಲ್ಲೆ)
↓
ಕಂಸನ (ತಾಲ್ಲೂಕು)
↓
ಗ್ರಾಮಗಳಾಗಿ ವಿಂಗಡಿಸಲಾಗಿತ್ತು.

ಗ್ರಾಮಾಡಳಿತ:– ಗ್ರಾಮವು ಆಡಳಿತದ ಪ್ರಾಥಮಿಕ ಘಟಕವಾಗಿತ್ತು. ಗ್ರಾಮಾಡಳಿತ ಗೌಡ ಶಾನುಭೋಗ ಕರಣಿಕ (ಗಣಕ) ಎಂಬ ಅಧಿಕಾರಿಗಳು ನೋಡಿಕೊಳ್ಳುತ್ತಿದ್ದರು. ಪ್ರತಿಯೊಂದು ಗ್ರಾಮದಲ್ಲೂ ಗ್ರಾಮ ಸಭೆ ಇರುತ್ತಿತ್ತು. ಅದನ್ನು ಮಹಾಜನ ಸಭೆ ಎಂದು ಕರೆಯುತ್ತಿದ್ದರು.

ನಗರಾಡಳಿತ:– ನಗರಾಡಳಿತವು ನಗರಿಕನಿಗೆ ಸೇರಿತ್ತು. ಅವನು ನಗರದ ಮುಖ್ಯ ಪೋಲಿಸ್ ಆಯುಕ್ತನಾಗಿದ್ದನು. ಪಟ್ಟಣಗಳ ಆಡಳಿತ ಮುಖ್ಯಸ್ಥನನ್ನು "ಪಟ್ಟಣ ಸ್ವಾಮಿ" ಎಂದು ಕರೆಯುತ್ತಿದ್ದರು.

ನ್ಯಾಯಾಡಳಿತ:– ರಾಜನೇ ರಾಜ್ಯದ ಸರ್ವೋಚ್ಚ ನ್ಯಾಯಾಧೀಶನಾಗಿದ್ದನು. ಅವನ ಆಸ್ಥಾನವೇ ಉಚ್ಚ ನ್ಯಾಯಪೀಠವಾಗಿತ್ತು.

ಅಧಿಕಾರ ವರ್ಗ: ಶ್ರೀ ಕರಣಿಕ (ಲೆಕ್ಕಪತ್ರ ವಿಭಾಗ)
ಅಂತಃ ಪುರಾಧ್ಯಕ್ಷ ನಿಧಿಕಾರ (ಕೋಶಾಧ್ಯಕ್ಷ) ರಾಜಪಾಲಿಕ ಮಹಾಪಡಿಯರ (ಅರಮನೆ ಕಾವಲುಗಾರ) ಸಜ್ಜೆವಳ್ಳಿ (ದರ್ಬಾರುಭಕ್ಷಿ) ಶಾಸನಾಧಿಕಾರಿ, ಮಹಾಪಸಾಯಿತ್ (ವಸ್ತ್ರಮಂತ್ರಿ) ರಾಜುಕ ಇತ್ಯಾದಿಗಳು.

ಪ್ರಾಂತ್ಯಾಡಳಿತ :– ಆಡಳಿತದ ಅನುಕೂಲಕ್ಕಾಗಿ

ಸಾಮ್ರಾಜ್ಯವನ್ನು
↓
ಪ್ರಾಂತ್ಯ
↓
ವಿಷಯ (ಜಿಲ್ಲೆ)
↓
ಕಂಸನ (ತಾಲ್ಲೂಕು)
↓
ಗ್ರಾಮಗಳಾಗಿ ವಿಂಗಡಿಸಲಾಗಿತ್ತು.

ಗ್ರಾಮಾಡಳಿತ:– ಗ್ರಾಮವು ಆಡಳಿತದ ಪ್ರಾಥಮಿಕ ಘಟಕವಾಗಿತ್ತು. ಗ್ರಾಮಾಡಳಿತ ಗೌಡ ಶಾನುಭೋಗ ಕರಣಿಕ (ಗಣಕ) ಎಂಬ ಅಧಿಕಾರಿಗಳು ನೋಡಿಕೊಳ್ಳುತ್ತಿದ್ದರು. ಪ್ರತಿಯೊಂದು ಗ್ರಾಮದಲ್ಲೂ ಗ್ರಾಮ ಸಭೆ ಇರುತ್ತಿತ್ತು. ಅದನ್ನು ಮಹಾಜನ ಸಭೆ ಎಂದು ಕರೆಯುತ್ತಿದ್ದರು.

ನಗರಾಡಳಿತ:– ನಗರಾಡಳಿತವು ನಗರಿಕನಿಗೆ ಸೇರಿತ್ತು. ಅವನು ನಗರದ ಮುಖ್ಯ ಪೋಲಿಸ್ ಆಯುಕ್ತನಾಗಿದ್ದನು. ಪಟ್ಟಣಗಳ ಆಡಳಿತ ಮುಖ್ಯಸ್ಥನನ್ನು "ಪಟ್ಟಣ ಸ್ವಾಮಿ" ಎಂದು ಕರೆಯುತ್ತಿದ್ದರು.

ನ್ಯಾಯಾಡಳಿತ:– ರಾಜನೇ ರಾಜ್ಯದ ಸರ್ವೋಚ್ಚ ನ್ಯಾಯಾಧೀಶನಾಗಿದ್ದನು. ಅವನ ಆಸ್ಥಾನವೇ ಉಚ್ಚ ನ್ಯಾಯಪೀಠವಾಗಿತ್ತು.

ಕಲಾ ಪೋಷಣೆ:–

ಚಾವುಂಡರಾಯನ ಅದ್ವಿತೀಯ ಸಾಧನೆಯೆಂದರೆ ಶ್ರವಣ ಬೆಳಗೊಳದಲ್ಲಿ ಜಗತ್ಪ್ರಸಿದ್ಧವಾದ 58 ಅಡಿ ಎತ್ತರದ ಏಕಶಿಲಾ ಗೊಮ್ಮಟೇಶ್ವರನ ವಿಗ್ರಹ ಕೆತ್ತಿಸಿದುದು. ಅದನ್ನು ತನ್ನ ತಾಯಿ ಕಾಳಲಾದೇವಿಯ ಅಭಿಲಾಷೆಯಂತೆ 'ಅರಿಷ್ಟನೇಮಿ' ಎಂಬ ಜೈನ ಶಿಲ್ಪಿಯ ನೆರವಿನಿಂದ ಕೆತ್ತಿಸಿದನು. (ಕ್ರಿ.ಶ 981–983)

ಪ್ರಥಮ "ಮಹಾಮಸ್ತಾಭಿಷೇಕವನ್ನು" 981 'ಅರಿಷ್ಟನೇಮಿ' ಮಾಡಿದನು.

✓ ಪ್ರತಿ 12 ವರ್ಷಗಳಿಗೊಮ್ಮೆ ನಡೆಸುತ್ತಾರೆ.

✓ ಇಲ್ಲಿಯವರಿಗೆ 88 ಮಹಾಮಸ್ತಕಾಭಿಷೇಕ ನಡೆದಿವೆ.

ಗಂಗರ ಆಡಳಿತ:–

ಕೇಂದ್ರಾಡಳಿತ:–

ರಾಜ:– ಗಂಗರಾಜರು ಧರ್ಮನಿಷ್ಠರು, ಧರ್ಮ ಮಹಾರಾಜಾಧಿರಾಜರೆಂದು ಕರೆಸಿಕೊಂಡ ಗಂಗರು ಪ್ರಜೆಗಳ ಸುಖವೇ ತಮ್ಮ ಸುಖವೆಂದು ಭಾವಿಸಿದರು.

1. **ಮಂತ್ರಿಮಂಡಲ:–** ರಾಜನೇ ಸಮಗ್ರ ರಾಜ್ಯಭಾರಕ್ಕೆ ಶಿಖರ ಪ್ರಾಯವಾಗಿದ್ದನು.

ಮಂತ್ರಿಗಳೆಂದರೆ:

- ಸರ್ವಾಧಿಕಾರಿ (ಪ್ರಧಾನಮಂತ್ರಿ)
- ದಂಡನಾಯಕ (ಸೈನ್ಯದ ಮುಖ್ಯಸ್ಥ)
- ಹಿರಿಯ ಭಂಡಾರಿ (ಖಜಾಂಚಿ, ಖಜಾನೆ ಅಧಿಕಾರಿ)
- ಸಂಧಿ ವಿಗ್ರಹಿ (ಯುದ್ಧ ಮಂತ್ರಿ)
- ಯುವರಾಜ (ಸಿಂಹಾಸನ ಹಕ್ಕುದಾರ)
- ಮನೆವೆರ್ಗಡೆ (ಅರಮೆಯ ಮೇಲ್ವಿಚಾರಕ) ಪ್ರಧಾನಿ ಇತ್ಯಾದಿ.
- ಯೋಗ್ಯತೆ ಆಧರಿಸಿ ಎಲ್ಲಾ ಮಂತ್ರಿಗಳನ್ನು ರಾಜನೇ ನೇಮಿಸುತ್ತಿದ್ದನು.

- **2ನೇ ಮಾರಸಿಂಹ (ಕ್ರಿ.ಶ 963–975)**

✓ ಗುಜರಾತಿನ ಅನ್ಹಿಲ್‌ವಾಡದ ಮೂಲರಾಜನನ್ನು ಗೂರ್ಜರ ಪಾರಮಾರ ಸೀಯುಕ ಹರ್ಷನನ್ನು ಸದೆಬಡಿದು. ಅವರ ಮೇಲೆ ರಾಷ್ಟ್ರಕೂಟ ಸಾಮಂತತ್ವ ಹೇರಿ ಕಪ್ಪು ಕಾಣಿಕೆ ಪಡೆದನು. ಉಜ್ಜಯಿನಿ ಮಾರಸಿಂಹನ ವಶವಾಯಿತು. ಹೀಗಾಗಿ ಅವನಿಗೆ "ಗೂರ್ಜರಾಜಾಧಿರಾಜ" ಎಂಬ ಬಿರುದು ಬಂದತ್ತು.

✓ ನೊಳಂಬರನ್ನು ಗೋಣೂರು ಕದನದಲ್ಲಿ ಸೋಲಿಸಿ "ನೊಳಂಬ ಕುಲಾಂತಕ" ಎಂಬ ಬಿರುದು ಗಳಿಸಿದನು.

ಬಿರುದುಗಳು: ಗಂಗಚೂಡಾಮಣಿ, ಗಂಗವಜ್ರ, ಗೂರ್ಜರಾಜಾಧಿರಾಜ, ಮುಂತಾದವು.

- **4ನೇ ರಾಚಮಲ್ಲ : (ಕ್ರಿ.ಶ 975–999)**

✓ ಇವನ ಕಾಲದಲ್ಲಿ ಗಂಗ ಸಿಂಹಾಸನಕ್ಕಾಗಿ ಅಂತಃ ಕಲಹಗಳು ನಡೆದವು. ಮಾರಸಿಂಹನ ತಮ್ಮ ಗೋವಿಂದರಸನು ಸಿಂಹಾಸನಕ್ಕಾಗಿ ದಂಗೆ ಎದ್ದನು ಆದರೆ ಅವನು ಸೋತನು.

✓ ಕ್ರಿ.ಶ 999 ರಲ್ಲಿ ರಾಜರಾಜ ಚೋಳನು ಗಂಗವಾಡಿಯನ್ನು ವಶಪಡಿಸಿಕೊಂಡನು.

✓ ಕ್ರಿ.ಶ 1004 ರಲ್ಲಿ ರಾಜೇಂದ್ರ ಚೋಳನು ತಲಕಾಡನ್ನು ವಶಪಡಿಸಿಕೊಂಡಾಗ ಗಂಗರ ಆಳ್ವಿಕೆ ಕೊನೆಗೊಳ್ಳುತ್ತದೆ.

ಚಾವುಂಡರಾಯ:–

✓ ತನ್ನ ಸ್ವಾಮಿ ನಿಷ್ಠೆ ಮತ್ತು ಪ್ರಾಮಾಣಿಕತೆಗಳಿಂದ ಗಂಗರ ಕೀರ್ತಿಯನ್ನು ಉತ್ತುಂಗ ಶಿಖರಕ್ಕೇರಿಸಿದನು. ಚಾವುಂಡರಾಯನು ಗಂಗರಸ 2ನೇ ಮಾರಸಿಂಹನ ಆಳ್ವಿಕೆಯಲ್ಲಿ ಪ್ರಧಾನ ಮಂತ್ರಿ ಹಾಗೂ ದಂಡನಾಯಕನನ್ನಾಗಿ ನಿಯುಕ್ತನಾದನು.

ಬಿರುದುಗಳು:– ರಾಯ ಮತ್ತು ಸತ್ಯ ಯುದಿಷ್ಠಿರ, ಭುಜವಿ ಕ್ರಮ, ವೀರಮಾರ್ತಾಂಡ, ವೈರಿಕುಲಕಾಲದಂಡ, ಸಮರ ದುರಂಧರ ಎಂಬ ಬಿರುದುಗಳನ್ನು ನೀಡಿ ಗೌರವಿಸಿದ್ದನು.

✓ ಅಜಿತ ಸೇನಾಚಾರ್ಯ ಚಾವುಂಡರಾಯನ ಗುರುಗಳಾಗಿದ್ದರು.

✓ ಚಾವುಂಡರಾಯನ "ಚಾವುಂಡರಾಯ ಪುರಾಣವನ್ನು ಹಾಗೂ ಸಂಸ್ಕೃತದಲ್ಲಿ ಚರಿತ್ರಾಸಾರ" ಎಂಬ ಗ್ರಂಥಗಳನ್ನು ಬರೆದನು.

✓ "24 ತೀರ್ಥಂಕರ ಚರಿತ್ರೆಯಾಗಿದೆ."

ದೇವಾಲಯಗಳು:–

ಮಣ್ಣೆ	–	ಪಾತಾಳೇಶ್ವರ, ಸೋಮೇಶ್ವರ ದೇವಾಲಯ
ತಲಕಾಡು	–	ಪಾತಾಳೇಶ್ವರ, ಮರಳೇಶ್ವರ ದೇವಾಲಯ
ವರುಣ	–	ಬೂತೇಶ್ವರ ದೇವಾಲಯ
ನರಸಮಂಗಲ	–	ಶಿವ & ವಿಷ್ಣು ದೇವಾಲಯ
ಕಿತ್ತೂರ	–	ರಾಮೇಶ್ವರ ದೇವಾಲಯ
ಕೋಲಾರ	–	ಕೋಲಾರಮ್ಮ ದೇವಾಲಯ
ನೊಣವಿನಕೆರೆ	–	ಗಂಗೇಶ್ವರ ದೇವಾಲಯ
ನಂದಿ	–	ಭೋಗನಂದೀಶ್ವರ ದೇವಾಲಯ
ಮಳ್ಳೂರ	–	ನಾರಯಣಸ್ವಾಮಿ ದೇವಾಲಯ
ಹಿರೇಮಗಳೂರ	–	ಕೋದಂಡರಾಯ ದೇವಾಲಯ
ಹುಮ್ಮ	–	ಅವನೀತೇಶ್ವರ ದೇವಾಲಯ
ಬನ್ನೂರು	–	ಹನುಮಂತೇಶ್ವರ ದೇವಾಲಯ

ಬಸದಿಗಳು (ಜೈನ ದೇವಾಲಯಗಳು)

ದಡಿಗನು ಶಿವಮೊಗ್ಗ ಜಿಲ್ಲೆಯ ದುಂಡಲಿಯಲ್ಲಿ ಮೊದಲ ಜೈನ ಬಸದಿಯನ್ನು ಕಟ್ಟಿಸಿದನು. ಹೆಗ್ಗಡ ದೇವನ ಕೋಟೆ, ಅಂಕನಾಥಪುರ ಕುಪ್ಪತ್ತೂರ ಮೊದಲಾದ ಬಸದಿಗಳನ್ನು ನಿರ್ಮಿಸಿದ್ದಾರೆ. ಶ್ರವಣಗೋಳದ ಬಸದಿಯನ್ನು ಮಾತೃಭೂಮಿ ಎಂದು ಕರೆಯುತ್ತಾರೆ. ಚಂದ್ರಗಿರ ಬೆಟ್ಟದಲ್ಲಿ ಚಾವುಂಡರಾಯ ಬಸದಿ ಚಂದ್ರಪ್ರಭಾ ಬಸದಿ ಪಾರ್ಶ್ವನಾಥ ಬಸದಿ ಶಾಂತಿನಾಥ ಬಸದಿ ಹೀಗೆ 14 ಬಸದಿಗಳನ್ನು ನಿರ್ಮಿಸಿದ್ದಾರೆ.

ಸ್ತಂಭಗಳು :–

ಬ್ರಹ್ಮದೇವರ ಸ್ತಂಭ ಮತ್ತು ತ್ಯಾಗದ ಬ್ರಹ್ಮದೇವ ಸ್ತಂಭ ಹೀಗೆ 3 ಬಗೆಯ ಸ್ತಂಭಗಳನ್ನು ನಿರ್ಮಿಸಿದ್ದಾರೆ.

- ಕ್ರಿ.ಶ 974ರಲ್ಲಿ ಮಾರಸಿಂಹನ ನೆನಪಿಗಾಗಿ ಕೂಗಿ ಬ್ರಹ್ಮದೇವ ಸ್ತಂಭವನ್ನು ನಿರ್ಮಿಸಿದ್ದಾರೆ.
- ವಿ.ಎ.ಸ್ಮಿತರವರು "ಸದಭಿರುಚಿಗಳಿಗೆ ಇದಕ್ಕೆ ಸರಿಸಮಾನವಾದದು ಭಾರತದ ಕಲಾರಂಗದಲ್ಲಿ ಮತ್ತೊಂದು ಇಲ್ಲ" ಎಂದು ಹೇಳಿದ್ದಾರೆ.
- ವೇಣೂರು & ಕಾರ್ಕಳದಲ್ಲಿ ಗೊಮ್ಮಟನ ವಿಗ್ರಹಗಳನ್ನು ನಿರ್ಮಿಸಿದ್ದಾರೆ.

THE WINNER'S ACADEMY GOKAK

ಬಾದಾಮಿ ಚಾಲುಕ್ಯರು: (Chalukya's of Badami)



❖ ಬಾದಾಮಿಯ ಚಾಲುಕ್ಯರು:-

ಸ್ಥಾಪಕ : ಜಯಸಿಂಹ
ರಾಜಧಾನಿ : ಬಾದಾಮಿ ಮತ್ತೊಂದು ಹೆಸರು 'ವಾತಾಪಿ'
ಚಿಹ್ನೆ : ಆದಿವರಾಹ

ಚಾಲುಕ್ಯರಲ್ಲಿ ಬಾದಾಮಿ ಚಾಲುಕ್ಯರು, ಕಲ್ಯಾಣ ಚಾಲುಕ್ಯರು, ಮತ್ತು ವೆಂಗಿಯ ಚಾಲುಕ್ಯರು ಎಂಬ 3 ಶಾಖೆಗಳಿವೆ.

❖ ಆಧಾರಗಳು: Sourees:-

- ಹ್ಯುಯನ್‌ತ್ಸಾಂಗ್ ಹಾಗೂ ಮುಸ್ಲಿಂ ಚರಿತ್ರೆಕಾರ ತಬರಿಯ ಬರವಣಿಗೆಗಳು ಮತ್ತು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ರಚನೆಯಾದ ಕೆಲವು ಸಾಹಿತ್ಯ ಗ್ರಂಥಗಳು ನೆರವಾಗಿವೆ.

1) ವಿದೇಶಿ ಸಿದ್ಧಾಂತ:– ಚಾಲುಕ್ಯರು ತುರ್ಕಿ ಅಥವಾ ಇರಾಕಿನ ಸೆಲ್ಯೂಸಿಡ್ ಗುಂಪಿನಿಂದ ಬಂದವರೆಂದು ಡಾ॥ ಹಾರ್ನೆಲ್ಸ್, ವಿ.ಎ. ಸ್ಮಿತ್, ಫ್ಲೀಟ್ ಮೊದಲಾದ ವಿದ್ವಾಂಸರು ವಾದಿಸಿದ್ದಾರೆ.

2) ಕನ್ನಡ ಸಿದ್ಧಾಂತ : Kannada Theory

- ಚಾಲುಕ್ಯ ಅರಸರನ್ನು ಅರಸು ಎಂಬ ಕನ್ನಡ ಪದದಿಂದ ಕರೆದಿದ್ದಾರೆ. ಮತ್ತು ಅವರ ಹೆಸರುಗಳಾದ ಕತ್ತಿಯರಸ, ಬಿಟ್ಟರಸ, ಮಂಗಳರಸ, ಪುಲಿಕೇಶಿ, ಇತ್ಯಾದಿಗಳು ಕನ್ನಡದವು.
- ಮೊದಲು ಇವರು ಕದಂಬರ ಸಾಮಂತರಾಗಿದ್ದರು. ನಂತರ ಸ್ವತಂತ್ರರಾದರು

❖ ಚಾಲುಕ್ಯರ ರಾಜಕೀಯ ಇತಿಹಾಸ:–

- "ಮಂಗಳೇಶ"ನ ಮಹಾಕೂಟಸ್ತಂಭ ಶಾಸನ ಮತ್ತು "ಪುಲಕೇಶಿ"ಯ ಐಹೊಳೆ ಶಾಸನಗಳ ಪ್ರಕಾರ ಜಯಸಿಂಹ ಬಾದಾಮಿ ಚಾಲುಕ್ಯ ವಂಶದ ಸ್ಥಾಪಕ.
- ಜಯಸಿಂಹನಿಗೆ ವಲ್ಲಭ, ವಲ್ಲಭೇಂದ್ರ ವಲ್ಲಭರಾಜ ಎಂಬ ಬಿರುದುಗಳಿದ್ದವು.

❖ ಒಂದನೇ ಪುಲಕೇಶಿ: (ಕ್ರಿ.ಶ 547–566):–

- ಒಂದನೇ ಪುಲಕೇಶಿಯನ್ನು ಚಾಲುಕ್ಯ ವಂಶದ ನಿಜವಾದ ಸ್ಥಾಪಕನೆಂದು ಪರಿಗಣಿಸಲಾಗಿದೆ.
- ಮಂಗಳೇಶನ ಶಾಸನಗಳು ಪುಲಕೇಶಿಯನ್ನು ಸ್ಮೃತಿ, ಪುರಾಣಗಳು ರಾಮಾಯಣ, ಮಹಾ ಭಾರತಗಳಲ್ಲಿ ಪಾಂಡಿತ್ಯವುಳ್ಳವನೆಂದು ಹಿರಣ್ಯಗರ್ಭ, ಮಹಾವಾನ, ಅಗ್ನಿಚಯನ, ಬಹುಸುವರ್ಣ ವಾಜಪೇಯ, ಮೊದಲಾದ ಯಜ್ಞಗಳನ್ನು ಆಚರಿಸಿದನೆಂದು ಹೇಳಲಾಗಿದೆ.

ಬಿರುದುಗಳು: ಸತ್ಯಾಶ್ರಯ, ಶ್ರೀವಲ್ಲಭ, ಶ್ರೀಪೃಥ್ವಿವಲ್ಲಭ, ವಲ್ಲಭೇಶ್ವರ, ರಣವಿಕ್ರಮ.

❖ ಒಂದನೇ ಕೀರ್ತಿವರ್ಮ: (ಕ್ರಿ.ಶ 566–596):–

ಒಂದನೇ ಪುಲಿಕೇಶಿಯ ಮಗ 1ನೇ ಕೀರ್ತಿ ವರ್ಮನು ಪಟ್ಟವೇರಿದನು. ಇವನು ಸಹ ತಂದೆಯಂತೆ ಪರಾಕ್ರಮಿ ಇವನಿಗೆ ಕೀರ್ತಿರಾಜ ಕತ್ತಿ ಅರಸ ಎಂಬ ನಾಮಗಳಿದ್ದವು.

- ಬನವಾಸಿಯ ಕದಂಬರನ್ನು, ಕೊಂಕಣದ ಮೌರ್ಯರನ್ನು ತಲಕಾಡಿನ ಗಂಗರನ್ನು ದಕ್ಷಿಣ ಕನ್ನಡದ ಆಲೂಪರನ್ನು, ನಳವಾಡಿಯ (ಬಳ್ಳಾರಿ ಜಿಲ್ಲೆ) ನಳರನ್ನು ಸೋಲಿಸಿದನು. ರೇವತಿ (ಗೋವಾ) ದ್ವೀಪವನ್ನು ಗೆದ್ದನು.
- ಪುರಿಯನ್ನು ಗೆದ್ದು ಅದಕ್ಕೆ ಧ್ರುವಸೇನನನ್ನು ರಾಜ್ಯಪಾಲವನ್ನಾಗಿ ನೇಮಿಸಿದನು.
- ಇವನು ಬಾದಾಮಿಯಲ್ಲಿ ವಿಷ್ಣು ಗುಹಾಲಯವನ್ನು ನಿರ್ಮಿಸಿದನು. ಬಾದಾಮಿಯಲ್ಲಿ ಲೋಕವಿಖ್ಯಾತ ಗುಹಾದೇವಾಲಯಗಳ ನಿರ್ಮಾಣ ಕಾರ್ಯ ನಡೆದಿದ್ದು ಕೀರ್ತಿವರ್ಮನ ಕಾಲದಲ್ಲಿ.
- ಬಿರುದುಗಳು: "ಪರಾಕ್ರಮಿ, ಸತ್ಯಾಶ್ರಯ, ಶ್ರೀಪೃಥ್ವಿವಲ್ಲಭ"
- ಇತನನ್ನು "ಪ್ರಥಮ ವಾತಾಪಿಯ ನಿರ್ಮಾಪಕನೆಂದು" ಕರೆಯಲಾಗಿದೆ.

❖ ಮಂಗಳೇಶ: (ಕ್ರಿ.ಶ 596–616):–

ಈತ ಕ್ರಿ.ಶ 602 ರಲ್ಲಿ ಮಧ್ಯಭಾರತವನ್ನು ಆಳುತ್ತಿದ್ದ ಕಳಚೂರಿ ರಾಜ ಬುದ್ಧರಾಜನ ಮೇಲೆ ಯುದ್ಧ ಸಾರಿದನು. ಇದೊಂದು ಭಯಂಕರ ಯುದ್ಧವಾಗಿದ್ದು "ಸೇನಾಬಲಗಳ ತುಳಿತದಿಂದ ಎದ್ದು ಧೂಳು ಪೂರ್ವಾಪರ ಸಮುದ್ರ ತೀರಗಳನ್ನು ಆವರಿಸಿತೆಂದು ಮಂಗಳೇಶ ಅವರ ಸಂಪತ್ತನ್ನೆಲ್ಲ ಕಸಿದುಕೊಂಡನೆಂದು" ಐಹೊಳೆ ಶಾಸನ ಹೇಳುತ್ತದೆ.

ಬಿರುದುಗಳು: ರಣವಿಕ್ರಮ, ರಣವಿಕ್ರಾಂತ, ಪರಮಭಾಗವತ, ಶ್ರೀಪೃಥ್ವಿವಲ್ಲಭ.

- ಮಹಾಕೂಟದಲ್ಲಿ ಮಹಾಕೂಟೇಶ್ವರ ಆಲಯ ಹಾಗೂ ಮಹಾಕೂಟ ಸ್ತಂಭ ಶಾಸನಗಳನ್ನು ನಿರ್ಮಿಸಿದನು. ಇವನನ್ನು ಚಾಲುಕ್ಯ ಕಲೆಯ ಪಿತಾಮಹ ಎಂದು ಕರೆಯಲಾಗಿದೆ.

❖ ಇಮ್ಮಡಿ ಪುಲಕೇಶಿ: (ಕ್ರಿ.ಶ 610–642):–

ಇಮ್ಮಡಿ ಪುಲಕೇಶಿಯು ಪರಾಕ್ರಮಿ, ದಖನ್ ಸಾರ್ವಭೌಮ, ಮಹಾಪ್ರಚಂಡ, ಚಾಲುಕ್ಯಾಧಿಪತಿ ಎಂದು ಕರೆಸಿಕೊಂಡವನು, ಬಾದಾಮಿ ಚಾಲುಕ್ಯರಲ್ಲಿ ಅತ್ಯಂತ ಪ್ರಸಿದ್ಧ ದೊರೆ.

- ಐಹೊಳೆ ಶಾಸನ ಮತ್ತು ಹ್ಯೂಯೆನ್‌ತ್ಸಾಂಗ್‌ನ ಬರವಣಿಗೆಗಳು ನೆರವಾಗಿದೆ. ಇಮ್ಮಡಿ ಪುಲಕೇಶಿಯ ಆಸ್ಥಾನ ಕವಿ ರವಿ ಕೀರ್ತಿ ಐಹೊಳೆಯ ಮೇಗುತಿಯ ದೇವಾಲಯದ ಗೋಡೆಯ ಮೇಲೆ ಸಂಸ್ಕೃತದಲ್ಲಿ ಐಹೊಳೆ ಶಾಸನ ಕೆತ್ತಿಸಿದನು.

❖ ದಿಗ್ವಿಜಯಗಳು: Conquests:-

1) ಮಂಗಳೇಶನೊಡನೆ ಯುದ್ಧ: War with Mangalesha

ವಯಸಿಗೆ ಬಂದ ಇಮ್ಮಡಿ ಪುಲಕೇಶಿಗೆ ಸಿಂಹಾಸನವನ್ನು ಬಿಟ್ಟು ಕೊಡದೆ ಮಂಗಳೇಶನು ಅದನ್ನು ತನ್ನ ಮಗ ಸುಂದರ ವರ್ಮನಿಗೆ ಬಿಟ್ಟುಕೊಡಲು ಬಯಸಿದನು. ಹಾಗಾಗಿ ಪುಲಿಕೇಶಿಯ ಕೊಲೆಯತ್ನ ನಡೆಯಿತೆನ್ನಲಾಗಿದೆ. ಪುಲಕೇಶಿ ರಾಜ್ಯವನ್ನು ಬಿಟ್ಟು ಹೋಗಿ ಸೈನ್ಯ ಕಟ್ಟಿ ಚಿಕ್ಕಪ್ಪ ಮಂಗಳೇಶನನ್ನು ಅಂತರ್ ಯುದ್ಧದಲ್ಲಿ ಸೋಲಿಸಿ ಕೊಂದುಹಾಕಿ ಚಾಲುಕ್ಯ ಸಿಂಹಾಸನವನ್ನೇರಿದನು.

2) ರಾಷ್ಟ್ರಕೂಟರೊಡನೆ ಯುದ್ಧ : War with Rastrakuts

ಪುಲಕೇಶಿಯು ಮಂಗಳೇಶನೊಡನೆ ಯಾದವಿ ಯುದ್ಧ ಕಲಹದಲ್ಲಿದ್ದಾಗ ಅದರ ಲಾಭ ಪಡೆದ ಚಾಲುಕ್ಯರ ಸಾಮಂತರಾದ ರಾಷ್ಟ್ರಕೂಟರಾದ ಗೋವಿಂದ ಮತ್ತು ಅಪ್ಪಾಯಿಕರು ದಂಗೆ ಎದ್ದು ಸ್ವಾತಂತ್ರ್ಯ ಸಾರಿಕೊಂಡರು. ಸೈನ್ಯ ಸಮೇತ ಹೊರಟ ಪುಲಕೇಶಿ ಅವರನ್ನು ಭೀಮಾ ನದಿ ತೀರದಲ್ಲಿ ಸೋಲಿಸಿದನು.

3) ದಖನ್ ರಾಜ್ಯಗಳೊಡನೆ ಯುದ್ಧ : War with Deccan States

ಬನವಾಸಿಯ ಕದಂಬರನ್ನು, ಕೊಂಕಣದ ಮೌರ್ಯರನ್ನು, ತಲಕಾಡಿನ, ಗಂಗರನ್ನು, ದಕ್ಷಿಣ ಕನ್ನಡದ, ಆಲೂಪರನ್ನು ಸೋಲಿಸಿದನ್ನು ಹಾಗೂ ಗಂಗ, ಆಲೂಪರೊಂದಿಗೆ ವೈವಾಹಿಕ ಸಂಬಂಧಗಳನ್ನು ಹೊಂದಿದನು.

4) ಉತ್ತರ ಭಾರತದ ಮೇಲೆ ದಿಗ್ವಿಜಯ : North India Conques

ಪುಲಕೇಶಿಯು ಉತ್ತರದ ಕಡೆ ತಿರುಗಿಸಿ ಪುರಿಯನ್ನು ಗೆದ್ದು, ಲಾಟರು, ಪ್ರತಿಹಾರರು, ಗುರ್ಜರರು, ಇದರ ಫಲವಾಗಿ ಮಹಾರಾಷ್ಟ್ರದ ಮಾಳ್ವರನ್ನು ಸೋಲಿಸಿದನು.

5) ಹರ್ಷವರ್ಧನನೊಡನೆ ಯುದ್ಧ: (630) Battle of Narmada

- ಪುಲಕೇಶಿಯ ಸರ್ವಶ್ರೇಷ್ಠ ಯುದ್ಧವೇ 'ಉತ್ತರ ಪ್ರಥೇಶ್ವರ' ಎಂಬ ಬಿರುದುಗಳಿಸಿದ ಕನೋಜಿನ ಹರ್ಷವರ್ಧನನೊಡನೆ ಮಾಡಿದ ಯುದ್ಧ 'ದಕ್ಷಿಣ ಪಥೇಶ್ವರನಾದ' ಪುಲಿಕೇಶಿ ಇವರಿಬ್ಬರು ಶಕ್ತಿಯಲ್ಲಿ ಸರಿ ಸಮಾನ ಕಲಿಗಳು. ಪರಮೇಶ್ವರ ಎಂಬ ಬಿರುದುಗಳಿಸಿದನು.
- ಕರ್ನಾಟಕ ಮಹಾರಾಷ್ಟ್ರ ಕೊಂಕಣಗಳ ತ್ರೈರಾಷ್ಟ್ರಾಧಿಪತಿಯಾದನೆಂದು ಮತ್ತು ಈ ಯುದ್ಧದಲ್ಲಿ ಸೋತು ಹರ್ಷವರ್ಧನ ತನ್ನ ಹರ್ಷವನ್ನು ಕಳೆದುಕೊಂಡನೆಂದು ಐಹೊಳೆ ಶಾಸನವು ಹೇಳುತ್ತದೆ.

6) ಪೂರ್ವ ಭಾರತದೊಂದಿಗೆ ಯುದ್ಧ: Wars in Eastern India.

ಉತ್ತರದಿಂದ ದಕ್ಷಿಣಾಭಿಮುಖವಾಗಿ ಸೈನ್ಯ ಸಮೇತ ಹೊರಟ ಪುಲಿಕೇಶಿ ಪೂರ್ವದ ಮಧ್ಯಪ್ರದೇಶ, ಓರಿಸ್ಸಾಗಳಲ್ಲದೆ. ಕೋಸಲ ಮತ್ತು ಕಳಿಂಗ ರಾಜ್ಯಗಳನ್ನು ಗೆದ್ದನು. ಆಂಧ್ರದ 12 ಜನ ಅರಸರನ್ನು ಸೋಲಿಸಿ ವೆಂಗಿ ಮಂಡಲ ಮತ್ತು ಪಿಷ್ಟಪುರವನ್ನು ಗೆದ್ದನು.

ವಿಷ್ಣುಕುಂಡಿಗಳ ಸೋಲು:– ಪುಲಕೇಶಿಯ ಆಕ್ರಮಣ ಕಾಲದಲ್ಲಿ ವಿಷ್ಣುಕುಂಡಿಗಳ ಆಂಧ್ರದಲ್ಲಿ ಪ್ರಬಲರಾಗಿದ್ದರು. ಪುಲಿಕೇಶಿ ಕುಣಾಲದ ಅಂದರೆ ವಿಷ್ಣುಕುಂಡಿಗಳ ವೆಂಗಿ ದೇಶದತ್ತ ಸಾಗಿದನು.

7) ಪಲ್ಲವರೊಡನೆ ಯುದ್ಧ (ಪಲ್ಲವ ಚಾಳುಕ್ಯರ ಸಂಘರ್ಷ)

- ಪುಲಕೇಶಿ ಪಲ್ಲವರ ದೊರೆ 1ನೇ ಮಹೇಂದ್ರ ವರ್ಮನನ್ನು ಪುಲ್ಲಲೂರು ಕದನದಲ್ಲಿ ಸೋಲಿಸಿ ಕಂಚಿಯನ್ನು ವಶಪಡಿಸಿಕೊಂಡನು.

8) ಸಂಗಮ ರಾಜ್ಯಗಳೊಡನೆ ಯುದ್ಧ:– ಪುಲಕೇಶಿ ಕಾವೇರಿ ನದಿಯನ್ನು ದಾಟಿ ಚೋಳ, ಚೇರ ಪಾಂಡ್ಯ 4 ಕೇರಳರನ್ನು ಸೋಲಿಸಿದನು.

9) ಪುಲಿಕೇಶಿಯ ಅಂತಿಮ ಯುದ್ಧ : Last war of Pulikeshi

- ಮಹೇಂದ್ರವರ್ಮನ ಮಗ 1ನೇ ನರಸಿಂಹ ವರ್ಮನು ತನ್ನ ತಂದೆಯ ಸಾವಿಗೆ ಪ್ರತೀಕಾರ ತೀರಿಸಿಕೊಳ್ಳಲು ಹೊಂಚು ಹಾಕುತ್ತಿದನು. ಪುಲಿಕೇಶಿ ಅನಾರೋಗ್ಯದಿಂದ ಹಾಸಿಗೆ ಹಿಡಿದಾಗಲೂ ಮತ್ತೊಮ್ಮೆ 2ನೇ ಬಾರಿಗೆ ಪಲ್ಲರ ಮೇಲೆ ದಂಡೆತ್ತಿ ಹೋದನು. ಆದರೆ ಪಾರಿಯಾಲ ಮಣಿಮಂಡಲ, ಸುರಮಾರಗಳಲ್ಲಿ ನಡೆದ ಕದನಗಳಲ್ಲಿ ಪಲ್ಲವರು ಗೆದ್ದರು.
- ನರಸಿಂಹವರ್ಮನು ಬಾದಾಮಿಯನ್ನು ಆಕ್ರಮಿಸಿಕೊಂಡು “ವಾತಾಪಿಗೊಂಡನ್” ಎಂಬ ಬಿರುದು ಧರಿಸಿದನು.

10)ಅರಬ್ಬರ ದಮನ : Suppression of the Arabs

ಕ್ರಿ.ಶ 637ರಲ್ಲಿ ಬಾಂಬೆ ಬಳಿಯ ಠಾಣ ಬಂದರಿನ ಮೇಲೆ ದಾಳಿ ಮಾಡಿದ ಪುಲಕೇಶಿ ಅಲ್ಲದ್ದ ಅರಬ್ಬರನ್ನು ಹೊರಗಟ್ಟಿದನು.

“ಬಿರುದು: ಸತ್ಯಾಶ್ರಯ, ಸಾಹಸರಸಿಕ, ಪರಮೇಶ್ವರ, ಶ್ರೀಪೃಥ್ವಿವಲ್ಲಭ, ಪರಮಭಾಗವತ, ಸಮಸ್ತ, ಭೂ ಆಶ್ರಯವಲ್ಲಭ, ವಲ್ಲಭರಾಜ, ವಲ್ಲಭೇಂದ್ರ, ಶ್ರೀ ಮಹಾರಾಜಾಧಿರಾಜ, ದಕ್ಷಿಣ ಪಥೇಶ್ವರ.

❖ ಹ್ಯೂಯನ್ ತ್ಸಾಂಗ್‌ನ ಭೇಟಿ:

ಚೀನಾದ ಬೌದ್ಧ ಯಾತ್ರಿಕ ಹ್ಯೂಯನ್ ತ್ಸಾಂಗನು ಇಮ್ಮಡಿ ಪುಲಕೇಶಿಯ ಆಸ್ಥಾನಕ್ಕೆ ಭೇಟಿ ನೀಡಿದ್ದನು. ಅವನು ತನ್ನ “ಸಿ.ಯು.ಕಿ” ಕೃತಿಯಲ್ಲಿ ಪುಲಕೇಶಿಯ ಪರಾಕ್ರಮ ರಾಜನಿಷ್ಠೆ ಜನತೆಯ ಪ್ರಾಮಾಣಿಕತೆ, ಉದಾರತೆ ದೇಶದ ಸಂಪದಭಿವೃದ್ಧಿ ಕುರಿತು ಹೊಗಳಿದ್ದಾರೆ.

❖ ಒಂದನೇ ವಿಕ್ರಮಾದಿತ್ಯ (ಕ್ರಿ.ಶ 655–681)

– ಪಲ್ಲವರ ದೊರೆಗಳಾದ 2ನೇ ನರಸಿಂಹವರ್ಮ, 2ನೇ ಮಹೇಂದ್ರವರ್ಮ ಮತ್ತು 1ನೇ ಪರಮೇಶ್ವರ ವರ್ಮರನ್ನು ಸೋಲಿಸಿ ಕಂಚಿಯನ್ನು ಆಕ್ರಮಿಸಿದನು.

ಬಿರುದುಗಳು: ರಣರಸಿಕ, ಪರಮೇಶ್ವರ, ಶ್ರೀಪೃಥ್ವಿವಲ್ಲಭ, ಮಹಾರಾಜಾಧಿರಾಜ, ಶ್ರೀವಲ್ಲಭ ಮತ್ತು ಅನಿವಾರಿತ"

❖ ವಿನಯಾಧಿತ್ಯ (ಕ್ರಿ.ಶ 681–696)

- ರನ್ನನು ಗದಾಯುದ್ಧದಲ್ಲಿ ಇವನ್ನು "ದುರ್ಧರಮಲ್ಲ" ಎಂದು ಕರೆದಿದ್ದಾರೆ. ಇವನ ರಾಣಿ "ವಿನಯಾವತಿ" ಬಾದಾಮಿಯಲ್ಲಿ ಬ್ರಹ್ಮ ವಿಷ್ಣು ಮತ್ತು ಮಹೇಶ್ವರ ವಿಗ್ರಹಗಳನ್ನು ಸ್ಥಾಪಿಸಿದಳು.

❖ ವಿಜಯಾದಿತ್ಯ: (ಕ್ರಿ.ಶ 696–733)

ಇವನು ಕಂಚಿಯನ್ನು ಮುತ್ತಿ ಪಲ್ಲವರ ಇಮ್ಮಡಿ ಪರಮೇಶ್ವರವರ್ಮನನ್ನು ಸೋಲಿಸಿ ಕಪ್ಪಕಾಣಿಕೆಯನ್ನು ವಸೂಲಿ ಮಾಡಿದನೆಂದು ಉಲಚಾಲ ಶಾಸನ ಹೇಳುತ್ತದೆ.

- ಉತ್ತರ ಭಾರತದ ಕನೋಜಿನ ಯಶೋವರ್ಮನನ್ನು ಸೋಲಿಸಿದನು.
- ಪಲ್ಲವರ ಮೇಲಿನ ವಿಜಯದ ನೆನಪಿಗೆ ಪಟ್ಟದಕಲ್ಲಿನ ವಿಜಯೇಶ್ವರ ದೇವಾಲಯವನ್ನು ನಿರ್ಮಿಸಿದನು.

❖ ಎರಡನೇ ವಿಕ್ರಮಾದಿತ್ಯ: (ಕ್ರಿ.ಶ 733–745)

ಅರಬ್ಬರು ಸಿಂಧ್‌ನ್ನು ಗೆದ್ದು ದಕ್ಷಿಣಕ್ಕೆ ಸಾಗಿ ಚಾಲುಕ್ಯರಿಗೆ ಉಪದ್ರವಕಾರಿಯಾಗುತ್ತಿದ್ದರು. ಅರಬ್ಬರ ದಾಳಿಗಳನ್ನು ಲಾಟದ ಮಾಂಡಲಿಕ ಜಯಸಿಂಹನ ಮಗ ಪುಲಕೇಶಿ ಹಿಮ್ಮೆಟ್ಟಿಸಿದನು.

- ಕೈಲಾಸನಾಥ ದೇವಾಲಯದಲ್ಲಿ ತನ್ನ ಸಾಧನೆಗಳನ್ನು ಹೇಳುವ ಶಾಸನವನ್ನು ಕನ್ನಡಲ್ಲಿ ಬರೆಯಿಸಿದನು.

- ಇವನ ರಾಣಿಯರಾದ ಹೈಹಯ ವಂಶದ ಲೋಕಮಹಾದೇವಿ ಮತ್ತು ತ್ರೈಲೋಕ್ಯ ಮಹಾದೇವಿಯರು, ಪಟ್ಟದಲ್ಲಿನಲ್ಲಿ ಅವನ ಕಂಚಿಯ ದಂಡಯಾತ್ರೆಯ ಜ್ಞಾಪಕಾರ್ಥ ವಿರೂಪಾಕ್ಷ ಮತ್ತು ತ್ರೈಲೋಕೇಶ್ವರ ಎಂಬೆರಡು ಪ್ರಸಿದ್ಧ ದೇವಾಲಯಗಳನ್ನು ನಿರ್ಮಿಸಿದರು.
- ತ್ರಿಭುವನಾಚಾರಿ ವಿರೂಪಾಕ್ಷ ದೇವಾಲಯದ ನಿರ್ಮಾಣ ಶಿಲ್ಪಿ.
- ಲೋಕಮಹಾದೇವಿಯ ಆಶ್ರಯದಲ್ಲಿ "ಆಚಲೆ" ಎಂಬ ನೃತ್ಯಗಾರ್ತಿ ಇದ್ದಳು.

❖ ಇಮ್ಮಡಿ ಕೀರ್ತಿವರ್ಮ : ಕ್ರಿ.ಶ 745–757

ತ್ರೈಲೋಕ್ಯ ಮಹಾದೇವಿಯ ಮಗನಾದ ಇಮ್ಮಡಿ ಕೀರ್ತಿವರ್ಮನು ಬಾದಾಮಿ ಚಾಲುಕ್ಯ ವಂಶದ ಕಡೆಯ ಅರಸ.

- ರಾಷ್ಟ್ರಕೂಟ ಅರಸ ದಂತಿದುರ್ಗನು ಇವನನ್ನು ಸೋಲಿಸಿ ರಾಷ್ಟ್ರಕೂಟ ವಂಶವನ್ನು ಸ್ಥಾಪಿಸಿದನು.

❖ ಚಾಳುಕ್ಯರ ಆಡಳಿತ: Chalukya's Administration.

1) ಕೇಂದ್ರಾಡಳಿತ : Central Administration:-

ರಾಜ : ರಾಜನೇ ರಾಜ್ಯದ ಸರ್ವೋಚ್ಚ ಒಡೆಯ

ಮಂತ್ರಿಗಳು:

1) ದಂಡಾಧಿಕಾರಿ, ಯುವರಾಜ, ಅಂತಃಪುರಾಧ್ಯಕ್ಷ = ಅರಮನೆ ಮೇಲ್ವಿಚಾರಕ
2) ಮನೆವೆರ್ಗಡೆ, ಪಸಾಯಿತ, ಅಕ್ಷಪಟಲಾಧ್ಯಕ್ಷ = ದಾಖಲೆಗಳ ನಿರ್ವಾಹಕ.
3) ಶ್ರೀ ಹೆಗ್ಗಡೆ = ಜಿಲ್ಲಾಧಿಕಾರಿ
4) ನಾಡಗಾವುಂಡ = ತಾಂಬೂಲವಾಹಕ
5) ಭಂಡಾರಿ = ಕೋಶಾಧ್ಯಕ್ಷ
6) ರಜ್ಜಕ = ಕಂದಾಯ ಅಧಿಕಾರಿ

ಸೇನಾಡಳಿತ:– ಚಾಲುಕ್ಯರ ಸೈನ್ಯವನ್ನು "ಕರ್ನಾಟಕ ಬಲ" ಎಂದು ಕರೆಯುತ್ತಿದ್ದರು.

ರಾಜ್ಯಾದಾಯ ಮೂಲಗಳು:

- ಭೂ ಕಂದಾಯ ರಾಜ್ಯದ ಪ್ರಮುಖ ವರಮಾನದ ಮೂಲವಾಗಿತ್ತು.
- ಒಟ್ಟು ಉತ್ಪಾದನೆಯ 1/6 ಭಾಗವಾಗಿತ್ತು: ಗ್ರಾಮ ಸಭೆಗಳು ಕಂದಾಯ ಸಂಗ್ರಹಿಸಿ ಕೇಂದ್ರಕ್ಕೆ ಸಲ್ಲಿಸುತ್ತಿದ್ದವು. ಅದನ್ನು ಸಿದ್ದಯ ಎನ್ನುತ್ತಿದ್ದರು.
- ವಡ್ಡರಾವುಲ (ಅರಸು ಕುಟುಂಬದ ಮೇಲಿನ ತೆರಿಗೆ)
- ಹೆರ್ಜೆಂಕ = ಷೇರುಗಳ ಮೇಲಿನ ತೆರಿಗೆ
- ಬಿರ್ಕೊಡೆ = ವ್ಯಾಪಾರ ತೆರಿಗೆ
- ಪನ್ನೆಯ = ವೀಳ್ಯದಲೆ

ಭೂಮಾಪನ: ಕೋಲು ಗಂಗಾಕೋಲು ಭೇರುಂಡ ಕೋಲು, ಮರ್ಗುಂಡಿ ಕೋಲು, ಕಚ್ಚುಲು ಕೋಲು, ಬತ್ತೊಲು ಕೋಲು

- ನಿವರ್ತನ ಮಟ್ಟ, ಕಷ್ಮ ಎಂಬ ಮೂರು ಸಾಮಾನ್ಯ ಭೂಮಾಪನ ಘಟಕಗಳು ರೂಢಿಯಲ್ಲಿದ್ದವು.

2) ಪ್ರಾಂತ್ಯಾಡಳಿತ:– ಪ್ರಾಂತ್ಯ (ಮಂಡಳಿ)– ನಾಡು ವಿಷಯ – ಗ್ರಾಮಗಳಾಗಿ ವಿಂಗಡಿಸಲಾಗಿತ್ತು.

ಸಾಹಿತ್ಯ:–

- ಕಪ್ಪೆ ಅರಭಟ್ಟನ ಬಾದಾಮಿ ಶಾಸನ ಕನ್ನಡ ಅದು ತ್ರಿಪದಿಯಲ್ಲಿದೆ.
- ಇಮ್ಮಡಿ ಪುಲಕೇಶಿಯ ಸೊಸೆ ಚಂದ್ರಾದಿತ್ಯದ ರಾಣಿ 'ವಿಜ್ಜಿಕೆ ಅಥವಾ ವಿಜಯಭಟ್ಟಾರಿಕೆ" ಕೌಮುದಿ ಮಹೋತ್ಸವ" ಎಂಬ ಸಂಸ್ಕೃತ ನಾಟಕ ರಚಿಸಿದಳು.
- ಶಿವಭಟ್ಟಾರಕನು ಸಂಸ್ಕೃತದಲ್ಲಿ "ಹರಪಾರ್ವತೀಯ" ಎಂಬ ನಾಟಕ ರಚಿಸಿದನು.
- ಅರಭಟ್ಟನು ಸಂಸ್ಕೃತದಲ್ಲಿ ಕಲ್ಪಸೂತ್ರಗಳನ್ನು ರಚಿಸಿದನು.
- ಅನಾಮಧೇಯ – ಕರ್ನಾಟೇಶ್ವರ ಕಥಾ (ಪುಲಕೇಶಿಯ ಕಥೆ)

❖ ಬಾದಾಮಿ ಚಾಳುಕ್ಯರ ವಾಸ್ತುಶಿಲ್ಪ:–

- ಚಾಳುಕ್ಯರನ್ನು "ಕರ್ನಾಟಕ ದೇವಾಲಯ ವಾಸ್ತುಶಿಲ್ಪದ ಪ್ರವರ್ತಕರು" ಎಂದು ಕರೆಯಲಾಗಿದೆ.
- ಪಟ್ಟದಕಲ್ಲನ್ನು ವಿಶ್ವಪರಂಪರೆ ತಾಣಗಳ ಪಟ್ಟಿಗೆ ಸೇರಿಸಿದ್ದಾರೆ.

ಶಿಲ್ಪಿಗಳು: ಚಾಲುಕ್ಯ ಕಲೆಯನ್ನು ವೈಭವೀಕರಿಸಿದ ಪ್ರಮುಖ ಶಿಲ್ಪಿಗಳೆಂದರೆ – ರೇವಡಿ ಓವಜ್ಜ, ನರಸೋಜುಮ ಅನಿವಾರಿತ, ಗುಂಡ, ಸರ್ವಸಿದ್ಧಿ, ಆಚಾರ್ಯ, ಬಲದೇವ, ಪುಲ್ಲಪ್ಪ, ಚೆಂಗಮ, ದಾಮೋದರ

❖ ಚಾಲುಕ್ಯ ವಾಸ್ತುಶಿಲ್ಪ:–

1) **ಗುಹಾಲಯಗಳು (ಬಾದಾಮಿ):–** ಚಾಲುಕ್ಯರ ರಾಜಧಾನಿಯಾದ (ಬಾಗಲಕೋಟೆ ಜಿಲ್ಲೆಯ ಬಾದಾಮಿಯಲ್ಲಿ 4 ಗುಹಾಂತರ ದೇವಾಲಯಗಳಿವೆ. ಅವನ್ನು 1ನೇ ಕೀರ್ತಿವರ್ಮ ಮತ್ತು ಮಂಗಳೇಶರು ನಿರ್ಮಿಸಿದರು.

✓ ಒಂದನೇ ಗುಹಾಲಯ:–

ಇದು ಶೈವ ಗುಹೆ, ಇದು ಜಗಲಿ ಆಕಾರದಲ್ಲಿದ್ದು 4 ಸುಂದರ ಕೆತ್ತನೆಗಳಿಂದ ಕೂಡಿದ ಕಂಬಗಳಿವೆ. ಈ ಗುಹೆಯಲ್ಲಿನ ಗಮನಾರ್ಹವಾದ ಶಿಲ್ಪಗಳೆಂದರೆ 18 ಕೈಗಳುಳ್ಳ ನಟರಾಜ, ಅರ್ಧನಾರೀಶ್ವರ, ತ್ರಿಭಂಗದಲ್ಲಿರುವ ಮಹಿಷಾಸುರಮರ್ದಿನಿ ಹಾರುತ್ತಿರುವ ಭಂಗಿಯಲ್ಲಿನ, ವರ್ಣ ಚಿತ್ರಗಳು ಕಂಡು ಬರುತ್ತವೆ.

✓ ಎರಡನೇಯ ಗುಹಾಲಯ:–

ಇದು ವೈಷ್ಣವ ಗುಹೆ, ಗುಹಾಲಯದಲ್ಲಿ ತ್ರಿವಿಕ್ರಮ, ವರಾಹ, ವಾಮನ, ಮೊದಲಾದ ವಿಷ್ಣು ಲೀಲೆಗಳನ್ನು ಕೆತ್ತಲಾಗಿದೆ. ಇಲ್ಲಿನ ಅತ್ಯಾಕರ್ಷಕವಾದ ಎರಡು ಶಿಲ್ಪಿಗಳೆಂದರೆ ವಿಷ್ಣು, ಪೃಥ್ವಿಯನ್ನು ಎಡಗೈಲಿ ಎತ್ತಿ ಹಿಡಿದಿರುವ ವರಾಹ, ಮೂರ್ತಿ ಮತ್ತು ರಕ್ಕಸನನ್ನು ಮಟ್ಟಿ ನಿಂತಿರುವ ವರಾಹನ ಬೃಹದಾಕಾರದ ಮೂರ್ತಿಗಳು.

✓ ಮೂರನೇ ಗುಹಾಲಯ:

ಇದು ವೈಷ್ಣವ ಗುಹೆ. ಇದನ್ನು ಚಾಲುಕ್ಯ ವಾಸ್ತುಶಿಲ್ಪ ಪಿತೃ ಎನಿಸಿರುವ ಮಂಗಳೇಶನು ಕ್ರಿ.ಶ 578 ರಲ್ಲಿ ನಿರ್ಮಿಸಿದನೆಂದು ಅಲ್ಲಿನ ಸಂಸ್ಕೃತ ಶಾಸನದಿಂದ ತಿಳಿದು ಬರುತ್ತದೆ.

✓ ನಾಲ್ಕನೇ ಗುಹೆ:

ಇದು ಜೈನ ಗುಹೆ, ಇದು ಆದಿ ತೀರ್ಥಂಕರನಾದ ಪಾರ್ಶ್ವನಾಥನ ಗುಹೆ, ಇದು ವಿಸ್ತಾರದಲ್ಲಿ ಚಿಕ್ಕದು ಇದನ್ನು “ಮೇಗಣ ಬಸದಿ” ಎಂತಲೂ ಕರೆಯುತ್ತಾರೆ.

2) ರಚನಾತ್ಮಕ ದೇವಾಲಯಗಳು:– ಐಹೊಳೆ: "ವಾಸ್ತುಶಿಲ್ಪದ ಬಯಲು ಪ್ರದರ್ಶನ ಶಾಲೆ" ಎಂದೇ ಹೆಸರಾದ ಐಹೊಳೆ (ಆರ್ಯಪುರ) ಪುರಾತನ ಚಾಲುಕ್ಯ ವಾಸ್ತುಶಿಲ್ಪದ ತವರೂರು.

- ಕಲಾವಿಮರ್ಶಕ "ಪರ್ಸಿಬ್ರೌನ್" ರು ಐಹೊಳೆಯನ್ನು "ಭಾರತೀಯ ದೇವಾಲಯಗಳ ವಾಸ್ತುಶಿಲ್ಪದ ತೊಟ್ಟಿಲು ಎಂದು ಕರೆದಿದ್ದಾರೆ.

ಲಡ್‌ಖಾನ್ ದೇವಾಲಯ: ಕ್ರಿ.ಶ 450:

ಇದು ಐಹೊಳೆಯ ದೇವಾಲಯಗಳಲ್ಲೆಲ್ಲಾ ಅತ್ಯಂತ ಪ್ರಾಚೀನ ದೇವಾಲಯ.

ದುರ್ಗಾ ದೇವಾಲಯ: ಸುಮಾರು ಕ್ರಿ.ಶ 680

ವೇಸರ ಶೈಲಿಯ ಶಿಖರವನ್ನು ಹೊಂದಿರುವ ದುರ್ಗಾ ದೇವಾಲಯ ಐಹೊಳೆಯ ಅತ್ಯಂತ ವೈಶಿಷ್ಟ್ಯವುಳ್ಳ ದೇವಾಲಯ ಇದರ ತಲವಿನ್ಯಾಸವು ಬೌದ್ಧ ಚೈತ್ಯಾಲಯವನ್ನು ಹೋಲುತ್ತದೆ.

- ಹುಚ್ಚಿಮಲ್ಲಿ ಗುಡಿ, ಮೇಗುತಿ ದೇವಾಲಯ ರಾಮಲಿಂಗ ಗುಡಿ, ಪಟ್ಟದಕಲ್ಲು (ಕಿಸುವೊಳಲು), ವಿರೂಪಾಕ್ಷಿ ದೇವಾಲಯ, ಮಲ್ಲಿಕಾರ್ಜುನ ದೇವಾಲಯ, ಸಂಗಮೇಶ್ವರ ದೇವಾಲಯ, ಪಾಪನಾಥ ದೇವಾಲಯ, ಗಳಗನಾಥನ ಗುಡಿ ಜೈನ ನಾರಾಯಣ ಗುಡಿ.

THE WINNER'S ACADEMY GOKAK

ಮಾನ್ಯಖೇಟದ ರಾಷ್ಟ್ರಕೂಟರು



Above Shakuntala Honda Showroom, Pathan Building. 2nd Floor, Byalikata, Gokak – 591307
Mob - 9036109325, 7619116183

- **ಸ್ಥಾಪಕ** :– ದಂತಿದುರ್ಗ
- **ರಾಜಧಾನಿ** :– ಗುಲ್ಬರ್ಗ ಜಿಲ್ಲೆಯ ಮಾನ್ಯಖೇಟ
- **ರಾಜಲಾಂಛನ ಮತ್ತು ಧ್ವಜ** :– ಗರುಡ ಮತ್ತು ಪಾಲು
- **ಮೂಲ** :– ರಾಷ್ಟ್ರಕೂಟ ಪದವು ಅಧಿಕಾರ ವಾಚಕ ಪದವೇ ಹೊರತು ಬುಡಕಟ್ಟಿನ ಸೂಚಕವಲ್ಲ ರಾಷ್ಟ್ರಕೂಟ ಎಂಬುದು ಪ್ರಾಂತ್ಯಾಧಿಕಾರಿಗೆ ಸಂಬಂಧಿಸಿದೆ. ರಾಷ್ಟ್ರ ಎಂದರೆ ಪ್ರಾಂತ್ಯ ಎಂದೂ ಕೂಟ ಎಂದರೆ ರಾಜ್ಯಪಾಲ ಎಂದರ್ಥ.

ರಾಜಕೀಯ ಇತಿಹಾಸ:–

- ದಂತಿದುರ್ಗ (ಕ್ರಿ.ಶ 735–756):– ದಂತಿದುರ್ಗನು ರಾಷ್ಟ್ರಕೂಟ ವಂಶದ ಸ್ಥಾಪಕ ಇವನು ಬಾದಾಮಿಯ ಚಾಲುಕ್ಯರ ಸಾಮಂತನಾಗಿದ್ದನು. ಈತ 2ನೇ ಇಂದ್ರನ ಮಗ ಹಾಗೂ ಕರ್ಕನ ಮೊಮ್ಮಗ ಗುಜರಾತಿನ ಮಾಂಡಲಿಕನಾಗಿದ್ದು, ಇಂದ್ರನು ಭಾವನಾಗ ಎಂಬ ಚಾಲುಕ್ಯ ರಾಜಕುಮಾರಿಯನ್ನು ಅಪಹರಿಸಿ ವಿವಾಹವಾಗಿದ್ದನು ದಂತಿದುರ್ಗನು ಆರಂಭದಲ್ಲಿ ಚಾಲುಕ್ಯರ ದೊರೆ 2ನೇ ವಿಕ್ರಮಾಧಿತ್ಯನ ಕಾಲದಲ್ಲಿ ಸಾಮಂತನಾಗಿದ್ದನು.
- ಅರಬ್ಬರನ್ನು ಹತ್ತಿಕ್ಕುವಲ್ಲಿ ಚಾಲುಕ್ಯ ರಾಜ ಪುಲಿಕೇಶಿಗೆ ಸಹಾಯಮಾಡಿ ವಿಕ್ರಮಾದಿತ್ಯನಿಂದ ಪೃಥ್ವಿವಲ್ಲಭ ಖಡ್ಗಾವಲೋಕ ಎಂಬ ಬಿರುದು ಪಡೆದುಕೊಂಡನು.
- ಕ್ರಿ.ಶ 750 ರಲ್ಲಿ ಬಾದಾಮಿಯನ್ನು ಮುತ್ತಿ 2ನೇ ಕೀರ್ತಿವರ್ಮನನ್ನು ಸೋಲಿಸಿ ತಾನೇ ಸಾಮ್ರಾಟನಾದನು ಈತ ಶ್ರೀಪೃಥ್ವಿವಲ್ಲಭ, ಪರಮಭಟ್ಟಾರಕ, ಮಹಾರಾಜಾಧಿರಾಜ, ರಾಜಪರಮೇಶ್ವರ, ಖಡ್ಗಾವಲೋಕನ ಎಂಬ ಬಿರುದುಗಳನ್ನುಗಳಿಸಿದ್ದನು.

ಒಂದನೇಯ ಕೃಷ್ಣ (ಕ್ರಿ.ಶ 756–774)

ದಂತಿದುರ್ಗನು ಅಪುತ್ರನಾಗಿ ನಿಧನವಾದಗ ಅವನ ಚಿಕ್ಕಪ್ಪನಾದ 1ನೇ ಕೃಷ್ಣನು ಅಧಿಕಾರರೂಢನಾದನು. ಪರಾಕ್ರಮಿಯಾದ ಕೃಷ್ಣನು ರಾಹಪ್ಪಯ್ಯಾ ಎಂಬ ಚಾಲುಕ್ಯ ದಳಪತಿಯನ್ನು ಎದುರಿಸಿದನು.

- ಕೊಂಕಣದಲ್ಲಿ ಸಣ್ಣಪುಲ್ಲ ಎಂಬ ತನ್ನ ಶಿಲಾಹಾರಕ ಮಾಂಡಲಿಕನನ್ನು ನೇಮಿಸಿದನು. ಶಿಲಾಹಾರರು ರಾಷ್ಟ್ರಕೂಟರು ಪತನದವರೆಗೂ ಅವರಿಗೆ ವಿಧೇಯರಾಗಿದ್ದರು.

- ಘನತೆ:– ಕೃಷ್ಣನು ಇತಿಹಾಸ ಪ್ರಸಿದ್ಧನಾಗಿರುವುದು ಯುದ್ಧ ವಿಜಯಗಳಿಂದಲ್ಲ ರಾಜ್ಯ ವಿಸ್ತರಣೆಯಿಂದಲ್ಲ ಕಲಾ ವೈಭವದಿಂದ ಆತ, ಅಖಂಡ, ಶಿಲಾಬಂಡೆಯನ್ನು ತುಂಡರಿಸಿ ಪ್ರಪಂಚದ ಮಹಾ ಅದ್ಭುತಗಳಲ್ಲಿ ಒಂದಾದ "ಎಲ್ಲೋರದ ಕೈಲಾಸನಾಥ" ದೇವಾಲಯಗಳನ್ನು ನಿರ್ಮಿಸಿದನು.
- ಎಲ್ಲೋರದ ಕೈಲಾಸನಾಥ ದೇವಾಲಯವು ಕೃಷ್ಣನ ಲೋಕವಿಖ್ಯಾತಿಗೆ ಕಾರಣವಾಗಿದೆ.
- 1ನೇ ಕೃಷ್ಣನನ್ನು ಎಲ್ಲೋರದ ಕೈಲಾಸನಾಥ ದೇವಾಲಯವನ್ನು ನಿರ್ಮಿಸಿದನು.
- 1ನೇ ಕೃಷ್ಣನಿಗೆ ಬಿರುದುಗಳು:– ಶುಭತುಂಗ, ಅಕಾಲವರ್ಷ ಎಂಬ ಬಿರುದು ಹೊಂದಿದ್ದನು.

2ನೇ ಗೋವಿಂದ:– (ಕ್ರಿ.ಶ 774– 780)

- ಯುವರಾಜನಾಗಿದ್ದಾಗಲೇ ಗೋವಿಂದನು ಗಂಗರಾಜ ಶ್ರೀ ಪುರುಷನನ್ನು ವೆಂಗಿಯ ಚಾಲುಕ್ಯರಾಜ 4ನೇ ವಿಷ್ಣುವರ್ಧನನ್ನು ಸೋಲಿಸಿದ್ದನು. ಗೋವಿಂದನಿಗೆ "ಜಗತ್ತುಂಗ, ಪ್ರಭೂತ ವರ್ಷ, ಪ್ರತಾಪವಲೋಕ, ವಿಕ್ರಮಾವಲೋಕ ಎಂಬ ಬಿರುದುಗಳಿದ್ದವು.

ಧ್ರುವ:– (ಕ್ರಿ.ಶ 780 – 793)

- ಧ್ರುವನು ಧಾರಾವರ್ಷ, ನಿರಪಮ, ಕಲಿವಲ್ಲಭ, ಶ್ರೀವಲ್ಲಬಿ ಎಂಬ ಬಿರುದಾಂಕಿತನಾಗಿ ರಾಜ್ಯಾಧಿಷ್ಟನಾದನು. ವೆಂಗಿಯ ವಿಷ್ಣುವರ್ಧನನ ಮಗಳಾದ ಶೀಲಭಟ್ಟಾರಿಕೆ ಅವನ ಪಟ್ಟದ ರಾಣಿಯಾಗಿದ್ದರು.
- ಮೊದಲು ಅಂತಃಕಲಹದಲ್ಲಿ ತನ್ನ ಅಣ್ಣನ ಪಕ್ಷ ವಹಿಸಿದವರ ಮೇಲೆ ಸೇಡು ತೀರಿಸಿಕೊಳ್ಳಲು ಮುಂದಾದದನು. ಮೊದಲಿಗೆ ಗಂಗರಸ ಶಿವಮಾರನನ್ನು ಸೋಲಿಸಿ ಮಾನ್ಯಖೇಟದಲ್ಲಿ ಬಂಧಿಸಿದನು.
- ಕ್ರಿ.ಶ 783ರ ವೇಳೆಗೆ ಧ್ರುವನು ದಕ್ಷಿಣ ಭಾರತದ ರಾಜಮನೆತನಗಳೆನ್ನಲ ಸೋಲಿಸಿದನು.
- ಕನೊಜನ್ನು ಇಂದ್ರಾಯುಧನು ಆಳುತ್ತಿದ್ದನು. ಗೂರ್ಜರ ಪ್ರತಿಹಾರ ರಾಜ ವತ್ಸರಾಜ ಹಾಗೂ ಬಂಗಾಳದ ಪಾಲರಾಜ ಧರ್ಮಪಾಲರು, ಕನೊಜನ ಮೇಲೆ ದಾಳಿ ಮಾಡಿ ತಮ್ಮ ಸಾರ್ವಭೌಮತ್ವ ಸ್ಥಾಪಿಸಲು ಹವಣಿಸುತ್ತಿದ್ದರು.
- ಧ್ರುವನಿಗೆ ಸ್ತಂಭ ಕರ್ಕ 3ನೇ ಗೋವಿಂದ ಇಂದ್ರ ಎಂಬ ಮಕ್ಕಳಿದರು. ಇದರಲ್ಲಿ ದಕ್ಷನಾದ ಗೋವಿಂದನು ಯುವರಾಜನಾಗಿ ಆಯ್ಕೆಯಾಗಿದ್ದನು.
- ಧ್ರುವನು ದ್ವಾರ ಸಮುದ್ರವಾದ ಧ್ರುವಸಮುದ್ರ ಕೆರೆಯನ್ನು ಕಟ್ಟಿಸಿದ್ದನು.

3ನೇ ಗೋವಿಂದ (ಕ್ರಿ.ಶ 793 – 814)

- ಧ್ರುವನು ಮರಣದ ನಂತರ ಅವನ ಮಗ 3ನೇ ಗೋವಿಂದನು ಅಧಿಕಾರ ರೂಢನಾದನು.
- 3ನೇ ಗೋವಿಂದನು ರಾಷ್ಟ್ರಕೂಟ ಸಂತತಿಯ ಅತ್ಯಂತ ಪ್ರಸಿದ್ಧ ದೊರೆ ಪರಾಕ್ರಮಿಯಾ, ವೀರಯೋಧನೂ ಆಗಿದ್ದನು.

ದಿಗ್ವಿಜಯಗಳು :–

1. ಗೋವಿಂದನು ಅಧಿಕಾರಕ್ಕೆ ಬಂದ ಕೂಡಲೇ ಅವನನ್ನು ಸ್ತಂಭನು ಪ್ರತಿಭಟಿಸಿದನು. ಸ್ತಂಭನು ಗೋವಿಂದನ ಅಣ್ಣನೂ ಆಗಿದ್ದು. ತನನ್ನು ಬಿಟ್ಟು ತಮ್ಮನಿಗೆ ತಂದೆ ಪಟ್ಟ ಕಟ್ಟಿದನು. ಸ್ತಂಭನ ಅತೃಪ್ತಿಗೆ ಕಾರಣವಾಗಿತ್ತು. ಸ್ತಂಭನಿಗೆ ಪಲ್ಲವ, ಪಾಂಡ್ಯ, ಚೇರ, ಚೋಳ, ವೆಂಗಿ, ಚಾಲುಕ್ಯ, ಗಂಗ ಮುಂತಾದ 12 ರಾಜರ ಬೆಂಬಲ ಪಡೆದನು.

- ಗೋವಿಂದನು ಸ್ತಂಭನನ್ನು ಸದೆಬಡಿಯಲು ತನ್ನ ಸಹಾಯಕ್ಕೆ ಬರುವನೆಂಬ ಭರವಸೆಯಿಂದ ಬಂಧನದಲ್ಲಿನ ಗಂಗರಾಜ ಶಿವಮಾರನನ್ನು ಬಿಡುಗಡೆ ಮಾಡಿದನು. ಆದರೆ ಶಿವಮಾರನು ಗೋವಿಂದನಿಗೆ ಕೃತಜ್ಞನಾಗಿರುವುದಕ್ಕೆ ಬದಲಾಗಿ ಸ್ತಂಭನೊಂದಿಗೆ ಸೇರಿಕೊಂಡನು.

2. ಗೋವಿಂದನು ಸ್ತಂಭನಿಗೆ ಬೆಂಬಲ ನೀಡಿದ ಶಿವಮಾರನನ್ನು ಶಿಕ್ಷಿಸಲು ಮುಂದಾದನು ಶಿವಮಾರನು ಸ್ವರಾಜ್ಯ ಮರಳಿ ಪಡೆಯುವ ಉದ್ದೇಶದಿಂದ ಗೋವಿಂದನು ತ್ಯಜಿಸಿ ಸ್ತಂಭನನ್ನು ಸೇರಿಕೊಂಡನು.
3. ಗಂಗವಾಡಿಯನ್ನು ಜಯಸಿದ ನಂತರ ಗೋವಿಂದನು ನೊಳಂವಾಡಿಯು ಚಾರು ಪೊನ್ನೇರನನ್ನು ಸೋಲಿಸಿದನು.
4. ಸ್ತಂಭನಿಗೆ ಬೆಂಬಲಿಗನಾಗಿ ನಿಂತ ಕಂಚಿಯ ಪಲ್ಲವ ದೊರೆ ದಂತಿವರ್ಮನನ್ನು ಸೋಲಿಸಿದನು. ಕ್ರಿ.ಶ 769 ರೊಳಗೆ ತನ್ನ ವಿರೋಧಿಗಳನ್ನೆಲ್ಲ ಸದೆಬಡಿದ ಗೋವಿಂದನು ದಕ್ಷಿಣ ಪಥದ ಏಕೈಕ ಪ್ರಭುವಾದನು.
5. ಉತ್ತರಭಾರತ ದಂಡಯಾತ್ರೆ:– ಗೋವಿಂದನು ತಂದೆಯಂತೆ ಭರತೇಶ್ವರನಾಗಬೇಕೆಂಬ ಹೆಬ್ಬಯಕೆಯಿಂದ ಉತ್ತರ ಭಾರತ ದಂಡಯಾತ್ರೆ ಕೈಕೊಂಡನು. ಗೋವಿಂದನ ಸೈನ್ಯ ಹಿಮಾಲಯದ ಝರಿಗಳಲ್ಲಿ ಹರಿಯುತ್ತಿದ್ದ ತಣ್ಣನೆಯ ನೀರನ್ನು ಕುಡಿದ್ದವು ಅವನ ಯುದ್ಧದ ಮದಗಜಗಳು ಗಂಗಾನದಿಯಲ್ಲಿ ಮಿಂದವು ಪವಿತ್ರ ತೀರ್ಥವನ್ನು ಸೇವಿಸಿದವು ಮತ್ತು ಅವನ ರಣಘೋಷಣೆಗಳು ಕೂಗಿದವು.
6. ದಾಯಾದಿ ಕಲಹದಲ್ಲಿ ಸ್ತಂಭನ ಪಕ್ಷವಹಿಸಿದ ವೆಂಗಿಯ ಚಾಲುಕ್ಯ ದೊರೆ 4ನೇ ವಿಷ್ಣುವರ್ಧನನ್ನು ಸೋಲಿಸಿ

- ಸ್ತಂಭ ಶಿವಮಾರರು ತನ್ನಗೆ ದ್ರೋಹ ಬಗೆದರೂ ಅವರನ್ನು ಉದಾರತೆಯಿಂದ ನಡೆದುಕೊಂಡನು ಉತ್ತರ ಭಾರತದ ರಾಜ್ಯಗಳನ್ನು ತನ್ನ ಹಿಡಿತಕ್ಕೆ ತಂದುಕೊಳ್ಳಲಿಲ್ಲ.

ಬಿರುದುಗಳು:– 3ನೇ ಗೋವಿಂದನಿಗೆ ಜಗತ್ತುಂಗ, ಪ್ರಭೂತವರ್ಷ, ಕೀರ್ತಿನಾರಾಯಣ, ಜನವಲ್ಲಭ, ನರೇಂದ್ರ ಶ್ರೀವಲ್ಲಭ, ವೈರಮೇಘತ್ರಿಭುವನ ಧವಳ ಎಂಬ ಬಿರುದುಗಳು ಹೊಂದಿದನು.

ಅಮೋಘವರ್ಷ ನೃಪತುಂಗ:– (ಕ್ರಿ.ಶ 814–878)

- ಅಮೋಘವರ್ಷನು "ನೃಪತುಂಗ" ಎಂಬ ಹೆಸರಿನಿಂದ ಸಿಂಹಾಸನಾರೂಢನಾದನು.
- ಅವನ ನಿಜವಾದ ಹೆಸರು "ಶರ್ವ"

ದಿಗ್ವಿಜಯಗಳು:–

- ಅಮೋಘವರ್ಷನು ರಾಷ್ಟ್ರಕೂಟರ ಸಾರ್ವಭೌಮತ್ವವನ್ನು ನಿರಾಕರಿಸಿದ ಹಲವು ಸಾಮಂತರೊಡನೆ ಯುದ್ಧಗಳನ್ನು ಮಾಡಿದನು.

1. ಸ್ತಂಭನ ಮಗ ಶಂಕರಗಣ ಮತ್ತು ದಾಯಾದಿ ಜೆಟ್ಟ ಎಂಬುವವರನ್ನು ನೃಪತುಂಗನ ನಿಷ್ಠಾವಂತ ರಾಜಪ್ರತಿನಿಧಿ ಕರ್ಕನು ಅಡಗಿಸಿದನು.

- ಕ್ರಿ.ಶ 830 ರಲ್ಲಿ ವಿಂಗವಳ್ಳಿ ಎಂಬಲ್ಲಿ ನಡೆದ ಘೋರ ಕದನದಲ್ಲಿ ಅಮೋಘವರ್ಷನು ವಿಜಯಾದಿತ್ಯನನ್ನು ಸೋಲಿಸಿ ವೆಂಗಿರಾಜ್ಯವನ್ನು ವಶಪಡಿಸಿಕೊಂಡನು.

2. ಕರ್ಕನ ಮರಣದ ನಂತರ ಅವನ 1ನೇ ಧ್ರುವನು ಗುಜರಾತಿನ ಮಾಂಡಲಿಕನಾದನು. ಅವನು ರಾಷ್ಟ್ರಕೂಟರಿಗೆ ಅವಿಧೇಯನ್ನಾಗಿ ವರ್ತಿಸಿ ಅಮೋಘವರ್ಷನ ವೈರತ್ವ ಕಟ್ಟಿಕೊಂಡನು.
3. ಗೂರ್ಜರ ಪ್ರತಿಹಾರರು ತಮ್ಮ ಹಿಂದಿನ ಸೋಲಿಗೆ ಸೇಡು ತೀರಿಸಿಕೊಳ್ಳಲು ರಾಷ್ಟ್ರಕೂಟ ರಾಜಧಾನಿಯನ್ನು ಮುತ್ತುವ ಹವಣಿಕೆಯಲ್ಲಿದ್ದರು.
4. ಅಮೋಘ ವರ್ಷನು, ಅಂಗ, ವಂಗ, ಮಗದ, ರಾಜ್ಯಗಳ ರಾಜರನ್ನು ಸೋಲಿಸಿದನೆಂದು ಅವನ ಶಾಸನಗಳು ಹೇಳುತ್ತವೆ. ಮಾಳ್ವ ಮತ್ತು ವೆಂಗಿ ರಾಜರು ಅವನಿಂದ ಸೋತರು.
5. ನೃಪತುಂಗ ಪಲ್ಲವರನ್ನು ಮೈತ್ರಿಯಿಂದ ಗೆದ್ದನು. 3ನೇ ನಂದಿವರ್ಮನಿಗೆ ಪಾಂಡ್ಯರಿಂದ ಕಿರುಕುಳ ಎದುರಾಯಿತು. ನಂದಿ ವರ್ಮನು ಪಾಂಡ್ಯರನ್ನು ಸದೆಬಡಿಯಲು ನೃಪತುಂಗನ ಮೈತ್ರಿ ಬಯಸಿದನು.
6. ನೃಪತುಂಗನ ಕೊನೆ ಕಾಲದಲ್ಲಿ ಅವನ ಮಗ ಕೃಷ್ಣನು ತಂದೆಯ ವಿರುದ್ಧ ದಂಗೆ ಎದ್ದನು. ಬಂಕೇಶನು ಆ ದಂಗೆಯನ್ನು ಅಡಗಿಸಿ ಕೃಷ್ಣನನ್ನು ಗಂಗವಾಡಿಯಲ್ಲಿ ಬಂಧಿಸಿದನು.

- ಬಂಕೇಶ ಗಂಗವಾಡಿಯಲ್ಲಿ ಬಂಧಿಸಿದನು.

– ಕವಿರಾಜಮಾರ್ಗವು ಪ್ರಾಚೀನ ಕರ್ನಾಟಕದ ವ್ಯಾಪ್ತಿಯನ್ನು "ಕಾವೇರಿಯಿಂದ ಗೋದಾವರಿ ಪರಮಿರ್ಪನಾಡದಾ ಕನ್ನಡದೊಳ್ ಜನಪದ" ಎಂದು ವರ್ಣಿಸಿದೆ.

- ಕ್ರಿ.ಶ 851 ರಲ್ಲಿ ಅರಬ್ ಪ್ರವಾಸಿ "ಸುಲೈಮಾನ್‌ನು" ಅಮೋಘವರ್ಷನ ಆಸ್ಥಾನಕ್ಕೆ ಭೇಟಿ ನೀಡಿದ್ದನು.

ಬಿರುದುಗಳು:- ನೃಪತುಂಗ, ಅತಿಶಯದವಳ, ವೀರನಾರಾಯಣ, ರಭೈಮಾರ್ತಾಂಡ, ಶ್ರೀ ವಲ್ಲಭ, ಲಕ್ಷ್ಮೀವಲ್ಲಭೇಂದ್ರ, ನರಲೋಕಚಂದ್ರ, ರಾಜಸಿಂಹ, ನಿತ್ಯಮಲ್ಲ, ಮೋಘರಾಮ್ ಇವು ಅಮೋಘವರ್ಷನಿಗಿದ್ದ ಬಿರುದುಗಳು.

ಎರಡನೇ ಕೃಷ್ಣ (ಕ್ರಿ.ಶ 878–914)

- ಅಮೋಘವರ್ಷನ ನಂತರ ಅವನ ಮಗ ಎರಡನೇ ಕೃಷ್ಣನು ಪಟ್ಟಕ್ಕೆ ಬಂದನು. ಇವನಿಗೆ "ಶುಭತುಂಗ ಮತ್ತು ಅಕಾಲವರ್ಷ" ಎಂಬ ಬಿರುದುಗಳಿದ್ದವು.

ಮೂರನೇ ಇಂದ್ರ : (ಕ್ರಿ.ಶ 914–929)

- ಮೂರನೇ ಇಂದ್ರನು ಎರಡನೇ ಕೃಷ್ಣನ ಮೊಮ್ಮಗ ಇವನು ಸಮರ್ಥ ಸೇನಾನಿ ಮತ್ತು ದಿಗ್ವಿಜಯಿಶಾಲಿ ಪಟ್ಟಕ್ಕೆ ಬಂದ ನೆನಪಿಗೆ ಇಂದ್ರನು ತುಲಾಭಾರ ಸಮಾರಂಭವನ್ನು ಏರ್ಪಡಿಸಿ. ಬ್ರಾಹ್ಮಣರಿಗೆ ದೇವಾಲಯಗಳಿಗೆ 400 ಗ್ರಾಮಗಳನನು ದಾನಕೊಟ್ಟನು.
- – ಕ್ರಿ.ಶ 916 ರಲ್ಲಿ ಉಜ್ಜಯಿನಿಯಿಂದ ಹೊರಟ ಇಂದ್ರನ ಸೈನ್ಯ ಯಮುನಾ ನದಿಯನ್ನು ದಾಟಿ ಕನೋಜಿನ ಮೇಲೆ ಆಕ್ರಮಣ ಮಾಡಿತು.
- – ಬಿರುದುಗಳು: ಪ್ರಭೂತವರ್ಷ, ನಿತ್ಯಾವರ್ಷ, ರಟ್ಟಕಂದರ್ಪ, ರಾಜಮಾರ್ತಾಂಡ, ಶ್ರೀವಲ್ಲಭ, ಕೀರ್ತಿನಾರಾಯಣ.
- "ಕವಿಗಳು" – ನೇಮಾದಿತ್ಯ (ನಳಚಂಪು – ಕರ್ತೃ)

ಇಮ್ಮಡಿ ಅಮೋಘವರ್ಷ: (ಕ್ರಿ.ಶ 929–930)

- ಅಮೋಘವರ್ಷನಿಗೂ ಅವನ ತಮ್ಮ ಗೋವಿಂದನಿಗೂ ಸಿಂಹಾಸನಕ್ಕಾಗಿ ಕಲಹ ಏರ್ಪಟ್ಟಿತು.

ನಾಲ್ಕನೇ ಗೋವಿಂದ (ಕ್ರಿ.ಶ 930–936)

- ಇವನು ಭ್ರಷ್ಟನೂ ಹಾಗೂ ವಿಲಾಸಪ್ರಿಯನಾಗಿದ್ದರಿಂಥ ಚೇದಿ ರಾಜ, ವೇಮಲವಾಡ ಚಾಲುಕ್ಯ ರಾಜ ಇಮ್ಮಡಿ ಅರಿಕೇಸರಿ ಮತ್ತು ಗಂಗರಾಜ ಬೂತುಗರು ಅವನ ವಿರೋಧಿಗಳಾದರು. ಅವರು ಗೋವಿಂದನ ಆಳ್ವಿಕೆ ಕೊನೆಗಾಣಿಸಿ ಮೂರನೇ ಅಮೋಘವರ್ಷನನ್ನು ಅಧಿಕಾರಕ್ಕೆ ತರಲು ಯತ್ನಸಿದರು.

ಮೂರನೇ ಅಮೋಘವರ್ಷ : (ಕ್ರಿ.ಶ 936–939)

- ಮೂರನೇ ಅಮೋಘವರ್ಷನು ತ್ರಿಪುರಿ ರಾಜಕುಮಾರಿ ಕುಂದಕದೇವಿಯನ್ನು ವಿವಾಹವಾಗಿದ್ದನು. ಅಮೋಘ ವರ್ಷನು ಕ್ರಿ.ಶ 939 ರಲ್ಲಿ ಮರಣ ಹೊಂದಿದನು. ತರವಾಯ ಅವನ ಮಗ ಮೂರನೇ ಕೃಷ್ಣನು ಪಟ್ಟಕ್ಕೆ ಬಂದನು.

ಮೂರನೇ ಕೃಷ್ಣ: (ಕ್ರಿ.ಶ 939–967):– ಖೊಟ್ಟಿಗನು ನಿತ್ಯವರ್ಷ ಅಮೋಘದೇವ, ರಟ್ಟಕಂದರ್ಪ ರಾಜಮಾರ್ತಾಂಡ ಮೊದಲಾದ ಬಿರುದುಗಳನ್ನು ಹೊಂದಿದ್ದನು.

ಇಮ್ಮಡಿ ಕರ್ಕ (ಕ್ರಿ.ಶ 972–973):– ಇವನು ರಾಷ್ಟ್ರಕೂಟರ ಕಡೆಯ ಅರಸ ಇವನೂ ಸಹ ಖೊಟ್ಟಿಗನಂತೆ ಅಸಮರ್ಥ ದೊರೆ ಇವನ ಕಾಲದಲ್ಲಿ ಸೌದತ್ತಿಯ ರಟ್ಟರು, ಕೊಂಕಣರ ಶಿಲಾಹಾರರು, ಸೇವುಣರು, ಯಾದವರು, ಹಾಗೂ ಇನ್ನೂ ಹಲವೂ ಸಾಮಂತರು.

ರಾಷ್ಟ್ರಕೂಟರ ಆಡಳಿತ

- ಸಾಮ್ರಾಜ್ಯಶಾಹಿಗಳಾದ ರಾಷ್ಟಕೂಟರು ಸಾರ್ವಭೌಮರು ಪರಾಕ್ರಮಿಗಳೂ ದಕ್ಷ ಆಡಳಿತಗಾರರೂ ಹಾಗೂ ವಿಶಾಲ ಸಾಮ್ರಾಜ್ಯದ ನಿರ್ಮಾಪಕರು ಆಗಿದ್ದರು. ಇವರು ತಮ್ಮ ಸಾಮ್ರಾಜ್ಯವನ್ನು ಉತ್ತರ ನರ್ಮದಾ ನದಿಯಿಂದ ದಕ್ಷಿಣದ ಕಾವೇರಿ ನದಿಯವರೆಗೂ ಪಶ್ಚಿಮದ ಅರಬ್ಬೀ ಸಮುದ್ರದಿಂದ ಪೂರ್ವದ ವೆಂಗಿಯವರೆಗೂ ವ್ಯಾಪಿಸಿದ್ದರು.
- "ಪ್ರಾಚೀನ ಕಾಲದಲ್ಲಿ ದಖನ್ ಪ್ರಸ್ಥಭೂಮಿಯಲ್ಲಿ ಬೇರೆ ಯಾರ ಕಾಲದಲ್ಲೂ ಅಂತಹ ಸಮರ್ಥ ಆಡಳಿತ ಸ್ಥಾಪನೆಯಾಗಲಿಲ್ಲ" ಎಂದು ಎ.ಎಸ್. ಅಲ್ತೇಕರರು ಹೇಳಿದ್ದಾರೆ.
- ಇವರ ಆಡಳಿತದಲ್ಲಿ ಕೇಂದ್ರಾಡಳಿತ, ಪ್ರಾಂತ್ಯಾಡಳಿತ ಮತ್ತು ಗ್ರಾಮಾಡಳಿತ ಎಂಬ ಮೂರು ಹಂತಗಳಿದ್ದವು.

ಕೇಂದ್ರಾಡಳಿತ (Central Administration)

- ರಾಜ:– ರಾಜನೇ ಸಾಮ್ರಾಜ್ಯದ ಪರಮೋಚ್ಛ ಅಧಿಕಾರಿಯಾಗಿದ್ದನು. ಇವನು ರಾಜ್ಯದ ಸಮಸ್ತ ಆಗು–ಹೋಗುಗಳನ್ನು ಇವನ ಇಚ್ಚೆಯಂತೆ ಜರಗುತ್ತಿದ್ದವು.
- ರಾಜರು ಪ್ರಜಾಹಿತಕ್ಕೆ ಮನ್ನಣೆ ನೀಡಿದವರಾಗಿದ್ದು. ಪ್ರಜಾಕಲ್ಯಾಣ ತಮ್ಮ ಆದ್ಯ ಕರ್ತವ್ಯವೆಂದು ಭಾವಿಸಿದ್ದರು.
- ರಾಜತ್ವ:– ರಾಜತ್ವವು ವಂಶಪಾಂಪರ್ಯವಾಗಿತ್ತು. ಸಾಮಾನ್ಯವಾಗಿ ಜೇಷ್ಟ ಪುತ್ರನನ್ನು ಉತ್ತರಾಧಿಕಾರಿಯನ್ನಾಗಿ ನೇಮಿಸುತ್ತಿದ್ದರು.
- ರಾಜತ್ವದ ಸಿಂಹಾಸನಕ್ಕಾಗಿ ಸಹೋದರರಲ್ಲಿ ಯಾದವ ಕಲಹಗಳು ಏರ್ಪಡುತ್ತಿದ್ದವು.

ಯುವರಾಜ:– ರಾಜನು ಬದುಕಿದ್ದಾಗಲೇ ಸಿಂಹಾಸನಕ್ಕಾಗಿ ನಡೆಯುವ ಕಲಹಗಳನ್ನು ತಪ್ಪಿಸಲು ಯುವರಾಜನನ್ನು ನೇಮಿಸಲಾಗುತ್ತಿತ್ತು. ಇವನಿಗೆ ಆಡಳಿತದ ಅನುಭವ ಪಡೆಯಲಿ ಎಂದು ಯುವರಾಜನನ್ನು ಪ್ರಾಂತ್ಯದ ರಾಜ್ಯಪಾಲನನ್ನಾಗಿ ನೇಮಿಸಲಾಗುತ್ತಿತ್ತು.

- ರಾಜನು ರಾಜಧಾನಿಯಲ್ಲಿ ಇಲ್ಲದಿದ್ದಾಗ ಯುವರಾಜ ರಾಜನಂತೆ ಕರ್ತವ್ಯ ನಿರ್ವಹಿಸುತ್ತಿದ್ದನು.

ಮಂತ್ರಿ ಪರಿಷತ್:– ರಾಜನಿಗೆ ಆಡಳಿತದಲ್ಲಿ ಸಲಹೆ ಸಹಕಾರ ನೀಡಲು ಒಂದು ಮಂತ್ರಿಪರಿಷತ್ ಅಸ್ತಿತ್ವದಲ್ಲಿತ್ತು.

- ಪ್ರಧಾನಮಾತ್ಯ – ಪ್ರಧಾನಮಂತ್ರಿ ಮುಖ್ಯ ಕಾರ್ಯನಿರ್ವಹಣಧಿಕಾರಿ
- ಮಹಾಸಂಧಿವಿಗ್ರಹಕ – ವಿದೇಶಾಂಗ ಮಂತ್ರಿ
- ಧರ್ಮಾಧಿಪತಿ – ದಾನದತ್ತಿಗಳ ಮೇಲ್ವಿಚಾರಕ
- ಸೇನಾಧಿಪತಿ – ಸೈನ್ಯದ ದಂಡನಾಯಕ
- ಯುವರಾಜ – ಪಟ್ಟದ ರಾಜಕುಮಾರ
- ಪುರೋಹಿತ – ರಾಜಗುರು
- ಕೋಶಾಧಿಪತಿ – ಭಂಡಾರಿ
- ದೂತ – ರಾಯಭಾರಿ
- ಮುಖ್ಯ ನ್ಯಾಯಾಧೀಶ – ನ್ಯಾಯಾಂಗ ಇಲಾಖೆಯ ಮುಖ್ಯಸ್ಥ

ಸೇನಾಡಳಿತ :–

ರಾಷ್ಟ್ರಕೂಟರು ಸಾರ್ವಭೌಮರು ತಮ್ಮ ವಿಶಾಲವಾದ ಸಾಮ್ರಾಜ್ಯದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು ಹಾಗೂ ಪರರಾಜ್ಯಗಳ ಆಕ್ರಮಣ ಎದುರಿಸಲು ಒಂದು ಬಲಿಷ್ಠ ಸೈನ್ಯವನ್ನು ಇಟ್ಟುಕೊಂಡಿದ್ದರು.

- ಇವರ ಸೈನ್ಯವು ಕಾಲ್ದಳ, ಅಶ್ವಪಡೆ ಗಜಪಡೆ, & ರಥದಳಗಳಿಂದ ಕೂಡಿತ್ತು. ಪ್ರತಿಯೊಂದು ವಿಭಾಗಗಕ್ಕೂ ದಂಡನಾಯಕ ನಿರುತ್ತಿದ್ದನು.
- ರಾಜರೇ ಯುದ್ಧದಲ್ಲಿ ಸೈನ್ಯವನ್ನು ಮುನ್ನಡೆಸುತ್ತಿದ್ದರು.

ಆದಾಯದ ಮೂಲಗಳು :–

- ಭೂಕಂದಾಯ ರಾಜ್ಯದ ಪ್ರಮುಖ ಆದಾಯದ ಮೂಲವಾಗಿತ್ತು. ಅದು ಒಟ್ಟು ಉತ್ಪನ್ನದ 1/6 ಭಾಗವಾಗಿತ್ತು. ಅದನ್ನು ಧಾನ್ಯರೂಪದಲ್ಲಾದರೂ ಸಂಗ್ರಹಿಸಲಾಗುತ್ತಿತ್ತು.

ನಾಣ್ಯಗಳು:– ರಾಷ್ಟ್ರಕೂಟರು ಚಿನ್ನ & ಬೆಳ್ಳಿ ನಾಣ್ಯಗಳನ್ನು ಚಲಾವಣೆಗೆ ತಂದರು ಅವುಗಳೆಂದರೆ– ಸುವರ್ಣ, ಹೊನ್ನ, ಪಣದ್ರಮ್ಮ, ಗದ್ಯಾಣ, ಕಾಸು, ಕಲಂಜು, ಮಂಜತಿ, ಅಕ್ಕಂ

ಪ್ರಾಂತೀಯ ಆಡಳಿತ:–

- ರಾಷ್ಟ್ರ:– ರಾಷ್ಟ್ರಕೂಟರು ಆಡಳಿತದ ಅನುಕೂಲಕ್ಕಾಗಿ ಸಾಮ್ರಾಜ್ಯವನ್ನು ಹಲವು ರಾಷ್ಟ್ರಗಳಾಗಿ ವಿಭಾಗಿಸಲಾಗುತ್ತಿತ್ತು. ರಾಷ್ಟ್ರವನ್ನು ಮಂಡಲ ಅಥವಾ ಪ್ರಾಂತ್ಯ ಎಂತಲೂ ಕರೆಯುತ್ತಿದ್ದರು.
- ರಾಷ್ಟ್ರಪತಿ ರಾಷ್ಟ್ರದ ಆಡಳಿತಾಧಿಕಾರಿ ಮಹಾಮಂಡಲೇಶ್ವರನನ್ನು ರಾಜ್ಯದ ಪ್ರಾಂತ್ಯಾಧಿಕಾರಿಯಾಗಿ ನೇಮಿಸುತ್ತಿದ್ದರು.
- ರಾಷ್ಟ್ರಕೂಟರ ಸಾಮ್ರಾಜ್ಯದಲ್ಲಿ ಲಾಟ, ಆಂಧ್ರ, ನೊಳಂಬವಾಡಿ ಬನವಾಸಿ, ಹಲಸಿಗೆ, ಕರಹಾಡ, ಲಕ್ಕುಂಡಿ, ಎಡದೊರೆ, ಕೊಂಕಣ, ಪೂಣಕ ಆಳಂದ ಪುಲಿಗೆರೆ ಎಂಬ ಪ್ರಾಂತ್ಯಗಳಿದ್ದವು.
- ವಿಷಯ:– ರಾಷ್ಟ್ರಗಳನ್ನು ಮತ್ತೆ ಅನೇಕ ಜಿಲ್ಲೆಗಳನ್ನಾಗಿ ವಿಭಾಗಿಸಲಾಗಿತ್ತು. ವಿಷಯಪತಿ ವಿಷಯದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು.
- ಭುಕ್ತಿ :– ವಿಷಯಕ್ಕಿಂತ ಕಿರಿದಾದ ಆಡಳಿತ ಘಟಕವೇ ಭುಕ್ತಿ ಎಂದು ಕರೆಯುವರು. ಭೋಗಿಕ ಅಥವಾ ಭೋಗಪತಿ ಭುಕ್ತಿಯ ಆಡಳಿತಧಿಕಾರಿಯಾಗಿದ್ದನು.

ನಗರಾಡಳಿತ:–

- ನಗರಾಡಳಿತವು, ಪುರಪತಿ, ನಗರಪತಿ, ಅಥವಾ ಪಟ್ಟಣಸ್ವಾಮಿಗೆ ಸೇರಿತ್ತು. ಇವನ ನೆರಿವಿಗೆ ನಗರ ಸಭೆ ಇದ್ದಿತ್ತು.
- ಧರ್ಮಪೀಠಗಳ ರಚನೆ ಮತ್ತು ತೆರಿಗೆಯನ್ನು ಸಂಗ್ರಹಿಸುವುದು ನಗರಸಭೆಯ ಕಾರ್ಯವಾಗಿತ್ತು.

ಗ್ರಾಮಾಡಳಿತ:–

- ಗ್ರಾಮವು ರಾಜ್ಯದ ಪ್ರಾಥಮಿಕ ಆಡಳಿತದ ಘಟಕವಾಗಿತ್ತು. ಗಾವುಂಡ ಗ್ರಾಮಾಡಳಿತದ ಮುಖ್ಯ ಅಧಿಕಾರಿಯಾಗಿದ್ದನು. ಇವನಿಗೆ ಪಟೇಲ ಹೆಗ್ಗಡೆ ಕುಲಕರ್ಣಿ ಎಂಬ ಹೆಸರುಗಳಿದ್ದವು.
- ಗಾವುಂಡನ ಕೆಳಗೆ ಶಾನಭೋಗ ಇರುತ್ತಿದ್ದನು. ಇವನು ಹಣಕಾಸಿನ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದನು.

ಗ್ರಾಮಸಭೆ:–

- ಪ್ರತಿಯೊಂದು ಗ್ರಾಮವು ಒಂದೊಂದು ಗ್ರಾಮಸಭೆಯನ್ನು ಹೊಂದಿತ್ತು. ಈಗಿನ ಪಂಚಾಯತಿಗಳಂತೆ ಕಾರ್ಯನಿರ್ವಹಿಸುತ್ತಿದ್ದವು.
- ಗ್ರಾಮಸಭೆಯ ಸದಸ್ಯರನ್ನು ಮಹತ್ತರ ಅಥವಾ ಮಹಾಜನ ಎಂದು ಕರೆಯುತ್ತಿದ್ದರು. ಈ ಗ್ರಾಮಸಭೆ ಊರ್ ಅಥವಾ ಒಕ್ಕಲ್ ಎಂಬ ಹೆಸರನ್ನು ಪಡೆಯಿತು.
- ಗಾವುಂಡನು ಚುನಾಯಿತ ಅಧ್ಯಕ್ಷನಾಗಿದ್ದು ಊರೊಡೆಯ ಎಂದು ಕರಸಿಕೊಳ್ಳುತ್ತಿದ್ದನು.

ಸಮಾಜ:–

- ಸಮಾಜದಲ್ಲಿ ವರ್ಣಪದ್ಧತಿ ಮುಂದುವರೆತ್ತಿದ್ದು ಬ್ರಾಹ್ಮಣರು ಸಮಾಜದ ಉನ್ನತ ಸ್ಥಾನದಲ್ಲಿದ್ದರು.
- ಸಮಾಜದಲ್ಲಿ ಅಂತರ ಜಾತಿ ವಿವಾಹ ವಿಧವಾ ವಿವಾಹ ಸತಿ ಸಹಗಮನ ಪದ್ದತಿಗಳು ಇರಲಿಲ್ಲ ಆದರೆ ಅವಿಭಕ್ತ ಕುಟುಂಬ ಜಾತಿ ಪದ್ಧತಿ ಅಸ್ಪೃಶ್ಯತೆ ಏಕಪತ್ನಿತ್ವ ಪದ್ಧತಿಗಳು ರೂಢಿಯಲ್ಲಿದ್ದವು.
- ಪುರುಷರು ಧೋತಿಯನ್ನು ಸ್ತ್ರೀಯರು ರವಿಕೆ & ಸೀರೆಯನ್ನು ಉಡುತ್ತಿದ್ದರು. ಹೆಣ್ಣು ಸಂತಾನವನ್ನು ಕೀಳಾಗಿ ಕಾಣಲಾಗುತ್ತಿತ್ತು.

ಧಾರ್ಮಿಕ ಸ್ಥಿತಿ:–

- ರಾಷ್ಟ್ರಕೂಟರದು ವೈದಿಕ ಧರ್ಮವಾಗಿತ್ತು. ಅಂದು ವೈಷ್ಣವ ಮತ್ತು ಶೈವ ಪಂಥಗಳು ಅಸ್ತಿತ್ವದಲ್ಲಿದ್ದವು.
- ರಾಷ್ಟ್ರಕೂಟರ ಲಾಂಛನ ವಿಷ್ಣುವಿನ ಗರುಡವಾಗಿತ್ತು. ಇವರು ಪರಮತಸಹಿಷ್ಣುರು ಆಗಿದ್ದರು.
- ಅಮೋಘವರ್ಷನು ರಾಜ್ಯದ ಹಿತಕ್ಕೆಂದು ಬರಗಾಲ ಮುಕ್ತಿಗೆ ಕೊಲ್ಹಾಪುರದ ಮಹಾಲಕ್ಷ್ಮೀಗೆ ತನ್ನ ಹೆಬ್ಬೆರಳನ್ನು ಕತ್ತರಿಸಿಕೊಟ್ಟಿದ್ದನ್ನು ಇಲ್ಲಿ ಸ್ಮರಿಸಬಹುದು
- ಜೈನ ಧರ್ಮವು ರಾಷ್ಟ್ರಕೂಟರ ರಾಜಾಶ್ರಯ ಪಡೆದಿತ್ತು.

ಶಿಕ್ಷಣ :–

- ರಾಷ್ಟ್ರಕೂಟರ ಕಾಲದಲ್ಲಿ ಗುರುಕುಲ ಶಿಕ್ಷಣ ಪದ್ಧತಿ ಜಾರಿಯಲ್ಲಿತ್ತು.
- ಕಳಸಿ, ಇಂಡಿ, ಸಾಲೋಟಗಿ, ಮಾನ್ಯಖೇಟ ಇವರ ಪ್ರಸಿದ್ಧ ಶೈಕ್ಷಣಿಕ ಕೇಂದ್ರಗಳಾಗಿದ್ದವು.

ಸಾಹಿತ್ಯ:–

ಕವಿಗಳು	ಕೃತಿಗಳು
ಅಮೋಘವರ್ಷ	ಕವಿರಾಜ ಮಾರ್ಗ, ಪ್ರಶ್ನೋತ್ತರ ರತ್ನಮೂಲ
ಪುಷ್ಪದಂತ	ಹರಿಚರಣ ಜಸವು, ಮಹಾಪುರಾಣ
ಹಾಲಾಯುಧ	ಮಿತ್ರಸಂಜೀವಿನಿ, ಕವಿರಹಸ್ಯ
ಗುಣಭದ್ರ	ಉತ್ತರ ಪುರಾಣ
ಸೋಮದೇವ ಸೂರಿ	ನೀತಿವಾಕ್ಯಾಮೃತ ಯಶಸ್ತಿಲಕ
ಅಕಳಂಕ ದೇವ	ಅಷ್ಟಸತಿ ಪ್ರಮೋದ ಕಮಲ
ಪ್ರಭಾಚಂದ್ರ	ಕುಮಾರ ಚಂದ್ರೋದಯ ಪ್ರಮೇಯ ಕಮಲ ಮಾರ್ಕಂಡೇಯ ನ್ಯಾಯ ಧವಳ, ಜಯಧವಳ
ಜನಸೇನ	ಧವಳ, ಜಯಧವಳ
ಜೀನಸೇನಾಚಾರ್ಯ	ಹರಿವಂಶ, ಪಾರ್ಶ್ವಭ್ಯುದಯ, ಆದಿಪುರಾಣ
ಶಿವಕೋಟಾಚಾರ್ಯ	ವಡ್ಡಾರಾಧನೆ (ಕನ್ನಡದ ಮೊದಲ ಗದ್ಯ ಕೃತಿ)

ಗುಣವರ್ಮ ಮಹಾವೀರಚಾರ್ಯ	ಗಣಿತಸಾರ ಸಂಗ್ರಹ
ಶಕ್ತಾಯನ	ಅಮೋಘ ವೃತ್ತಿ, ಶಬ್ದಾನುಶಾಸನ
ತ್ರಿವಿಕ್ರಮ	ನಳಚಂಪು, ಮದಲಚಂಪು
ಕುಮದೇಂದು	ಸಿರಿಭುವಲ
ಉಗ್ರಾಧಿತ್ಯ	ಕಲ್ಯಾಣಕಾರಕ
ಪೊನ್ನ (ಉಭಯ ಕವಿ ಚಕ್ರವರ್ತಿ)	ಭುವನೈಕ್ಯ, ರಾಮಾಭ್ಯುದಯ, ಶಾಂತಿಪುರಾಣ ಜಿನಾಕ್ಷರ ಮಾಲೆ, ಗಾತಪ್ರತ್ಯಾಗಾತ
ಪಂಪ ಶಂಕರಾಚಾರ್ಯ	ಆದಿಪುರಾಣ, ವಿಕ್ರಮಾರ್ಜುನ, ವಿಜಯ ಬ್ರಹ್ಮಸೂತ್ರ ಭಾಷ್ಯ, ಆನಂದಲಹರಿ

ಪೊನ್ನನು ಮೂರನೇ ಕೃಷ್ಣನ ಆಸ್ಥಾನ ಕವಿ ಇವನಿಗೆ “ಉಭಯ ಕವಿ ಚಕ್ರವರ್ತಿ” ಎಂಬ ಬಿರುದು ಪಡೆದಿದ್ದನು ಪಂಪನು ಕನ್ನಡದ ಮೇರು ಕವಿ ಇವನು ರಾಷ್ಟ್ರಕೂಟರ ಸಾಮಂತ ವೇಮಲವಾಡ ಚಾಲುಕ್ಯ ಅರಸ 2ನೇಯ ಅರಿಕೇಸರಿಯ ಆಸ್ಥಾನದಲ್ಲಿದ್ದನು.

ರಾಷ್ಟ್ರಕೂಟರ ಕಲೆ ಮತ್ತು ವಾಸ್ತುಶಿಲ್ಪ:–

- ರಾಷ್ಟ್ರಕೂಟರು ಮಹಾನಿರ್ಮಾಪಕರು ಕಲಾರಾಧಕರು ಆಗಿದ್ದು ವಾಸ್ತು ಶಿಲ್ಪಕ್ಷೇತ್ರದಲ್ಲಿ ಅದ್ವಿತಿಯ ಸಾಧನೆಯನ್ನು ಮಾಡಿದ್ದಾರೆ. ಎಲ್ಲೋರ ಮತ್ತು ಎಲಿಫೆಂಟಾಗಳು ಅವರ ಪ್ರಮುಖ ಕಲಾಕೇಂದ್ರಗಾಳಾಗಿವೆ.

1. ಗುಹ ದೇವಾಲಯಗಳು:– ಬಾದಾಮಿ ಚಾಲುಕ್ಯರಂತೆಯೇ ರಾಷ್ಟ್ರಕೂಟ ರಾಜರು ಕಲ್ಲಿನಲ್ಲಿ ಕೊರೆದ ಗುಹ ದೇವಾಲಯಗಳನ್ನು ಸಕ್ರಿಯವಾಗಿ ಪೋಷಿಸಿದರು ರಾಷ್ಟ್ರಕೂಟರು ಹಿಂದೂ ಗುಹೆಗಳು ಮತ್ತು ಜೈನ ಗುಹಾಲಯಗಳೆಂದು ವಿಂಗಡಿಸಿದ್ದರು.
2. ಎಲ್ಲೋರ (ದಿ ವರ್ಲ್ಡ್ ಹೆರಿಟೇಜ ಸೈಟ್)
   ಎಲ್ಲೋರದಲ್ಲಿ ರಾಷ್ಟ್ರಕೂಟರು 18 ಬ್ರಾಹ್ಮನಿಕಲ್ 4 ಜೈನ ಗುಹೆಗಳು ಸೇರಿದಂತೆ ಒಟ್ಟು 34 ಗುಹಾಂತರ ದೇವಾಲಯಗಳಿವೆ.

ಕೈಲಾಸನಾಥ ದೇವಾಲಯ (ಕ್ರಿ.ಶ – 770):– ಇದು ಎಲ್ಲೋರದಲ್ಲಿ ರಾಷ್ಟ್ರಕೂಟರು ನಿರ್ಮಿಸಿದ ಗುಹಾಲಯಗಳಲ್ಲಿ ಅತ್ಯುತ್ತಮವಾದುದಾಗಿದೆ.

– 1 ಕೃಷ್ಣ ಇದರ ನಿರ್ಮಾಪಕರಾಗಿದ್ದಾರೆ.
– ಇದು "ಅದ್ಭುತ ಚಮತ್ಕಾರದ ಭವ್ಯ ಸೃಷ್ಟಿಯಾದ ಕೈಲಾಸನಾಥ ದೇವಾಲಯವು ಪ್ರಪಂಚದ ಮಹಾ ಅದ್ಭುತಗಳಲ್ಲಿ ಒಂದು" ಎಂದು ವಿ. ಎಸ್ಮಿತ ರವರು ಹೇಳಿದ್ದಾರೆ.

- ದಶಾವತಾರ ಗುಹೆ:– ಇದು 15ನೇ ಗುಹೆಯಾಗಿದೆ. ಇದು ಎರಡು ಅಂತಸ್ತುಗಳಿಂದ ಕೂಡಿದ್ದು ಗುಹೆಯ ನಡುವೆ ಒಂದು ಏಕಶಿಲಾ ಮಂಟಪವಿದೆ.
- ಈ ಗುಹೆಯಲ್ಲಿ ದಂತಿ ದುರ್ಗನ ಶಾಸನ ಕಂಡುಬರುತ್ತದೆ
- ಈ ಗುಹೆಯಲ್ಲಿ ಗಿರಿಜಾ ಕಲ್ಯಾಣ, ನಟರಾಜ, ಅರ್ಧನಾರೀಶ್ವರ, ತ್ರಿವಿಕ್ರಮನ ಶಿಲ್ಪಗಳಿವೆ.

ರಾಮೇಶ್ವರ ಗುಹೆ:– ಇಲ್ಲಿ ತ್ರಿಭಂಗ ಅಭಂಗ ಮಕರ ಕಾಳಿ ಎಂಬ ಶಿಲ್ಪಿಗಳಿವೆ.

- ಇಂದ್ರಸಭಾ:– ಇದು 32ನೇ ಗುಹೆ ಇದು ಜೈನ ಗುಹೆ ಎಲ್ಲೋರದಲ್ಲಿರುವ ಅತ್ಯಂತ ಸುಂದರವಾದ ಜೈನ ಕಲಾಕೃತಿಯಾಗಿದೆ.

- **ಎಲಿಫೆಂಟಾ:–**

– ಬಾಂಬೆಯಿಂದ 6 ಮೈಲಿ ದೂರದಲ್ಲಿದೆ. ಇದರ ಮೊದಲ ಹೆಸರು ಗೋದಕಪುರಿ
– ಪೋರ್ಚುಗೀಸರು ಇಲ್ಲಿ ದೊಡ್ಡ ಆನೆಕಾರಾದ ಬಂಡೆಯನ್ನು ಕಂಡು ಇದನ್ನು ಎಲಿಫೆಂಟಾ ಎಂದು ಕರೆದರು.
– ಇಲ್ಲಿ ಗಿರಿಜಾಕಲ್ಯಾಣ ನಟರಾಜ ಅರ್ಧನಾರೀಶ್ವರ ಗಂಗಾಧರ ಶಿವ ಶಿವಯೋಗಿಶ್ವರ ವಿಗ್ರಹಗಳನ್ನು ಕೆತ್ತಲಾಗಿದೆ.

ರಚನಾತ್ಮಕ ದೇವಾಲಯಗಳು:– ಐಹೊಳೆ ಪಟ್ಟದಕಲ್ಲು ಕುಕ್ಕನೂರು (ನವಲಿಂಗೇಶ್ವರ) ರೋಣ (ಸೋಮಶ್ವರ) ಸರೇಗಲ್ ಸವದತ್ತಿ ಸೋಗಲ ಹೀಗೆ ಮುಂತಾದ ರಚನಾತ್ಮಕ ದೇವಾಲಯಗಳನ್ನು ನಿರ್ಮಿಸಿದ್ದಾರೆ.

- ಬಸದಿಗಳು:– ರಾಷ್ಟ್ರಕೂಟರು ಕೆಲವು ಜೈನ ಬಸದಿಗಳನ್ನು ನಿರ್ಮಿಸಿದ್ದಾರೆ.
- ನರೇಗಲ್‌ನತ್ರಿಕೂಟ ಬಸದಿ ಕರ್ನಾಟಕದಲ್ಲೇ ಅತೀ ದೊಡ್ಡ ಬಸದಿಯಾಗಿದೆ.



ಮೈಸೂರುಸಂಸ್ಥಾನ-1399



❖ ಇವರು ಮೊದಲು ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿ ಆಳ್ವಿಕೆ ಮಾಡುತ್ತಿದ್ದರು.

❖ ಮೂಲ ಹೆಸರು --------- ಮಹಿಷಿ ಮಂಡಲ

❖ ರಾಜಧಾನಿ ----------- ಶ್ರೀರಂಗಪಟ್ಟಣ

❖ ರಾಜ್ಯಲಾಂಛನ --------ಗಂಡಭೇರುಂಡ / ಗರುಡ

❖ ಸ್ಥಾಪಕರು--------- ಯದುರಾಯ ಮತ್ತು ಕೃಷ್ಣರಾಯ

ಯದುರಾಯ

❖ ಮೂಲಪ್ರದೇಶವಾದ ದ್ವಾರಕೆಯಿಂದ ಶ್ರೀಕೃಷ್ಣನ ವಿಗ್ರಹವನ್ನು ಉಡುಪಿಯಲ್ಲಿ ಪ್ರತಿಷ್ಠಾಪಿಸಲು ಹೊರಟಾಗ ಮಾರ್ಗಮಧ್ಯದಲ್ಲಿರುವ ಹದಿನಾಡಿನ ರಾಜಕುಮಾರಿಯಾದ ಚಿಕ್ಕದೇವರಸಿಯನ್ನು ಮದುವೆಯಾಗಿ ಹದಿನಾಡಿನ ಮುಖ್ಯಸ್ಥನಾದನು.

❖ ಈತನಿಂದಲೇ ಮೈಸೂರು ಸಂಸ್ಥಾನಕ್ಕೆ ಒಡೆಯನೆಂಬ ಹೆಸರು ಬಂದಿತು.

❖ ಈತನ ವಂಶ : ಯದುವಂಶ ಅಥವಾ ಕೃಷ್ಣವಂಶ

❖ ಈತನ ರಾಜಧಾನಿ : ಶ್ರೀರಂಗಪಟ್ಟಣ

ರಾಜಒಡೆಯರ್

❖ ಪ್ರಥಮಾರ್ಧದ ಪ್ರಸಿದ್ಧ ಅರಸನಾಗಿದ್ದು ವಿಜಯನಗರ ಸಾಮ್ರಾಜ್ಯದಿಂದ ಮೈಸೂರು ಸಂಸ್ಥಾನ ಬೇರ್ಪಡಿಸಿ ಸ್ವತಂತ್ರ ರಾಜ್ಯ ಕಟ್ಟಿದನು.

❖ ಮೈಸೂರಿನಲ್ಲಿ ಮಹಾನವಮಿ ಅಥವಾ ದಸರಾ ಉತ್ಸವ ಆರಂಭಿಸಿದನು.

ದೇವಾಲಯಗಳು

- ❖ ಮೈಸೂರಿನಲ್ಲಿ----- ಚಾಮುಂಡೇಶ್ವರಿ
- ❖ ಮೈಸೂರಿನಲ್ಲಿ ------ಲಕ್ಷ್ಮೀರಮಣಸ್ವಾಮಿ
- ❖ ಶ್ರೀರಂಗಪಟ್ಟಣಲ್ಲಿ--- ಶ್ರೀರಂಗನಾಥವಿಠಲ
- ❖ ನಂಜನಗೂಡಿನಲ್ಲಿ ----ನಂಜುಂಡೇಶ್ವರ ದೇವಸ್ಥಾನ ನಿರ್ಮಿಸಿ,
- ❖ ಮೇಲುಕೋಟೆಯ-------ಚಲುವನಾರಾಯಣಸ್ವಾಮಿ

ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿಸಿದನು.

ದೊಡ್ಡದೇವರಾಜ ಒಡೆಯರ್

➔ ಚಾಮುಂಡೇಶ್ವರಿ ದೇವಾಲಯಕ್ಕೆ ಮೆಟ್ಟಿಲು ಹಾಕಿಸಿ, ಮಧ್ಯದಲ್ಲಿ ನಂದಿವಿಗ್ರಹ ಪ್ರತಿಷ್ಠಾಪಿಸಿದನು.

೬ನೇ ಚಾಮರಾಜ ಒಡೆಯರ್

➔ ಈತನು ಶೈವಮತ ಪ್ರಚಾರ ಮಾಡಿದ್ದಕ್ಕಾಗಿ ಷಡ್ದರ್ಶನ ಪ್ರತಿಷ್ಠಾಪಕ ಎಂಬ ಬಿರುದು ಪಡೆದನು.

➔ ಈತನ ಕಾಲದಲ್ಲಿ ಆಡಳಿತದ ಅನುಕೂಲಕ್ಕಾಗಿ ದಳವಾಯಿ ಹುದ್ದೆ ಸೃಷ್ಟಿಯಾಯಿತು.

➔ ಈತನ ಮತ್ತು ಮೈಸೂರಿನ ಮೊದಲ ದಳವಾಯಿ - ಬೆಟ್ಟದರಸು.

೧ ನೇ ಕಂಠೀರವ ನರಸರಾಜ ಒಡೆಯರ್

➔ ಈತನು ಕತ್ತಿವರಸೆ ಕಾಳಗದಲ್ಲಿ ಅತ್ಯಂತ ಪರಿಣಿತನಾಗಿದ್ದಕ್ಕಾಗಿ ರಣಧೀರ ಎಂಬ ಬಿರುದು ಪಡೆದ.

➔ ಈತನು ಕಂಠೀರವ ಪಣ ಎಂಬ ನಾಣ್ಯವನ್ನು ಚಲಾವಣೆಗೆ ತಂದನು.

➔ ರೈತರ ನೀರಾವರಿಗಾಗಿ ಬಂಗಾರದೊಡ್ಡಿ ಕಾಲುವೆ ನಿರ್ಮಿಸಿದನು.

ಚಿಕ್ಕದೇವರಾಜ ಒಡೆಯರ್ (೧೬೭೧-೧೭೦೪)

➔ ಈತನು ಮೈಸೂರಿನ ಪ್ರಸಿದ್ಧ ಒಡೆಯ.

◈ ದಾಳಿಗಳು

➔ ೧೬೬೭ ರಲ್ಲಿ ಬಿಜಾಪುರದ ರಣದುಲ್ಲಾಖಾನನನ್ನು ಸೋಲಿಸಿದನು.

➔ ೧೬೭೭ ರಲ್ಲಿ ಮರಾಠರ ಪ್ರಸಿದ್ಧ ಅರಸನಾದ ಶಿವಾಜಿಯು ಮೈಸೂರಿನ ಮೇಲೆ ದಾಳಿ ಕೈಗೊಂಡಾಗ ಆತನನ್ನು ಸಂಪೂರ್ಣವಾಗಿ ಸೋಲಿಸಿ ಮೈಸೂರಿನ ಸೈನ್ಯವನ್ನು ಮಹಾರಾಷ್ಟ್ರದ ಗಡಿಯವರೆಗೆ ಮುನ್ನುಗ್ಗಿಸಿದ್ದಕ್ಕಾಗಿ ಮಹಾರಾಷ್ಟ್ರ ಭೂಪಾಲ ಜಾರಿಪು ಮತ್ತು ಅಪ್ರತಿಮ ವೀರ ಎಂಬ ಬಿರುದು ಪಡೆದನು.

➔ ೧೬೮೭ ರಲ್ಲಿ ಔರಂಗಜೇಬನ ಸೇನಾಪತಿಯಾದ ಖಾಸಿಂಖಾನ್ ನಿಂದ ಬೆಂಗಳೂರನ್ನು ಪಡೆದುಕೊಂಡನು. ಆಗ ಔರಂಗಜೇಬ ಈತನಿಗೆ ರಾಜಾಜಗದೇವ ಎಂಬ ಬಿರುದು ನೀಡಿದನು.

❖ ಸಾಧನೆಗಳು

➔ ಆಡಳಿತದ ಅನುಕೂಲಕ್ಕಾಗಿ ಅಠಾರಿ ಕಛೇರಿ ಜಾರಿಗೆ ತಂದನು.

➔ ಬರಿದಾದ ರಾಜಭಂಡಾರವನ್ನು ಶ್ರೀಮಂತಗೊಳಿಸಿದ್ದಕ್ಕಾಗಿ ನವಕೋಟಿ ನಾರಾಯಣ ಎಂಬ ಬಿರುದು ಧರಿಸಿದನು.

➔ ವೈಷ್ಣವ ಮತಪ್ರಚಾರ ಮಾಡಿದ್ದಕ್ಕಾಗಿ ವೈಷ್ಣವ ಮತ ಪ್ರತಿಷ್ಠಾಪಕ ಬಿರುದು ಧರಿಸಿದನು.

➔ ಆಡಳಿತದ ಅನುಕೂಲಕ್ಕಾಗಿ ಬಾರಾಬಲೂತಿ ಪದ್ಧತಿ ಜಾರಿಗೆ ತಂದನು.

➔ ರೈತರ ನೀರಾವರಿಗಾಗಿ ದೊಡ್ಡದೇವರಾಜ ಮತ್ತು ಚಿಕ್ಕದೇವರಾಜ ನಾಲೆಗಳನ್ನು ಆರಂಭಿಸಿದನು.

➔ ಈತನು ಸ್ವತಃ ಸಾಹಿತಿಯಾದ ಒಡೆಯನಾಗಿದ್ದನು.

ಇತರ ಬಿರುದುಗಳು

- ಕರ್ನಾಟಕದ ಚಕ್ರವರ್ತಿ
- ರಾಜರ್ಷಿ
- ಮಹರ್ಷಿ

➔ ಸಾಹಿತ್ಯ :

- ಚಿಕ್ಕದೇವರಾಜ ಒಡೆಯರ್ :
  - ಗೀತಗೋಪಾಲ
  - ಭಾಗವತ
  - ಶೇಷ ಧರ್ಮ
  - ಚಿಕ್ಕದೇವರಾಜ ಭಿನ್ನಪ
  - ಭಾರತ
- ತಿರುಮಲಾರ್ಯ :
  - ಅಪ್ರತಿಮ ವೀರ ಚರಿತೆ(ಲಕ್ಷಣ ಗ್ರಂಥ)

❖ ಚಿಕ್ಕದೇವರಾಜ ವಂಶಾವಳಿ

❖ ದೇವರಾಜ ವಂಶಾವಳಿ

➢ ಸಿಂಗಾರಾರ್ಯ :

❖ ಮಿತ್ರವಿಂದಾ ಗೋವಿಂದ (ಕನ್ನಡದ ಪ್ರಥಮ ನಾಟಕ)

➢ ಸಂಚಿಹೊನ್ನಮ್ಮ :

❖ ಹದಿಬದೆಯ ಧರ್ಮ (ಸಾಂಗತ್ಯ ಕೃತಿ)

➢ ಲಕ್ಷ್ಮೀಶ :

❖ ಜೈಮಿನಿ ಭಾರತ

೨ ನೇ ಕಂಠೀರವ ನರಸರಾಜ ಒಡೆಯರ್

➔ ಈತನು ಕಿವುಡ ಮತ್ತು ಮೂಕನಾದ ಒಡೆಯನಾಗಿದ್ದಕ್ಕಾಗಿ ಮತ್ತೆ ದಳವಾಯಿ ಹುದ್ದೆ ಸೃಷ್ಟಿಯಾಯಿತು.

➔ ಈತನ ಪ್ರಥಮ ದಳವಾಯಿ : ದೇವರಾಜಯ್ಯ

➔ ಈತನ ದ್ವಿತೀಯ ದಳವಾಯಿ : ನಂಜರಾಜ

ನಂಜರಾಜ

➔ ಈತನು ಸರ್ವಾಧಿಕಾರಿ ದಳವಾಯಿ ಆಗಿದ್ದು ರೈತರ ಮೇಲೆ ಅಧಿಕ ತೆರಿಗೆ ಹೇರಿದಾಗ ದಿಂಡಿಗಲ್ಲಿನ ಫೌಜುದಾರನಾಗಿದ್ದ ಹೈದರಾಲಿಯು ನಂಜರಾಜನನ್ನು ಉಚ್ಚಾಟನೆ ಮಾಡಿ ೭ ನೇ ಚಾಮರಾಜ ಒಡೆಯನ ಕಾಲದಲ್ಲಿ ಮೈಸೂರಿನ ಸರ್ವಾಧಿಕಾರಿಯಾದನು.

ಆಧುನಿಕ ಮೈಸೂರಿನ ಇತಿಹಾಸ (೧೭೬೧-೧೯೪೮)

➔ ಈ ಅವಧಿಯ ಮಧ್ಯಭಾಗದಲ್ಲಿ ಹೈದರಲಿ ಮತ್ತು ಟಿಪ್ಪು ಸುಲ್ತಾನ ಆಳ್ವಿಕೆ ಮಾಡಿದರು.

ಮಧ್ಯಂತರ ಮುಸ್ಲಿಮರ ಆಳ್ವಿಕೆ (೧೭೬೧-೧೭೯೯)

➔ ಈ ಅವಧಿಯಲ್ಲಿಯೇ ಬ್ರಿಟಿಷರೊಂದಿಗೆ ಯುದ್ಧಗಳು ಪ್ರಾರಂಭವಾದವು.

➔ ಅವೇ ಆಂಗ್ಲೋ-ಮೈಸೂರು ಯುದ್ಧಗಳು (೧೭೬೭-೧೭೯೯)

ಉದ್ದೇಶ :

➔ ಬ್ರಿಟೀಷರು ಮೈಸೂರು ಸಂಸ್ಥಾನದ ಮೇಲೆ ಹಿಡಿತ ಸಾಧಿಸಲು

1. ಪ್ರಥಮ ಆಂಗ್ಲೋ-ಮೈಸೂರು ಯುದ್ಧ (೧೭೬೭-೬೯)
2. ದ್ವಿತೀಯ ಆಂಗ್ಲೋ-ಮೈಸೂರು ಯುದ್ಧ (೧೭೮೦-೮೪)
3. ತೃತೀಯ ಆಂಗ್ಲೋ-ಮೈಸೂರು ಯುದ್ಧ (೧೭೯೦-೯೨)
4. ೪ ನೇ ಆಂಗ್ಲೋ-ಮೈಸೂರು ಯುದ್ಧ (೧೭೯೯)

ಪ್ರಥಮ ಆಂಗ್ಲೋ-ಮೈಸೂರು ಯುದ್ಧ (೧೭೬೭-೬೯)

ಕಾರಣಗಳು :

1. ಮೈಸೂರಿನ ಮೇಲೆ ಹಿಡಿತ ಸಾಧಿಸಲು
2. ಬ್ರಿಟೀಷರು ಹೈದರಾಬಾದಿನ ನಿಜಾಮನ ಮೇಲೆ ದಾಳಿ ಮಾಡುವ ಮೊದಲು

ಹೈದರನಿಗೆ ಸೈನಿಕ ನೆರವು ಕೇಳಿದರು. ಆಗ ಹೈದರಲಿ ತಿರಸ್ಕರಿಸಿದನು.

ಘಟನೆ :

- ಈ ಯುದ್ಧದಲ್ಲಿ ಬ್ರಿಟೀಷ್ ಸೇನಾಪತಿ ಕರ್ನಲ್ ಸ್ಮಿತ್ ಮತ್ತು ಹೈದರನ ನಡುವೆ ಹಲವು ಕಡೆ ಕದನ ನಡೆಯಿತು.
- ಆಗ ಹೈದರಲಿ ಬ್ರಿಟೀಷರನ್ನು ಸಂಪೂರ್ಣವಾಗಿ ಸೋಲಿಸಿ ಮದ್ರಾಸಿನವರೆಗೆ ಬೆನ್ನಟ್ಟಿದನು. ಆಗ ಸೋತ ಬ್ರಿಟೀಷರು ಒಪ್ಪಂದಕ್ಕೆ ಅಣಿಯಾದರು.
- ಬ್ರಿಟೀಷರ ವಿರುದ್ಧ ಜಯ ಗಳಿಸಿದ ಪ್ರಥಮ ದೇಶೀಯ ಅರಸ : ಹೈದರಲಿ.
- ಮುಕ್ತಾಯದ ಒಪ್ಪಂದ : ೧೭೬೯ ರಲ್ಲಿ ಮದ್ರಾಸ್ ಒಪ್ಪಂದ.

ದ್ವಿತೀಯ ಆಂಗ್ಲೋ-ಮೈಸೂರು ಯುದ್ಧ (೧೭೮೦-೮೪)

ಕಾರಣಗಳು :ಸೋತ ಸೇಡನ್ನು ತೀರಿಸಿಕೊಳ್ಳಲು ಬ್ರಿಟೀಷರ ಹವಣಿಕೆ

1. ಇದೇ ಅವಧಿಯಲ್ಲಿ ಮರಾಠರು ಹೈದರನ ಮೇಲೆ ದಾಳಿಗೆ ಮುಂದಾದಾಗ, ಮದ್ರಾಸ್ ಒಪ್ಪಂದದಂತೆ ಹೈದರನು ಬ್ರಿಟೀಷರ ಸಹಾಯ ಕೇಳಲು ಹೋದನು. ಆಗ ಬ್ರಿಟೀಷರು ತಿರಸ್ಕರಿಸಿದರು. ಇದೆ ಸಂದರ್ಭದಲ್ಲೇ ಭಾರತದಿಂದ ಬ್ರಿಟೀಷರನ್ನು ಸಂಪೂರ್ಣವಾಗಿ ಹೊರದೂಡಲು ಪಣತೊಟ್ಟನು.

<u>ತತ್ ಕ್ಷಣದ ಕಾರಣ :</u>

- ❖ ಫ್ರೆಂಚರ ಮೂಲ ನೆಲೆಯಾದ ಮಾಹೆಯನ್ನು ಬ್ರಿಟೀಷರು ವಶಪಡಿಸಿಕೊಂಡಿದ್ದಕ್ಕಾಗಿ.

<u>ಘಟನೆ :</u>

- ❖ ಬ್ರಿಟೀಷರ ಸೇನಾಪತಿಗಳು : ಕರ್ನಲ್ ಬೇಲಿ ಮತ್ತು ಹೆಕ್ಟರ್ ಮನ್ರೋ
- ❖ ಈ ಯುದ್ಧದಲ್ಲಿ ತಂದೆಯ ಸಹಾಯಕ್ಕಾಗಿ ಟಿಪ್ಪು ಸುಲ್ತಾನ ಭಾಗಿಯಾದನು.

- ಯುದ್ಧ ನಡೆದ ಸ್ಥಳ : ಪೋರ್ಟೋನೋವಾ ಮತ್ತು ಆರ್ಕಾಟ್
- ಪೋರ್ಟೋನೋವಾ ಎಂಬಲ್ಲಿ ಹೈದರಲಿಯು ೧೭೮೧ ರಲ್ಲಿ ಕರ್ನಲ್ ಬೇಲಿಯ ಕೈಯಲ್ಲಿ ಸೋತು, ೧೭೮೨,ಡಿಸೆಂಬರ್ ೭ ರಂದು ಕ್ಯಾನ್ಸರ್ ರೋಗದಿಂದ ಮರಣ ಹೊಂದಿದನು.
- ಆರ್ಕಾಟ್ ಎಂಬಲ್ಲಿ ಟಿಪ್ಪುಸುಲ್ತಾನನು ಹೆಕ್ಟರ್ ಮನ್ರೋನನ್ನು ಸೋಲಿಸಿದನು. ಆದರೆ, ಎರಡೂ ಬಣಗಳಿಗೆ ಅಷ್ಟೇ ಆರ್ಥಿಕ ನಷ್ಟ ಉಂಟಾಗಿದ್ದಕ್ಕಾಗಿ ಒಪ್ಪಂದಕ್ಕೆ ಬಂದರು.

ಮುಕ್ತಾಯದ ಒಪ್ಪಂದ : ೧೭೮೪ ರಲ್ಲಿ ಮಂಗಳೂರು ಒಪ್ಪಂದ.

➔ ಆಗಿದ್ದ ಬ್ರಿಟೀಷ್ ಗವರ್ನರ್ ಜನರಲ್ : ವಾರನ್ ಹೇಸ್ಟಿಂಗ್ಸ್.

ತೃತೀಯ ಆಂಗ್ಲೋ-ಮೈಸೂರು ಯುದ್ಧ (೧೭೯೦-೯೨)

ಕಾರಣಗಳು :

೧. ತಂಜಾವೂರಿನ ರಾಮಚಂದ್ರ ಮೈಸೂರಿನ ಗಡಿಭಾಗದಲ್ಲಿ ಬ್ರಿಟೀಷರ ಸಹಾಯದಿಂದ ಕೋಟೆ ಕಟ್ಟುತ್ತಿದ್ದನು. ಆಗ ಟಿಪ್ಪು ತಂಜಾವೂರಿನ ಮೇಲೆ ದಾಳಿಗೆ ಅಣಿಯಾದನು.

೨. ಪ್ರಥಮಾರ್ಧದಲ್ಲಿ ಟಿಪ್ಪು ಬ್ರಿಟೀಷ್ ಸೇನಾಪತಿ ಜನರಲ್ ಮಡೋಸ್ ನನ್ನು ಸೋಲಿಸಿದನು.

ಘಟನೆ :

➔ ಈ ಸೋಲು ಅವಮಾನಕರ ಎಂದು ತಿಳಿದು ನೇರವಾಗಿ ಕಾರ್ನವಾಲೀಸನು ಸೇನಾ ನೇತೃತ್ವ ವಹಿಸಿಕೊಂಡನು. ಮಳವಳ್ಳಿ ಎಂಬಲ್ಲಿ ಟಿಪ್ಪು ಸಂಪೂರ್ಣವಾಗಿ ಸೋತು, ಶ್ರೀರಂಗಪಟ್ಟಣ ಕೋಟೆಯಲ್ಲಿ ಅಡಗಿ ಕುಳಿತು ಒಪ್ಪಂದಕ್ಕೆ ಬಂದನು.

➔ **ಮುಕ್ತಾಯದ ಒಪ್ಪಂದ** : ೧೭೯೨ ರಲ್ಲಿ ಶ್ರೀರಂಗಪಟ್ಟಣ ಒಪ್ಪಂದ.

➔ **ಕರಾರು** : ಈ ಯುದ್ಧದ ಖರ್ಚಾದ ₹೩.೩೦ ಲಕ್ಷ ಹಣವನ್ನು ಟಿಪ್ಪು ಸುಲ್ತಾನ ಕೊಡುವುದು. ಇಲ್ಲದಿರುವುದರಿಂದ, ಹಣ ಮುಟ್ಟುವವರೆಗೆ ತನ್ನ ಇಬ್ಬರು ಮಕ್ಕಳನ್ನು ಒತ್ತೆಯಾಗಿಟ್ಟನು.

೪ ನೇ ಆಂಗ್ಲೋ-ಮೈಸೂರು ಯುದ್ಧ (೧೭೯೯)

ಕಾರಣಗಳು :

➔ ಬ್ರಿಟೀಷರನ್ನು ಸೋಲಿಸಲು ಪರರಾಷ್ಟ್ರಗಳ ("ಫ್ರಾನ್ಸ್", ರಷ್ಯಾ, ಟರ್ಕಿ, ಪರ್ಷಿಯಾ) ಸಹಾಯ ಕೇಳಿದನು.

ತತ್ ಕ್ಷಣದ ಕಾರಣ :

➔ ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಲು ಟಿಪ್ಪು ನಿರಾಕರಿಸಿದ್ದಕ್ಕಾಗಿ.

ಘಟನೆ :

➔ ಬ್ರಿಟೀಷರ ಸೇನಾಪತಿಗಳಾದ -> ಲಾರ್ಡ್ ವೆಲ್ಲೆಸ್ಲಿ ಮತ್ತು ಜನರಲ್ ಹ್ಯಾರಿಸನ್ ಕೂಡಿಕೊಂಡು ಟಿಪ್ಪುವನ್ನು ಸೋಲಿಸಿದರು.

ಆಗ ಮತ್ತೆ ಟಿಪ್ಪು ಕೋಟೆಯಲ್ಲಿ ಅಡಗಿ ಕುಳಿತಾಗ ೧೭೯೯ ರಲ್ಲಿ ಬ್ರಿಟೀಷರ ಗುಂಡಿಗೆ ಅಸ್ತಂಗತನಾದನು.

➔ ಈತನ ಸಾವಿಗೆ ಕಾರಣನಾದ ಸ್ನೇಹಿತ : ಮೀರ್ ಸಾಧಿಕ್.

ಅಧಿಕಾರ ಹಸ್ತಾಂತರ

➔ ಟಿಪ್ಪು ಸುಲ್ತಾನನ ಮರಣದ ನಂತರ ಬ್ರಿಟೀಷ್ ಅಧಿಕಾರಿ ಲಾರ್ಡ್ ವೆಲ್ಲೆಸ್ಲಿಯು ಮುಮ್ಮಡಿ ಕೃಷ್ಣರಾಜ ಒಡೆಯರ್ ನಿಗೆ ಅಧಿಕಾರ ಬಿಟ್ಟುಕೊಟ್ಟನು.

ಮುಮ್ಮಡಿ ಕೃಷ್ಣರಾಜ ಒಡೆಯರ್ (೧೭೯೯-೧೮೩೧)

➔ ೧೭೯೯ ರಲ್ಲಿ ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕುವುದರ ಮುಖಾಂತರ ಅಧಿಕಾರ ವಹಿಸಿಕೊಂಡನು.

➔ ಮೈಸೂರಿನಲ್ಲಿ ಪ್ರಥಮ ಬ್ರಿಟೀಷ್ ರೆಸಿಡೆಂಟ್ : ಬ್ಯಾರಿಕ್ಲೋಸ್.

➔ ಈತನ ಅವಧಿಯಲ್ಲಿ ಆಡಳಿತದ ಅನುಕೂಲಕ್ಕಾಗಿ ದಿವಾನ್ ಹುದ್ದೆ ಸೃಷ್ಟಿಯಾಯಿತು.

➔ ಈತನ ಮತ್ತು ಮೈಸೂರಿನ ಪ್ರಥಮ ದಿವಾನ : ಪೂರ್ಣಯ್ಯ

ಬಿದನೂರು ದಂಗೆ (೧೮೩೧) :

➔ ರೈತರ ಮೇಲೆ ಅಧಿಕ ತೆರಿಗೆ ಹೇರಿದ್ದಕ್ಕಾಗಿ ರೈತರು ಬಂಡಾಯವೆದ್ದರು.

➔ ಈ ದಂಗೆಯ ನೇತಾರ : ಬೂದಿ ಬಸಪ್ಪ (ಈತನ ಮೂಲ ಹೆಸರು : ಸದರಮಲ್ಲ)

➔ ಈ ದಂಗೆಯನ್ನು ಅಡಗಿಸಲು ಒಡೆಯ ಅಸಮರ್ಥನಾದನು. ಆಗ ಬ್ರಿಟೀಷ್ ಅಧಿಕಾರಿ ವ್ಹಿಲಿಯಂ ಬೆಂಟಿಂಕನು ಇದನ್ನು ಅಡಗಿಸಿ ಒಡೆಯನಿಂದ ಅಧಿಕಾರ ಕಸಿದುಕೊಂಡು ಕಮೀಷನರ್ ಆಳ್ವಿಕೆ ಜಾರಿಗೆ ತಂದನು.

ಕಮೀಷನರ್ ಆಳ್ವಿಕೆ (೧೮೩೧-೧೮೮೧) :

➔ ಬಿದನೂರು ದಂಗೆಯ ನಂತರ ವ್ಹಿಲಿಯಂ ಬೆಂಟಿಂಕನು ಈ ಆಳ್ವಿಕೆ

ಜಾರಿಗೆ ತಂದಿದ್ದು, ೫೦ ವರ್ಷಗಳ ಕಾಲ ಆಳ್ವಿಕೆ ಮಾಡಿದರು.

- ಪ್ರಥಮ : ಕರ್ನಲ್ ಬ್ರಿಕ್ಸ್
- ದ್ವಿತೀಯ : ಕರ್ನಲ್ ಮಾರಿಸನ್
- ತೃತೀಯ : ಮಾರ್ಕ್ಸ್ ಕಬ್ಬನ್
- ೪ ನೇ : ಬೆಂಥೆಯಿಮ್ ಬೌರಿಂಗ್ (ಪ್ರಸಿದ್ಧ)
- ಕೊನೆಯ : ಜೆ.ಡಿ. ಗೋರ್ಡಾನ್

ಮಾರ್ಕ್ಸ್ ಕಬ್ಬನ್ (೧೮೩೪-೧೮೬೧)

➔ ಈತನು ಆಡಳಿತದ ಅನುಕೂಲಕ್ಕಾಗಿ ರಾಜ್ಯವನ್ನು ೪ ಪ್ರಾಂತಗಳಾಗಿ ವಿಂಗಡಿಸಿದನು.

➔ ೧. ಅಷ್ಟಗ್ರಾಮ

೨. ನಗರ

೩. ಚಿತ್ರದುರ್ಗ

೪. ಬೆಂಗಳೂರು

➔ ರಾಜಧಾನಿಯನ್ನು ಮೈಸೂರಿನಿಂದ ಬೆಂಗಳೂರಿಗೆ ವರ್ಗಾಯಿಸಿದನು.

➔ ೧೮೫೯ ರಲ್ಲಿ ಜೋಲಾರಪೇಟದಿಂದ ಬೆಂಗಳೂರಿನವರೆಗೆ ರೈಲುಮಾರ್ಗ ಹಾಕಿಸಿದನು (ಕರ್ನಾಟಕದ ಪ್ರಥಮ ರೈಲುಮಾರ್ಗ).

➔ ಹುಜೂರ್ ಅದಾಲತ್ ಕೋರ್ಟ್ ಆರಂಭಿಸಿದನು.

<u>**ಬೆಂಥೆಯಿಮ್ ಬೌರಿಂಗ್ (೧೮೬೧-೧೮೭೦)**</u>

➔ ಈತನು ಮೈಸೂರಿನ ಪ್ರಸಿದ್ಧ ಕಮಿಷನರ್.

➔ ಆಡಳಿತದ ಅನುಕೂಲಕ್ಕಾಗಿ ರಾಜ್ಯವನ್ನು ೩ ಪ್ರಾಂತಗಳಾಗಿ ವಿಂಗಡಿಸಿದನು.

➔ ೧. ಪಟ್ಟಣಗ್ರಾಮ

೨. ನಗರ

೩. ಬೆಂಗಳೂರು

- ಹುಜೂರ್ ಅದಾಲತ್ ಕೋರ್ಟ್ ರದ್ದುಪಡಿಸಿದನು.
- Indian Pinal Code & Criminal Processer Code (IPC & CRPC) ಜಾರಿಗೆ ತಂದನು.
- ೧೮೬೨ ರಲ್ಲಿ ಪ್ರಥಮ ಪುರಸಭೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದನು.
- ೧೮೬೩ ರಲ್ಲಿ ಇನಾಮ ಕಮೀಷನ್ ಜಾರಿಗೆ ತಂದನು(ಧಾರ್ಮಿಕ ದಾನದತ್ತಿ).
- ೧೮೬೪ ರಲ್ಲಿ ಆಸ್ತಿಗಳ ಕಡ್ಡಾಯ ನೋಂದಣಿ ಕಾಯ್ದೆ ಜಾರಿಗೆ ತಂದನು.
- ಬೆಂಗಳೂರಿನಲ್ಲಿ ಸೆಂಟ್ರಲ್ ಕಾಲೇಜು ಮತ್ತು ಮ್ಯೂಜಿಯಂ ಸ್ಥಾಪಿಸಿದನು.
- ಬೆಂಗಳೂರಿನಲ್ಲಿ ಲಾಲ್ ಬಾಗ್ ಅನ್ನು ಪುನರ್ ನಿರ್ಮಿಸಿದನು.

➔ ಅಠಾರಾ ಕಛೇರಿಗಳ ಕಟ್ಟಡ ನಿರ್ಮಿಸಿದನು. ಇದೇ ಇಂದಿನ ಹೈಕೋರ್ಟ್ ಆಗಿದೆ.

ಮೈಸೂರಿನ ಕೊನೆಯ ಕಮೀಷನರ್ : ಜೆ.ಡಿ. ಗೋರ್ಡಾನ್.

➔ ಮೈಸೂರು ಸಂಸ್ಥಾನದ ಪುನರ್ ಹಸ್ತಾಂತರ

➔ ಮೈಸೂರು ಒಡೆಯರ ವಿಶೇಷ ಪ್ರಯತ್ನದ ಫಲವಾಗಿ ೧೮೮೧ ರಲ್ಲಿ ಲಾರ್ಡ್ ರಿಪ್ಪನ್ ೧೦ ನೇ ಚಾಮರಾಜ ಒಡೆಯರಿಗೆ ಅಧಿಕಾರ ಹಸ್ತಾಂತರಿಸಿದನು.

➔ **ದಿವಾನರ ಆಡಳಿತ :**

೧೦ ನೇ ಚಾಮರಾಜ ಒಡೆಯರ್ (೧೮೮೧-೧೮೯೫)

*** ಇವರ ಕಾಲದ ದಿವಾನರು :**

೧. ದಿವಾನ್ ಸಿ. ರಂಗಾಚಾರ್ಲು (೧೮೮೧-೮೩)

೨. ಕೆ. ಶೆಷಾದ್ರಿ ಅಯ್ಯರ್ (೧೮೮೩-೧೯೦೨)

ದಿವಾನ್ ಸಿ. ರಂಗಾಚಾರ್ಲು (೧೮೮೧-೮೩)

- ➔ ಬ್ರಿಟೀಷ್ ಕಾನೂನು ನಂತರ ಪ್ರಥಮ ದಿವಾನ.
- ➔ ೧೮೮೧ ಅಕ್ಟೋಬರ್ ೭ ರಂದು ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದನು.
- ➔ ೧೮೮೨ ರಲ್ಲಿ ಬೆಂಗಳೂರು-ಮೈಸೂರು ರೈಲು ಪ್ರಾರಂಭ.
- ➔ ಬೆಂಗಳೂರು-ತಿಪಟೂರು ರೈಲು ಮಾರ್ಗ ನಿರ್ಮಾಣ.
- ➔ ೧೮೮೨ ರಲ್ಲಿ ಮೈಸೂರಿನಲ್ಲಿ ಮಹಾರಾಣಿ ಹೈಸ್ಕೂಲು ಸ್ಥಾಪನೆ.

ಕೆ. ಶೆಷಾದ್ರಿ ಅಯ್ಯರ್ (೧೮೮೩-೧೯೦೨)

- ➔ ವಾಣಿವಿಲಾಸ ಸಾಗರ ನಿರ್ಮಾಣ (ಕರ್ನಾಟಕದ ಪ್ರಥಮ ಅಣೆಕಟ್ಟು)

➔ ೧೯೦೨ ರಲ್ಲಿ ಶಿವನಸಮುದ್ರ ಜಲವಿದ್ಯುತ್ ಕೇಂದ್ರ ಸ್ಥಾಪನೆ.

➔ ೧೮೯೧ ರಲ್ಲಿ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆ ಆರಂಭ.

➔ ಬ್ರಿಟೀಷರ ಅಂಚೆ ವ್ಯವಸ್ಥೆ ಸ್ಥಾಪನೆ.

➔ ಸರಕಾರಿ ನೌಕರರಿಗೆ ಜೀವವಿಮಾ ಪದ್ಧತಿ ಆರಂಭಿಸಿದನು.

➔ ಮೈಸೂರಿನಲ್ಲಿ ಓರಿಯಂಟಲ್ ಲೈಬ್ರರಿಯ ಸ್ಥಾಪನೆ.

➔ ೮ ವರ್ಷದ ಹೆಣ್ಣುಮಕ್ಕಳಿಗೆ ಮದುವೆ ಮಾಡದಂತೆ ನಿರ್ಬಂಧ ಹೇರಿದನು.

➔ ೧೮೯೨ ರಲ್ಲಿ ಶ್ರೀಗಂಧ ಮತ್ತು ತೇಗದ ಹಳೆಅರಮನೆ ನಿರ್ಮಿಸಿದನು.

ನಾಲ್ವಡಿ ಕೃಷ್ಣರಾಜ ಒಡೆಯರ್ (೧೯೦೨-೧೯೪೦)

➔ ೧೯೧೬ ರಲ್ಲಿ ಕಾಶಿ ವಿಶ್ವವಿದ್ಯಾಲಯದ ಕುಲಪತಿ.

➔ ಇವರ ಕಾಲದ ದಿವಾನರು :

೧. ಪಿ.ಎನ್.ಕೃಷ್ಣಮೂರ್ತಿ (೧೯೦೨-೧೯೦೬)

೨. ವ್ಹಿ.ಪಿ.ಮಾಧವರಾವ್ (೧೯೦೬-೧೯೦೯)

೩. ಟಿ.ಆನಂದರಾವ್ (೧೯೦೯-೧೯೧೧)

೪. ಸರ್.ಎಮ್.ವಿಶ್ವೇಶ್ವರಯ್ಯ (೧೯೧೨-೧೯೧೮)

೫. ಕಾಂತರಾಜ ಅರಸ್ (೧೯೧೮-೧೯೨೨)

೬. ಸರ್. ಬ್ಯಾನರ್ಜಿ (೧೯೨೨-೨೬)

೭. ಸರ್. ಮಿರ್ಜಾ಼ಇಸ್ಮಾಯಿಲ್ (೧೯೨೬-೧೯೪೦)

ಪಿ.ಎನ್.ಕೃಷ್ಣಮೂರ್ತಿ (೧೯೦೨-೧೯೦೬)

➔ ೧೯೦೫ ರಲ್ಲಿ ಬೆಂಗಳೂರಿನಲ್ಲಿ ಭಾರತೀಯ ವಿಜ್ಞಾನ ಸಂಸ್ಥೆ ಸ್ಥಾಪನೆ.

➔ ೧೯೦೪ ರಲ್ಲಿ ಸಹಕಾರಿ ಸಂಘಗಳ ಕಾಯ್ದೆ ಜಾರಿ.

➔ ಸ್ಥಳೀಯ ಸ್ವಯಂ ಸಂಘಗಳ ಸ್ಥಾಪನೆ.

ವ್ಹಿ.ಪಿ.ಮಾಧವರಾವ್ (೧೯೦೬-೧೯೦೯)

➔ ೧೯೦೮ ರಲ್ಲಿ ಪತ್ರಿಕಾ ನಿಯಂತ್ರಣ ಕಾಯ್ದೆ ಜಾರಿಗೆ.

➔ ಪಶುಸಂಗೋಪನಾ ಇಲಾಖೆ ಆರಂಭ.

➔ ಬೆಂಗಳೂರಿನಲ್ಲಿ ಕೇಂದ್ರ ಸಹಕಾರಿ ಬ್ಯಾಂಕ್ ಸ್ಥಾಪನೆ.

ಟಿ.ಆನಂದರಾವ್ (೧೯೦೯-೧೯೧೧)

➔ ೧೯೧೦ ರಲ್ಲಿ ಹೊಸ ಅರಮನೆ ನಿರ್ಮಾಣ(ಖರ್ಚು : ೪೨,೪೭,೯೧೨ ರೂ.)

ಸರ್.ಎಮ್.ವಿಶ್ವೇಶ್ವರಯ್ಯ (೧೯೧೨-೧೯೧೮)



➔ ಕನ್ನಂಬಾಡಿ ಅಣೆಕಟ್ಟೆಗೆ ಅಡಿಗಲ್ಲು(೧೯೧೧).

➔ ಹೆಬ್ಬಾಳದಲ್ಲಿ ಕೃಷಿ ಶಾಲೆ ಆರಂಭ.

➔ ಮೈಸೂರು ಸಮೀಪ ಸರಕಾರಿ ಕೃಷಿ ಕೇಂದ್ರ ಸ್ಥಾಪನೆ.

➔ ಬೆಂಗಳೂರಿನಲ್ಲಿ ಸರಕಾರಿ ಇಂಜಿನೀಯರಿಂಗ್ ಕಾಲೇಜು ಸ್ಥಾಪನೆ.

➔ ಮೈಸೂರಿನಲ್ಲಿ ಚಾಮರಾಜ ತಾಂತ್ರಿಕ ಕಾಲೇಜು ಸ್ಥಾಪನೆ.

➔ ೧೯೧೫ ರಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತು ಸ್ಥಾಪನೆ.

➔ ೧೯೧೬ ರಲ್ಲಿ ಮೈಸೂರು ವಿಶ್ವವಿದ್ಯಾಲಯ ಮತ್ತು ಮೈಸೂರು ಬ್ಯಾಂಕ್ ಸ್ಥಾಪನೆ.

ಕಾರ್ಖಾನೆಗಳು :

❖ ಭದ್ರಾವತಿ - ಕಬ್ಬಿಣ ಮತ್ತು ಉಕ್ಕು

❖ ಮೈಸೂರು - ಗಂಧದ ಎಣ್ಣೆ

❖ ಬೆಂಗಳೂರು - ಸರ್ಕಾರಿ ಸಾಬೂನು

❖ ಮೈಸೂರು - ಚರ್ಮ ಹದಮಾಡುವ ಕಾರ್ಖಾನೆ

❖ ಮೈಸೂರು ಚೇಂಬರ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರೀಸ್ ಹಾಲ್ ಸ್ಥಾಪಿಸಿದರು.

➔ ಇವರನ್ನು ಆಧುನಿಕ ಮೈಸೂರಿನ ಶಿಲ್ಪಿ ಎಂದು ಕರೆಯುತ್ತಾರೆ.

➔ ಆರ್ಥಿಕ ಯೋಜನೆಗಳ ಪಿತಾಮಹನೆಂದು ಕರೆಯುವರು.

ಕಾಂತರಾಜ ಅರಸ (೧೯೧೮-೧೯೨೨)

➔ ಪ್ರಥಮ ಹಿಂದುಳಿದ ವರ್ಗದ ದಿವಾನ.

➔ ಹಿಂದುಳಿದವರಿಗೆ ಮೀಸಲಾತಿ ಕೊಡುವುದಕ್ಕಾಗಿ 1917 ರಲ್ಲಿ ಮಿಲ್ಲರ್ ಕಮಿಷನರ್ ರಚನೆ.

➔ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಯಲ್ಲಿ ಉತ್ಪಾದನೆ ಆರಂಭ.

ಸರ್. ಬ್ಯಾನರ್ಜಿ (೧೯೨೨-೨೬)

➔ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಪ್ರಾರಂಭ.

➔ ಬೆಂಗಳೂರಿನಲ್ಲಿ ಅಫೆಕ್ಸ ಬ್ಯಾಂಕ್ ಸ್ಥಾಪನೆ.

ಸರ್. ಮಿರ್ಜಾ ಇಸ್ಮಾಯಿಲ್ (೧೯೨೬-೧೯೪೦)

➔ ಭದ್ರಾವತಿ : ಉಕ್ಕು, ಸಿಮೆಂಟ ಕಾಗದ ಕಾರ್ಖಾನೆ.

➔ ಬೆಂಗಳೂರು : ಪಿಂಗಾಣಿ ಮತ್ತು ಗಾಜಿನ ಕಾರ್ಖಾನೆ.

➔ ಮಂಡ್ಯ : ಸಕ್ಕರೆ ಕಾರ್ಖಾನೆ.

➔ ಶ್ರವಣಬೆಳಗೊಳ : ರಾಸಾಯನಿಕ ಮತ್ತು ಗೊಬ್ಬರ ಕಾರ್ಖಾನೆ.

➔ ಶಿವಮೊಗ್ಗ : ಬೆಂಕಿ ಪೆಟ್ಟಿಗೆ ಕಾರ್ಖಾನೆ.

➔ ಬೆಂಗಳೂರು : ಹಿಂದೂಸ್ಥಾನ ಏರೋನಾಟಿಕ್ಸ ಲಿಮಿಟೆಡ್

➔ ಲಂಡನ್ನಿನಲ್ಲಿ ನಡೆದ ಪ್ರಥಮ ದುಂಡು ಮೇಜಿನ ಸಭೆಯಲ್ಲಿ ಭಾಗಿ.

➔ ಇವರ ಕಾಲದಲ್ಲಿನ ಕಹಿ ಘಟನೆಗಳು :

೧. ೧೯೨೮ ರಲ್ಲಿ ಸುಲ್ತಾನ ಪೇಟೆಯ ಗಣಪತಿ ಘರ್ಷಣೆ.

೨. ೧೯೩೮ ರಲ್ಲಿ ವಿದುರಾಶ್ವತ ದುರಂತ ಸಂಭವಿಸಿತು.

ಜಯಚಾಮರಾಜ ಒಡೆಯರ್ (೧೯೪೦-೪೮)

➔ ಈತನು ಮೈಸೂರಿನ ಕೊನೆಯ ಒಡೆಯ.

➔ ಇವರ ಕಾಲದ ದಿವಾನರು :

೧. ಎನ್. ಮಾಧವರಾವ್

➔ ಭದ್ರಾ ಜಲಾಶಯ ಯೋಜನೆ & ಶರಾವತಿ ಜಲವಿದ್ಯುತ್ ಕೇಂದ್ರ ಸ್ಥಾಪನೆ.

೨. ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ 1948

➔ ಇವನು ಕೊನೆಯ ದಿವಾನ

➔ ೧೯೪೯ ರಲ್ಲಿ ದಿವಾನ ಹುದ್ದೆ ರದ್ದು.

➔ ಮೈಸೂರು ಭಾರತದ ಒಕ್ಕೂಟಕ್ಕೆ ಸೇರ್ಪಡೆ.

ಜ್ಞಾನಸೌರಭ

ಸಿದ್ದಲಿಂಗೇಶ್ ಮುಳ್ಳಾಳ್

ಪ್ರಕಾಶ್ ಬಿಲ್ಲವ

ಬ್ರಹ್ಮಾನಂದ ಬಡಿಗೇರ

ಮಹೇಂದ್ರಗೌಡ

ಶೃತಿ ಆರ್

ಶ್ರೀನಿವಾಸ ಹೆಚ್ ಎನ್

ಲೋಕೇಶ್ ಬಿ

ಶ್ರೀನಿವಾಸ ಹೆಚ್ ಎನ್
ರಾಜ್ಯಶಾಸ್ತ್ರ
ಉಪನ್ಯಾಸಕರು
ಸ/ಪ/ಪೂ/ಕಾಲೇಜು
ಬರೂರು, ಸಾಗರ,
ಶಿವಮೊಗ್ಗ